ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಅಕ್ಟೋಬರ್ 19 ಬುಧವಾರ 2022

ಸಂಪುಟ: 43 | ಸಂಚಿಕೆ: 183 | ಪುಟಗಳು: 10

ದೂರವಾಣಿ: 2496520, 2496521, 2496526, 2496527, 2496528,
ಜಾಹೀರಾತು: 2496522, 2496523, ನಗರ ಕಚೇರಿಗಳು: ಕೆ.ಆರ್. ಸರ್ಕಲ್,
ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com
website: www.mysurumithra.com

₹4



ಬಿಚ್ಚು ನುಡಿ
ವಿಕ್ರಂ ಮುತ್ತಣ್ಣ

ಯಾತ್ರೆಯ ಪಾತ್ರ

■ ಪುಟ–4

ಮೈಸೂರು ಅರಮನೆಯ ಕೋಟೆ ಗೋಡೆ ಕುಸಿತ

- ಭಾರೀ ಮಳೆ ಇಲ್ಲವೇ ಸಿಡಿಮದ್ದು ಸಿಡಿತದಿಂದ ಕುಸಿದಿರುವ ಲೆಕ್ಕಚಾರ
- 50 ಮೀ. ಕೋಟೆ ಗೋಡೆ ದುರಸ್ತಿಗೆ ಕ್ರಮ

ಮೈಸೂರು, ಅ.18(ಎಂಟಿವೈ)– ಐತಿಹಾಸಿಕ ಹಾಗೂ ಪ್ರವಾಸಿ ತಾಣವೂ ಆಗಿರುವ ಮೈಸೂರು ಅರಮನೆಯ ಕೋಟೆ ಗೋಡೆ ಕುಸಿದಿದೆ. ಕೋಟೆ ಮಾರಮ್ಮ ದೇವಾಲಯದ ಸಮೀಪ ಸ್ವಲ್ಪ ಭಾಗ ಕುಸಿದಿದ್ದು, ಕೂಡಲೇ ದುರಸ್ತಿ ಕಾರ್ಯ ಆರಂಭಿಸಲಾಗಿದೆ.

ಶತಮಾನಕ್ಕೂ ಹೆಚ್ಚು ಕಾಲದ ಇತಿಹಾಸವುಳ್ಳ ಅರಮನೆಯ ಕೋಟೆ ಅಲ್ಲಲ್ಲಿ ಶಿಥಿಲಗೊಂಡಿದ್ದು, ದುರಸ್ತಿಗೆ ಅರಮನೆ ಮಂಡಳಿ ಈಗಾಗಲೇ ಕ್ರಮ ಕೈಗೊಂಡಿದೆ. ಕೆಲ ದಿನಗಳಿಂದ ಸತತವಾಗಿ ಸುರಿಯುತ್ತಿರುವ ಮಳೆಯಿಂದಾಗಿ ಕೋಟೆ ಗೋಡೆಯ ಕೆಲ ಭಾಗ ಇನ್ನೂ ಶಿಥಿಲಗೊಂಡಿದೆ. ಈಗ ರಕ್ಷಣಾ ಗೋಡೆ ಕುಸಿಯಲು ಮೂರು ಕಾರಣ ಇರಬಹುದು ಎಂದು ಹೇಳಲಾಗುತ್ತಿದೆ. ಸತತ ಮಳೆ, ದಸರಾ ವೇಳೆ ಸಿಡಿಸಿದ ಸಿಡಿಮದ್ದು ಇಲ್ಲವೇ ದುರ್ಬಲಗೊಂಡ ಭಾಗ ಕುಸಿದಿದೆ ಎಂದು ಅಭಿಪ್ರಾಯ ಪಡಲಾಗಿದ್ದು, ಶಿಥಿಲಗೊಂಡಿರುವ ಇತರೆ ಭಾಗವನ್ನು ಗುರುತಿಸಿ, ದುರಸ್ತಿ ಮಾಡಲು ಕ್ರಮ ಕೈಗೊಳ್ಳಲಾಗಿದೆ. ▶ 8ನೇ ಪುಟಕ್ಕೆ



ಕೋಟೆ ಮಾರಮ್ಮ ದೇವಾಲಯದ ಬಳಿ ಅರಮನೆಯ ಕೋಟೆ ಗೋಡೆ ಕುಸಿದಿರುವುದು.



ಕುಸಿದಿರುವ ಭಾಗದಲ್ಲಿ ಟಾರ್ಪಾಲ್ ಮುಚ್ಚಲಾಗಿದೆ.

“ ಯಥಾಸ್ಥಿತಿಯಲ್ಲೇ ದುರಸ್ತಿ

ಶತಮಾನಕ್ಕೂ ಹಳೆಯದಾದ ಕೋಟೆ ಗೋಡೆ ಮಳೆ ಹಾಗೂ ಸಿಡಿಮದ್ದು ಸಿಡಿತದ ಕಂಪನದಿಂದ ಕುಸಿದಿದೆ. ಈ ಹಿಂದೆ ಅರಮನೆ ಮಂಡಳಿ ವತಿಯಿಂದ ಸಿಡಿಮದ್ದು ತಾಲೀಮು ಬೇರೆ ಸ್ಥಳದಲ್ಲಿ ಮಾಡುವಂತೆ ಸೂಚಿಸಲಾಗಿತ್ತು. ನಂತರ ಎರಡು ಬಾರಿ ದಸರಾ ವಸ್ತುಪ್ರದರ್ಶನದ ಆವರಣದ ಪಾರ್ಕಿಂಗ್ ಸ್ಥಳದಲ್ಲಿ ನಡೆಸಲಾಗಿತ್ತು. ಅರಮನೆ ಕೋಟೆ ಗೋಡೆ ದುರಸ್ತಿಗೆ ಸಂಬಂಧಿಸಿದಂತೆ ತಿಂಗಳ ಹಿಂದೆಯೇ ಟೆಂಡರ್ ಅಂತಿಮಗೊಳಿಸಲಾಗಿದೆ. ಈಗ ತಕ್ಷಣ 50 ಮೀಟರ್ ದುರಸ್ತಿ ಕಾಮಗಾರಿ ಆರಂಭಿಸಲಾಗಿದೆ. – ಟಿ.ಎಸ್.ಸುಬ್ರಹ್ಮಣ್ಯ, ಉಪನಿರ್ದೇಶಕ, ಅರಮನೆ ಮಂಡಳಿ

ವಾರದ ಕೆಟ್ಟದಿನ ಸೋಮವಾರ!

ನವದೆಹಲಿ, ಅ.18– ವೀಕೆಂಡ್ ಮುಗಿದ ನಂತರ ಬರುವ ಸೋಮವಾರವನ್ನು ಯಾಕಾದರೂ ಬರುತ್ತೋ ಎಂದು ಶಪಿಸುವವರು ಬಹಳಷ್ಟು ಮಂದಿ ಇದ್ದಾರೆ. ಆದರೆ ಇದೀಗ ಅಚ್ಚರಿ ಎನ್ನುವಂತೆ ಗಿನ್ನಿಸ್ ವರ್ಲ್ಡ್ ರೆಕಾರ್ಡ್ ಸಂಸ್ಥೆಯೂ ಅಧಿಕೃತವಾಗಿ ಸೋಮವಾರವನ್ನು ಕೆಟ್ಟ ದಿನವೆಂದು ಘೋಷಿಸಿದೆ.

ಬಹಳಷ್ಟು ಜನರಿಗೆ ಸೋಮವಾರವು ನೀರಸ ದಿನವಾಗಿದೆ. ಈ ಹಿನ್ನೆಲೆಯಲ್ಲಿ ಗಿನ್ನಿಸ್ ವರ್ಲ್ಡ್ ರೆಕಾರ್ಡ್ ಟ್ವೀಟ್ ಮಾಡಿ, ವಾರದ ಅತ್ಯಂತ ಕೆಟ್ಟ ದಿನದ ದಾಖಲೆಯನ್ನು ನಾವು ಸೋಮವಾರವೆಂದು ಅಧಿಕೃತವಾಗಿ ನೀಡುತ್ತಿದ್ದೇವೆ ಎಂದು ತಿಳಿಸಿದೆ ಇದು ಇದೀಗ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿದೆ.

ಈ ಪೋಸ್ಟ್‌ನ್ನು 4 ಲಕ್ಷಕ್ಕೂ ಅಧಿಕ ಜನರು ಲೈಕ್ ಹಾಗೂ ಕಾಮೆಂಟ್ ಮಾಡಿದ್ದು, ನೆಟ್ಟಿಗರು ವಿಭಿನ್ನ ರೀತಿಯ ಪ್ರತಿಕ್ರಿಯೆಯನ್ನು ನೀಡಿದ್ದಾರೆ.

ಅನ್ನದಾತರಿಗೆ ಕೇಂದ್ರ ಸರ್ಕಾರದ ಉಡುಗೊರೆ; ಗೋಧಿ, ಸಾಸಿವೆಗೆ ಕನಿಷ್ಠ ಬೆಂಬಲ ಬೆಲೆ ಹೆಚ್ಚಳ

ನವದೆಹಲಿ, ಅ.18– ಉತ್ಪಾದನೆ ಮತ್ತು ರೈತರ ಆದಾಯವನ್ನು ಹೆಚ್ಚಿಸುವ ಉದ್ದೇಶದಿಂದ ಮಂಗಳವಾರ ಕೇಂದ್ರ ಸರ್ಕಾರ ಪ್ರಸಕ್ತ ಬೆಳೆ ವರ್ಷದಲ್ಲಿ ಕನಿಷ್ಠ ಬೆಂಬಲ ಬೆಲೆ (ಎಂಎಸ್‌ಪಿ)ಯನ್ನು ಗೋಧಿ ಕ್ವಿಂಟಾಲ್‌ಗೆ 110 ರೂ. ಮತ್ತು ಸಾಸಿವೆಗೆ ಕ್ವಿಂಟಾಲ್‌ಗೆ 400 ರೂ.ಗಳನ್ನು ಹೆಚ್ಚಿಸಿದೆ. ಈ ಮೂಲಕ ಗೋಧಿಯನ್ನು ಕ್ವಿಂಟಾಲ್‌ಗೆ 2,125 ಕೊಟ್ಟು, ಪ್ರತಿ ಕ್ವಿಂಟಾಲ್ ಸಾಸಿವೆಯನ್ನು 5,450 ರೂ. ನೀಡಿ ಖರೀದಿಸಲಾಗುತ್ತದೆ.

ಕಳಪೆ ರಸ್ತೆ ಕಾಮಗಾರಿಗಳಿಂದಾಗುವ ಅಪಘಾತಗಳಿಗೆ ಅಧಿಕಾರಿಗಳೇ ಹೊಣೆ: ಹೆದ್ದಾರಿ ಪ್ರಾಧಿಕಾರ

ನವದೆಹಲಿ, ಅ.18– ಕಳಪೆ ರಸ್ತೆ ಕಾಮಗಾರಿಗಳಿಂದಾಗಿ ಸಂಭವಿಸುವ ಯಾವುದೇ ಮಾರಣಾಂತಿಕ ಅಥವಾ ಗಂಭೀರ ಅಪಘಾತಗಳಿಗೆ ಅಧಿಕಾರಿಗಳನ್ನೇ ಹೊಣೆಗಾರರನ್ನಾಗಿ ಮಾಡಲಾಗುವುದು ಎಂದು ಭಾರತೀಯ ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಮಂಗಳವಾರ ಸುತ್ತೋಲೆ ಹೊರಡಿಸಿದೆ. ತಾತ್ಕಾಲಿಕ ಪ್ರಮಾಣಪತ್ರ ನೀಡುವ ಪ್ರಕ್ರಿಯೆಯಲ್ಲಿ ತೊಡಗಿರುವ ಎನ್‌ಎಚ್‌ಎಐ/ಐಇ/ಎಇಯ ಪ್ರತಿನಿಧಿಗಳಿಂದ ಕರ್ತವ್ಯ ಲೋಪವಾದರೆ. ಅವರ ನಿರ್ಲಕ್ಷ್ಯದಿಂದ ಬಳಕೆದಾರರ ಸುರಕ್ಷತೆಗೆ ಧಕ್ಕೆಯಾದರೆ ಅದನ್ನು ಪ್ರಾಧಿಕಾರ ಗಂಭೀರವಾಗಿ ಪರಿಗಣಿಸಲಿದೆ ಎಂದು ಸುತ್ತೋಲೆಯಲ್ಲಿ ತಿಳಿಸಲಾಗಿದೆ.

ನ.11ಕ್ಕೆ ಬೆಂಗಳೂರಿಗೆ ಪ್ರಧಾನಿ ಮೋದಿ
ಕೆಂಪೇಗೌಡರ 108 ಅಡಿ ಪ್ರತಿಮೆ, ಏರ್‌ಪೋರ್ಟ್‌ನ 2ನೇ ಟರ್ಮಿನಲ್ ಉದ್ಘಾಟನೆ




ಬೆಂಗಳೂರು: ಪ್ರಧಾನಿ ನರೇಂದ್ರ ಮೋದಿಯವರು ನವೆಂಬರ್ 11ರಂದು ಬೆಂಗಳೂರಿಗೆ ಆಗಮಿಸುತ್ತಿದ್ದು, ಅಂದು ಕೆಂಪೇಗೌಡ ಅಂತಾರಾಷ್ಟ್ರೀಯ ವಿಮಾನ ನಿಲ್ದಾಣದ 2ನೇ ಟರ್ಮಿನಲ್ ಉದ್ಘಾಟಿಸುವುದರ ಜೊತೆಗೆ ವಿಮಾನ ನಿಲ್ದಾಣದ ಆವರಣದಲ್ಲಿ ನಿರ್ಮಾಣವಾಗಿರುವ ಕೆಂಪೇಗೌಡರ 108 ಅಡಿ ಎತ್ತರದ ಪ್ರತಿಮೆಯನ್ನು ಅನಾವರಣಗೊಳಿಸಲಿದ್ದಾರೆ. ಈ ಬಗ್ಗೆ ನಿನ್ನೆ ಉನ್ನತ ಶಿಕ್ಷಣ ಸಚಿವ ▶ 8ನೇ ಪುಟಕ್ಕೆ

ಏಳೇ ದಿನದಲ್ಲಿ ಕ್ರಮ, ಪೌತಿ ಖಾತೆ ಲಭ್ಯ

ಬೆಂಗಳೂರು:ರೈತರು ಮತ್ತು ಖಾತೆದಾರರಿಗೆ ಕರ್ನಾಟಕ ಸರ್ಕಾರ ಕಂದಾಯ ಇಲಾಖೆ ಸಿಹಿ ಸುದ್ದಿ ನೀಡಿದೆ.ಕ್ರಯ ಮತ್ತು ಪೌತಿ ಖಾತೆಗಾಗಿ ಇನ್ನುಮುಂದೆ 30 ದಿನಗಳ ಕಾಲ ಕಾಯುವಂತಿಲ್ಲ.7 ದಿನಗಳಿಗೇ ಪೌತಿ ಖಾತೆ ಮಾಡಿಕೊಡಬೇಕೆಂದು ಅಧಿಸೂಚನೆ ಹೊರಡಿಸಲಾಗಿದೆ. ಈ ಹಿಂದೆ ರೈತರು ಹಾಗೂ ಖಾತೆದಾರರು ಪೌತಿ ಖಾತೆ ಪಡೆಯಲು ಅರ್ಜಿ ಸಲ್ಲಿಸಿದ ದಿನದಿಂದ 30 ದಿನಗಳವರೆಗೆ ಕಾಯಬೇಕಿತ್ತು. ಇದಕ್ಕಾಗಿ ತಾಲೂಕು ಕಚೇರಿ ಹಾಗೂ ನಾಡ ಕಚೇರಿಗಳಿಗೆ ಅಲೆಯಬೇಕಿತ್ತು. ಸಾರ್ವಜನಿಕರಿಗೆ ಆಗುತ್ತಿರುವ ಸಮಸ್ಯೆ ನೀಗಿಸಲು ಸರ್ಕಾರ ಮಹತ್ತರ ನಿರ್ಧಾರ ಕೈಗೊಂಡಿದೆ. 30 ದಿನಗಳ ಕಾಲಾವಕಾಶವನ್ನು 7 ದಿನಗಳಿಗೆ ಇಳಿಸಿದೆ.ಕಂದಾಯ ಇಲಾಖೆಯ ಸರ್ಕಾರದ ಅಪರ ಮುಖ್ಯ ಕಾರ್ಯದರ್ಶಿಗಳಾದ ಬಲರಾಮ್, ಅಧಿಸೂಚನೆಯನ್ನು ಹೊರಡಿಸಿದ್ದಾರೆ. ಅ.14 ರಂದು ಮಹತ್ತರ ಆದೇಶ ಜಾರಿಯಾಗಿದೆ.

ಸಂಪುಟ ವಿಸ್ತರಣೆ ವಿಚಾರ: ಈ ವಾರ ದೆಹಲಿಗೆ ಸಿಎಂ



ಬೆಂಗಳೂರು, ಅ.18(ಕೆಎಂಶಿ)–ರಾಜ್ಯ ಸಚಿವ ಸಂಪುಟ ವಿಸ್ತರಣೆಯ ಕುರಿತು ವರಿಷ್ಠರ ಜತೆ ಮಾತುಕತೆ ನಡೆಸಲು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಈ ವಾರ ದೆಹಲಿಗೆ ತೆರಳಲಿದ್ದಾರೆ. ಇಂದು ಗೃಹ ಕಚೇರಿ ಕೃಷ್ಣಾದಲ್ಲಿ ಸುದ್ದಿಗಾರರೊಂದಿಗೆ ಸ್ವತಃ ಮಾತನಾಡಿದ ಮುಖ್ಯಮಂತ್ರಿಗಳು ಈ ವಿಷಯ ತಿಳಿಸಿದರು. ರಾಜ್ಯದಲ್ಲಿ ಈಗ ಜನಸಂಕಲ್ಪ ಯಾತ್ರೆ ನಡೆಯುತ್ತಿದ್ದು,ಈ ಯಾತ್ರೆಯ ಮಧ್ಯೆಯೇ ವರಿಷ್ಠರನ್ನು ಭೇಟಿ ಮಾಡಲು ಸಮಯಾವಕಾಶ ಕೇಳಿದ್ದು, ▶ 8ನೇ ಪುಟಕ್ಕೆ

ಮೈಸೂರಲ್ಲಿ ಇಂದಿನಿಂದ ಎರಡು ದಿನ
ಜೆಡಿಎಸ್ ಸಮಾಲೋಚನಾ ಸಭೆ

- ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಉಪಸ್ಥಿತಿ
- ಮಾಜಿ ಸಿಎಂ ಹೆಚ್.ಡಿ.ಕುಮಾರಸ್ವಾಮಿ ನೇತೃತ್ವ



ಬೆಂಗಳೂರು/ಮೈಸೂರು: ಮುಂದಿನ ವಿಧಾನಸಭೆ ಚುನಾವಣೆಗೆ ಪಕ್ಷವನ್ನು ಸಜ್ಜುಗೊಳಿಸುವುದು, ನವೆಂಬರ್ 1ರಿಂದ ಆರಂಭವಾಗಲಿರುವ ಪಂಚರತ್ನ ರಥಯಾತ್ರೆ, ಪಕ್ಷ ಸಂಘಟನೆ ಸೇರಿದಂತೆ ಪ್ರಮುಖ ಅಂಶಗಳ ಅಜೆಂಡಾ ಇಟ್ಟುಕೊಂಡು ಜಾತ್ಯತೀತ ಜನತಾದಳ ಪಕ್ಷವು ಮೈಸೂರಿನಲ್ಲಿ ಎರಡು ದಿನಗಳ (ಅಕ್ಟೋಬರ್ 19 & 20) ಸಮಾಲೋಚನಾ ಸಭೆಯನ್ನು ಹಮ್ಮಿಕೊಂಡಿದೆ.

ಈ ಬಗ್ಗೆ ಮಾಹಿತಿ ನೀಡಿರುವ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ಈ ಕಾರ್ಯಾಗಾರ ಪಕ್ಷದ ಸಂಘಟನೆ ದೃಷ್ಟಿಯಿಂದ ಅತ್ಯಂತ ಮಹತ್ವದ್ದು. ನಮ್ಮ ಪಕ್ಷದ ನಾಯಕರಿಗೆ ಮುಂದಿನ ▶ 8ನೇ ಪುಟಕ್ಕೆ

ಜೆಡಿಎಸ್ 126 ಅಭ್ಯರ್ಥಿಗಳ ಪಟ್ಟಿ ರೆಡಿ

- ರಾಷ್ಟ್ರೀಯ ಪಕ್ಷಗಳಿಗಿಂತ ಮೊದಲೇ ಪಟ್ಟಿ ಪ್ರಕಟಿಸಲು ತೀರ್ಮಾನ
- 123 ಕ್ಷೇತ್ರಗಳ ಗೆಲ್ಲುವ ಗುರಿ; ಇಂದಿನಿಂದ ಮೈಸೂರಲ್ಲಿ ಕಾರ್ಯಾಗಾರ
- ಸ್ವಂತ ಶಕ್ತಿಯ ಮೇಲೆ ಅಧಿಕಾರ ಹಿಡಿಯಲು ಕಾರ್ಯತಂತ್ರ; ಪಂಚರತ್ನ ರಥಯಾತ್ರೆ ಮೂಲಕ ಜನರಿಗೆ ಪಕ್ಷದ ಧ್ಯೇಯೋದ್ದೇಶ ಮನವರಿಕೆ



ಬೆಂಗಳೂರು, ಅ.18(ಕೆಎಂಶಿ)–ಮುಂಬರುವ ವಿಧಾನಸಭಾ ಚುನಾವಣೆಯಲ್ಲಿ ಸ್ಪರ್ಧೆಗಿಳಿಸಲಿರುವ ಅಭ್ಯರ್ಥಿಗಳ ಪಟ್ಟಿಯನ್ನು ರಾಷ್ಟ್ರೀಯ ಪಕ್ಷಗಳಿಗಿಂತ ಮೊದಲೇ ಜೆಡಿಎಸ್ ಪ್ರಕಟಿಸಲು ಅಣಿಯಾಗಿದೆ. ಪ್ರತಿ ವಿಧಾನಸಭೆ ಚುನಾವಣೆಯ ಸಂದರ್ಭದಲ್ಲೂ ರಾಷ್ಟ್ರೀಯ ಪಕ್ಷಗಳ ಅಭ್ಯರ್ಥಿ ಆಯ್ಕೆ ಅಂತಿಮವಾಗಿ ಪ್ರಕಟಗೊಂಡ ನಂತರ ಜೆಡಿಎಸ್ ಅಭ್ಯರ್ಥಿಗಳ ಪಟ್ಟಿ ಪ್ರಕಟಿಸುವ ಪರಿಪಾಠವಿತ್ತು. ರಾಷ್ಟ್ರೀಯ ಪಕ್ಷಗಳಲ್ಲಿ ಅವಕಾಶ ಸಿಗದವರು ಜೆಡಿಎಸ್ ಆಶ್ರಯಿಸುತ್ತಿದ್ದರು. ಆದರೆ, ಪರಿಸ್ಥಿತಿ ಬದಲಾಗಿದ್ದು, ಮುಂದಿನ ವಿಧಾನಸಭೆ ಚುನಾವಣೆ ಸಿದ್ಧತೆಯಲ್ಲಿ ಜೆಡಿಎಸ್ ಒಂದು ಹೆಜ್ಜೆ ಮುಂದಿದೆ.

ರಾಜ್ಯದ 224 ಕ್ಷೇತ್ರಗಳ ಪೈಕಿ ಈಗಾಗಲೇ 126 ಕ್ಷೇತ್ರಗಳಲ್ಲಿ ಅಭ್ಯರ್ಥಿಗಳ ಆಯ್ಕೆ ಅಂತಿಮಗೊಳಿಸಿದೆ.


ಮೈಸೂರಿನಲ್ಲಿ ನಾಳೆಯಿಂದ ಎರಡು ದಿನಗಳ ಕಾಲ ಚುನಾವಣಾ ಸ್ಪರ್ಧಾಕಾಂಕ್ಷಿಗಳಿಗೆ ಮತ್ತು ಶಾಸಕರಿಗೆ ಕಾರ್ಯಾಗಾರ ಮಾಡಲಾಗುತ್ತದೆ. ಕಾರ್ಯಾಗಾರದಲ್ಲೇ ಅಭ್ಯರ್ಥಿಗಳ ಸಾಮರ್ಥ್ಯ ಒರೆಗೆ ಹಚ್ಚಿ ಸಮರ್ಥರಾದವರನ್ನು ಸ್ಪರ್ಧೆಗಿಳಿಸಲು ಉದ್ದೇಶಿಸಲಾಗಿದೆ. ಚುನಾವಣಾ ತಂತ್ರಗಾರಿಕೆ ಬಗ್ಗೆ ಮಾರ್ಗದರ್ಶನವನ್ನು ವರಿಷ್ಠರು ಆಕಾಂಕ್ಷಿಗಳಿಗೆ ನೀಡಲಿದ್ದಾರೆ. ಕಳೆದ ವರ್ಷ ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ ಅವರ ಬಿಡದಿ ಬಳಿಯ ತೋಟದಲ್ಲಿ ಕಾರ್ಯಾಗಾರ ನಡೆಸಿ, ಪಕ್ಷದ ಸಂಘಟನೆ ಹಾಗೂ ಚುನಾವಣೆ ಸಿದ್ಧತೆ ಕುರಿತಂತೆ ಪ್ರಶ್ನಾವಳಿ ನೀಡಲಾಗಿತ್ತು. ▶ 8ನೇ ಪುಟಕ್ಕೆ

ಪಂಚಮಸಾಲಿ, ಕುರುಬ ಸಮುದಾಯದಿಂದಲೂ ‘ಮೀಸಲಾತಿ’ ಬೇಡಿಕೆ: ಸರ್ಕಾರಕ್ಕೆ ತಲೆ ‘ಬಿಸಿ’

ಬೆಂಗಳೂರು, ಅ.18(ಕೆಎಂಶಿ)–ಪರಿಶಿಷ್ಟ ಜಾತಿ, ಪಂಗಡದ ಮೀಸಲಾತಿಯನ್ನು ಹೆಚ್ಚಳ ಮಾಡಿದ ಬಿಜೆಪಿ ಸರ್ಕಾರದ ಸುತ್ತ ಇದೀಗ ಪಂಚಮಸಾಲಿ ಲಿಂಗಾಯತ ಮತ್ತು ಕುರುಬ ಸಮುದಾಯದ ಬೇಡಿಕೆ ಆತಂಕ ಸೃಷ್ಟಿಸತೊಡಗಿದೆ.

ನ್ಯಾಯಮೂರ್ತಿ ನಾಗಮೋಹನದಾಸ್ ಸಮಿತಿ ನೀಡಿದ ಶಿಫಾರಸಿನ ಆಧಾರದ ಮೇಲೆ ಪರಿಶಿಷ್ಟ ಜಾತಿ ಮತ್ತು ಪಂಗಡದ ಮೀಸಲಾತಿ ಪ್ರಮಾಣವನ್ನು ಹೆಚ್ಚಳ ಮಾಡಿದ್ದೇನೋ ಆಯಿತು. ಈಗ ಅವರ ಬೇಡಿಕೆ ಈಡೇರಿಸಿ ತಮ್ಮ ಬೇಡಿಕೆಗೆ ಸರ್ಕಾರ ಸ್ಪಂದಿಸದಿದ್ದರೆ ಪಂಚಮಸಾಲಿ ಲಿಂಗಾಯತರು ಮತ್ತು ಕುರುಬರು ಆಕ್ರೋಶಗೊಳ್ಳುತ್ತಾರೆ ಎಂಬ ವರದಿ ಬಿಜೆಪಿಗೀಗ ನುಂಗಲಾರದ ತುತ್ತಾಗಿ ಪರಿಣಮಿಸಿದೆ. ತಮ್ಮನ್ನು 2 ಎ ಪ್ರವರ್ಗಕ್ಕೆ ಸೇರಿಸಬೇಕು ಎಂದು ಪಂಚಮಸಾಲಿ ಲಿಂಗಾಯತರು ಬೇಡಿಕೆ ಮುಂದಿಟ್ಟು ಹೋರಾಡುತ್ತಿದ್ದರೆ,ತಮ್ಮನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಬೇಕು ಎಂದು ಕುರುಬ ಸಮುದಾಯ ಹೋರಾಟ ಮಾಡುತ್ತಿದೆ. ಈ ಪೈಕಿ ಪಂಚಮಸಾಲಿ ಲಿಂಗಾಯತರ ಬೇಡಿಕೆಯನ್ನು ಈಡೇರಿಸದಿದ್ದರೆ ಮುಂದಿನ ಚುನಾವಣೆಯಲ್ಲಿ ರಾಜ್ಯದ ನಲವತ್ತಕ್ಕೂ ಹೆಚ್ಚು ಕ್ಷೇತ್ರಗಳಲ್ಲಿ ಪಕ್ಷಕ್ಕೆ ದೊಡ್ಡ ಘಾಸಿಯಾಗಲಿದೆ ಎಂಬುದು ಈಗ ಬಿಜೆಪಿಗೆ ತಲುಪಿರುವ ವರದಿ. ಆದರೆ ಈ ವಿಷಯ ಬಿಜೆಪಿಗೆ ಎರಡು ಕಡೆಯಿಂದ ತಲೆನೋವು ತರುತ್ತಿದ್ದು, ಪಂಚಮಸಾಲಿ ಲಿಂಗಾಯತರ ಬೇಡಿಕೆಯನ್ನು ಒಪ್ಪದಿದ್ದರೂ ಕಷ್ಟ, ಒಪ್ಪಿದರೂ ಕಷ್ಟ ಎಂಬಂತಿದೆ. ಯಾಕೆಂದರೆ ಪಂಚಮಸಾಲಿ ಲಿಂಗಾಯತರನ್ನು ಹಿಂದುಳಿದ ಪ್ರವರ್ಗ 2ಎಗೆ ಸೇರಿಸಿದರೆ ಈಗ ಆ ಪ್ರವರ್ಗದಲ್ಲಿರುವವರು ತಮಗೆ ಸಿಗುವ ಮೀಸಲಾತಿಯ ಪ್ರಮಾಣ ಕಡಿಮೆಯಾಗುತ್ತದೆ ಎಂದು ಬೀದಿಗಿಳಿಯುತ್ತಾರೆ. ▶ 8ನೇ ಪುಟಕ್ಕೆ

ಬಿಸಿಸಿಐ 36ನೇ ಅಧ್ಯಕ್ಷರಾಗಿ ಕನ್ನಡಿಗ ರೋಜರ್ ಬಿನ್ನಿ ನೇಮಕ



ಮುಂಬೈ: ಭಾರತ ತಂಡದ ಮಾಜಿ ಕ್ರಿಕೆಟಿಗ ಹಾಗೂ 1983ರ ವಿಶ್ವಕಪ್ ವಿಜೇತ ತಂಡದ ಸದಸ್ಯರಾಗಿದ್ದ ಕರ್ನಾಟಕದ ರೋಜರ್ ಬಿನ್ನಿ ಅವರು ಭಾರತೀಯ ಕ್ರಿಕೆಟ್ ನಿಯಂತ್ರಣ ಮಂಡಳಿಯ(ಬಿಸಿಸಿಐ) ನೂತನ ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಇವರು ಬಿಸಿಸಿಐಯ 36ನೇ ಅಧ್ಯಕ್ಷರು. ಮುಂಬೈನಲ್ಲಿ ನಡೆದ ಬಿಸಿಸಿಐ ಎಜಿಎಂನಲ್ಲಿ ಇವರ ನೇಮಕವನ್ನು ಘೋಷಿಸಲಾಯಿತು.

ಈ ಮೂಲಕ ಭಾರತ ಕ್ರಿಕೆಟ್ ತಂಡದ ಮಾಜಿ ನಾಯಕ ಸೌರವ್ ಗಂಗೂಲಿ ಅವರ ಸ್ಥಾನವನ್ನು ಬಿನ್ನಿ ತುಂಬಿದ್ದಾರೆ. 67 ವರ್ಷದ ಬಿನ್ನಿ ಅವರು ▶ 8ನೇ ಪುಟಕ್ಕೆ

ಕುಕ್ಕರಹಳ್ಳಿ ಕೆರೆ ಏರಿ ಮೇಲೆ ವಿಹಾರ ನಿಷಿದ್ಧ

ಭಾರೀ ಪ್ರಮಾಣದ ನೀರು ಸಂಗ್ರಹ

ಕೆಲವೆಡೆ ಬಂಡ್‌ನಲ್ಲಿ ಬಿರುಕು, ಬಾಗಿದ ಮರಗಳ ಬುಡ; ಅಪಾಯದ ಮುನ್ನೆಚ್ಚರಿಕೆಯಾಗಿ ಮೈಸೂರು ವಿವಿ ಸುರಕ್ಷತಾ ಕ್ರಮ





ಮೈಸೂರು, ಅ. 18 (ಆರ್‌ಕೆ)– ಇದೇ ಮೊದಲು ತುಂಬಿ ತುಳುಕುತ್ತಿರುವ ಮೈಸೂರಿನ ಕುಕ್ಕರಹಳ್ಳಿ ಕೆರೆಯ ಏರಿ ಶಿಥಿಲಾವಸ್ಥೆಯಲ್ಲಿರುವುದರಿಂದ ವಾಯುವಿಹಾರವನ್ನು ಇಂದಿನಿಂದ ತಾತ್ಕಾಲಿಕವಾಗಿ ನಿಷೇಧಿಸಲಾಗಿದೆ. ಇತ್ತೀಚೆಗೆ ಸುರಿದ ಭಾರೀ ಮಳೆಯಿಂದಾಗಿ ಕೆರೆಗೆ ಅತೀ ಹೆಚ್ಚಿನ ಪ್ರಮಾಣದ ನೀರು ಹರಿದು ಬಂದಿರುವುದರಿಂದ ಮುನ್ನೆಚ್ಚರಿಕೆಯಾಗಿ ಮೈಸೂರು ವಿಶ್ವ ವಿದ್ಯಾನಿಲಯವು ವಾಯು ವಿಹಾರವನ್ನು ನಿಷೇಧಿಸಿ ಮುಂಜಾಗ್ರತಾ ಸುರಕ್ಷಾ ಕ್ರಮಗಳನ್ನು ಕೈಗೊಂಡಿದೆ.

ಇದೇ ಮೊದಲ ಬಾರಿ ಕೆರೆಯಲ್ಲಿ ಅಧಿಕ ನೀರು ಸಂಗ್ರಹವಾಗಿದೆ. ನೀರು ಹೊರ ಹರಿದು ಹೋಗಲು ಅಳವಡಿಸಿರುವ ತೂಬಿನ ಕಬ್ಬಿಣದ ಗೇಟ್ ತುಕ್ಕು ಹಿಡಿದು, ಕಾರ್ಯ ಸ್ಥಗಿತಗೊಂಡಿರುವ ಕಾರಣ ಹೆಚ್ಚುವರಿ ನೀರಿನ ಹೊರ ಹರಿವು ಸಾಧ್ಯವಾಗಿಲ್ಲ.

ಕೆರೆ ಏರಿಯ ಇಕ್ಕೆಲಗಳಲ್ಲಿರುವ ಮರಗಳು ಅಲ್ಲಲ್ಲಿ ಬುಡ ಸಹಿತ ಬಾಗಿರುವುದರಿಂದ ಯಾವುದೇ ಸಂದರ್ಭದಲ್ಲಾದರೂ ಉರುಳಿ ಬೀಳುವ ಸಾಧ್ಯತೆ ಇದೆ.

ಜೊತೆಗೆ ಪಡುವಾರಹಳ್ಳಿ ಕಡೆಯಿಂದ ಹರಿದು ಬರುವ ನೀರಿನ ನಿಯಂತ್ರಣಕ್ಕೆ ಅಳವಡಿಸಿರುವ ಕಟ್ಟೆಯು ಒಡೆದಿದೆ. ಏರಿಯೂ ಕೆಲವೆಡೆ ಕುಸಿದಿರುವುದರಿಂದ ವಾಯುವಿಹಾರ ಮಾಡುವಾಗ ಅಪಾಯ ಸಂಭವಿಸಬಹುದೆಂಬ ಕಾರಣಕ್ಕೆ ಮುಂಜಾಗ್ರತಾ ಕ್ರಮವಾಗಿ ವಾಯುವಿಹಾರವನ್ನು ತಾತ್ಕಾಲಿಕವಾಗಿ ನಿಷೇಧಿಸಲಾಗಿದೆ ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವ ಪ್ರೊ. ಆರ್. ಶಿವಪ್ಪ ‘ಮೈಸೂರು ಮಿತ್ರ’ನಿಗೆ ತಿಳಿಸಿದ್ದಾರೆ.

ಒಳಹರಿವು ಹೆಚ್ಚಾಗಿರುವ ಕಾರಣ, ಕೆರೆ ಆವರಣದಲ್ಲಿರುವ ಯುಜಿಸಿ–ಮಾನವ ಸಂಪನ್ಮೂಲ ಅಭಿವೃದ್ಧಿ ಕೇಂದ್ರದ ಕಟ್ಟಡದಲ್ಲೂ ನೀರು ತುಂಬಿದ್ದು, ಅಲ್ಲಿನ ಚಟುವಟಿಕೆಗಳೆಲ್ಲವೂ ಸ್ಥಗಿತಗೊಂಡಿವೆ. ಸೋಮವಾರ ಇಂಜಿನಿಯರ್‌ಗಳೊಂದಿಗೆ ಕೆರೆಗೆ ತೆರಳಿ ಪರಿಶೀಲಿಸಿದಾಗ ಅಪಾಯ ಸಂಭವಿಸುವ ಸಾಧ್ಯತೆ ಇದೆ ಎಂಬುದು ಮನವರಿಕೆಯಾದ ಹಿನ್ನೆಲೆಯಲ್ಲಿ ಇಂದಿನಿಂದ ಬೆಳಗ್ಗೆ ಮತ್ತು ಸಂಜೆ ವಾಕಿಂಗ್ ಅನ್ನು ನಿಷೇಧಿಸುವ ನಿರ್ಧಾರ ಕೈಗೊಳ್ಳಲಾಯಿತು. ಅಧಿಕ ನೀರು ಹೊರಕ್ಕೆ ಹರಿಯಬಿಡಲು ಇರುವ ಗೇಟ್ ಸ್ಥಗಿತಗೊಂಡಿರುವುದರಿಂದ ಮೋಟಾರ್‌ನಿಂದ ಮಳೆ ನೀರು ಚರಂಡಿಗೆ ನೀರನ್ನು ಇಂದಿನಿಂದ ಪಂಪ್ ಮಾಡುವ ಕೆಲಸ ಆರಂಭಿಸಲಾಗಿದ್ದು, ನೀರಿನ ಪ್ರಮಾಣ ಕಡಿಮೆಯಾದ ನಂತರ ಗೇಟ್ ದುರಸ್ತಿ ಕಾರ್ಯದ ಜೊತೆಗೆ ಬಾಗಿರುವ ಮರಗಳನ್ನು ತೆರವುಗೊಳಿಸಿ ಬಿರುಕು ಸರಿಪಡಿಸಲಾಗುವುದು ಎಂದು ಪ್ರೊ ಶಿವಪ್ಪ ನುಡಿದರು. ವಾಯುವಿಹಾರಿಗಳು ಹಾಗೂ ಕೆರೆಯ ಸುರಕ್ಷತೆಗಾಗಿ ವಿಶ್ವವಿದ್ಯಾನಿಲಯವು ಅಗತ್ಯ ಕ್ರಮ ಕೈಗೊಂಡಿದ್ದು, ಸಾರ್ವಜನಿಕರು ಸಹಕರಿಸಬೇಕು. ಎಲ್ಲಾ ರಿಪೇರಿ ಕೆಲಸ ಮುಗಿದ ನಂತರ ಪರಿಶೀಲಿಸಿ ಕುಕ್ಕರಹಳ್ಳಿ ಕೆರೆಯಲ್ಲಿ ಅತೀ ಶೀಘ್ರ ವಾಯುವಿಹಾರಕ್ಕೆ ಮತ್ತೆ ಅವಕಾಶ ಕಲ್ಪಿಸಲಾಗುವುದು ಎಂದು ತಿಳಿಸಿದರು.

ಮೈಸೂರು ಮಿತ್ರ

ಮೈಸೂರಲ್ಲಿ ಕೊರಗಜ್ಜನಿಗೆ ಸಂಕ್ರಮಣ ಪೂಜೆ



ಮೈಸೂರು, ಅ.18– ಮೈಸೂರಿನ ದಟ್ಟಗಳ್ಳಿಯಲ್ಲಿರುವ ಶ್ರೀ ಕೊರಗಜ್ಜಸ್ವಾಮಿ ದೇವಸ್ಥಾನದಲ್ಲಿ ಮಂಗಳವಾರ ಭಕ್ತರ ಸಮ್ಮುಖದಲ್ಲಿ ಸಂಕ್ರಮಣ ಪೂಜೆ ನೆರವೇರಿಸಲಾಯಿತು. ಶ್ರೀಶುಭಕೃತನಾಮ ಸಂವತ್ಸರ, ದಕ್ಷಿಣಾಯನ, ಶರದ್‌ಋತು ಅಶ್ವಯುಜ ಮಾಸದ ಮಂಗಳವಾರ ಬೆಳಗ್ಗೆಯಿಂದ ಕೊರಗಜ್ಜನಿಗೆ ಅಭಿಷೇಕ ನೆರವೇರಿಸಿ, ವಿಶೇಷ ಅಲಂಕಾರದೊಂದಿಗೆ ಬೆಳ್ಳಿ ಕಿರೀಟಧಾರಣೆ ಮಾಡಲಾಯಿತು.

'ರೈತ ಕಲ್ಯಾಣ ಆ್ಯಪ್' ಬಿಡುಗಡೆ



ಮೈಸೂರು,ಅ.18(ಆರ್‌ಕೆಬಿ)–ರೈತರಿಗೆ ಅನುಕೂಲ ಕಲ್ಪಿಸಿಕೊಡುವ ನಿಟ್ಟಿನಲ್ಲಿ ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘವು ಇ ಕಾಮರ್ಸ್ ವೆಬ್‌ಸೈಟ್ ಮತ್ತು ಕೃಷಿ ಯಶಸ್ವಿನಿ ಕಾರ್ಡ್ ಹಾಗೂ ರೈತ ಕಲ್ಯಾಣ ಆ್ಯಪ್ ಹೊರತಂದಿದೆ. ಮೈಸೂರಿನ ಮುಡಾ ಎದುರಿನ ರೋಟರಿ ಭವನ ಸಭಾಂಗಣದಲ್ಲಿ ಮಂಗಳವಾರ ಈ ಆ್ಯಪ್ ಅನ್ನು ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಸಿ.ಚಂದನ್‌ಗೌಡ ಬಿಡುಗಡೆ ಮಾಡಿದರು.

ಬಳಿಕ ಮಾತನಾಡಿದ ಅವರು, ಮನುಕುಲದ ಹೊಟ್ಟೆಯ ಹಸಿವಿನ ಚೀಲವನ್ನು ನಿರಂತರವಾಗಿ ತುಂಬಿಸಿಕೊಂಡು ಬರುತ್ತಿರುವ ಅನ್ನದಾತನ ಆರ್ಥಿಕ ಪರಿಸ್ಥಿತಿ ಸುಧಾರಿಸುವ ನಿಟ್ಟಿನಲ್ಲಿ ಮೊಬೈಲ್ ಮೂಲಕವೇ ರೈತರಿಗೆ ಸಾವಯವ ಕೃಷಿ ಮತ್ತು ರೈತ ಕಲ್ಯಾಣ ಸಂಘದ ಗುರಿಯನ್ನು ತಲುಪಿಸುವ ನಿಟ್ಟಿನಲ್ಲಿ 'ರೈತ ಕಲ್ಯಾಣ' ಆ್ಯಪ್ ಕೆಲಸ ಮಾಡಲಿದೆ ಎಂದರು.

ಮಣ್ಣಿನ ಫಲವತ್ತತೆ, ಮಣ್ಣಿನ ರಕ್ಷಣೆ ಹಾಗೂ ಪೋಷಣೆಗಾಗಿ ಹಗಲಿರುಳು ಸ್ಪಂದಿಸುತ್ತಾ ಅವರ ಕಷ್ಟದಲ್ಲಿ ಭಾಗಿಯಾಗಿ, ರೈತ ಕುಟುಂಬದ ಬೆನ್ನೆಲುಬಾಗಿ ರೈತ ಕಲ್ಯಾಣಕ್ಕಾಗಿ ಸಂಘ ಶ್ರಮಿಸುತ್ತಿದೆ. ಇದುವರೆಗಿನ ಶ್ರಮದ ಹೊರತಾಗಿಯೂ ಈಗ ಹೊಸ ಪ್ರಯತ್ನವಾಗಿ ರೈತರ ಒಳಿತಿಗಾಗಿ ಸಹಾಯಧನ ಮತ್ತು ಪ್ರೋತ್ಸಾಹ ಧನದ ರೂಪದಲ್ಲಿ ಅಗತ್ಯ ಕೃಷಿ ಸಲಕರಣೆ ಹಾಗೂ ಇತರೆ ಪದಾರ್ಥಗಳನ್ನು ನೀಡಲು ಉದ್ದೇಶಿಸಿ, ಕೃಷಿ ಯಶಸ್ವಿನಿ ಎಂಬ ಕಾರ್ಡ್ ಅನ್ನು ಇದೇ ಮೊದಲ ಬಾರಿಗೆ ಕರುನಾಡಿನಲ್ಲಿ ಸಿದ್ಧಪಡಿಸಲಾಗಿದೆ ಎಂದರು. ಈ ವೇಳೆ ಸಂಘದ ಪದಾಧಿಕಾರಿಗಳಾದ ಸ್ವಾಮಿಗೌಡ, ಹರೀಶ್ ಪಿ.ಗೌಡ, ಮೂರ್ತಿ ಕೋಟೆ, ಕಂದಸ್ವಾಮಿ, ಹೇಮಂತ್‌ಗೌಡ, ನವೀನ್‌ಗೌಡ, ಗೋವರ್ಧನ್, ಈರಣ್ಣ, ಸಿದ್ದಲಿಂಗೇಗೌಡ, ಉಮೇಶ್, ದಾಸೇಗೌಡ, ಅಭಿಷೇಕ್, ಪುನೀತ್, ಪುಟ್ಟಮ್ಮ, ಮಣಿ, ನಾಗರತ್ನ ಇನ್ನಿತರರು ಉಪಸ್ಥಿತರಿದ್ದರು.

> "ಆಧುನಿಕತೆ ಬೆಳೆದಂತೆ ರೈತ ಬಾಂಧವರನ್ನು ಕೂಡ ಡಿಜಿಟಲ್ ಮತ್ತು ಟೆಕ್ನಾಲಜಿ ತಂತ್ರಜ್ಞಾನದ ಮೂಲಕ ಕೃಷಿಯಲ್ಲಿ ಉತ್ತಮವಾದಂತಹ ಬದುಕನ್ನು ಕಟ್ಟಿಕೊಡುವ ನಿಟ್ಟಿನಲ್ಲಿ ರೈತ ಕಲ್ಯಾಣದ ಆ್ಯಪ್ ಕೆಲಸ ಮಾಡಲಿದೆ. ಇದರ ಮೂಲಕ ಸಿರಿವಂತರ ಸಾಲಿನಲ್ಲಿ ರೈತರು ಕೂಡ ಉದ್ಯಮಿಗಳನ್ನಾಗಿ ಮಾಡುವ ಉದ್ದೇಶವಾಗಿದೆ.
> –ಸಿ.ಚಂದನ್‌ಗೌಡ

ಅಸಂಘಟಿತ ಕಾರ್ಮಿಕರಿಗೆ ಮಾಹಿತಿ ಶಿಬಿರ



ಮೈಸೂರು, ಅ. 18– ಭಾರತ ಸರ್ಕಾರ, ದತ್ತೋ ಪಂತ್ ಧೇಗಂಡಿ, ರಾಷ್ಟ್ರೀಯ ಕಾರ್ಮಿಕ ಶಿಕ್ಷಣ ಅಭಿವೃದ್ಧಿ ಮಂಡಳಿ, ಕಾರ್ಮಿಕ ಮತ್ತು ಉದ್ಯೋಗ ಸಚಿವಾಲಯ ನಿರ್ದೇಶನಾಲಯ, ಮಂಗಳೂರು ವತಿಯಿಂದ ಒಂದು ದಿನದ ಅಸಂಘಟಿತ ಕಾರ್ಮಿಕರ ಮಾಹಿತಿ ಶಿಬಿರವನ್ನು ಮೈಸೂರು ತಾಲೂಕಿನ ಕೂರ್ಗಳ್ಳಿಯಲ್ಲಿ ನಡೆಸಲಾಯಿತು.

ಕಾರ್ಯಕ್ರಮದಲ್ಲಿ ಅಸಂಘಟಿತ ಕಾರ್ಮಿಕರಿಗೆ ರಾಜ್ಯ ಮತ್ತು ಕೇಂದ್ರ ಸರ್ಕಾರದ ಕಲ್ಯಾಣಕಾರಿ ಯೋಜನೆಗಳ ಬಗ್ಗೆ ಮಾಹಿತಿ ನೀಡಲಾಯಿತು. ವಿಶೇಷವಾಗಿ ಡಿಜಿಟಲ್ ಸಾಕ್ಷರತೆ ಮತ್ತು ಹಣಕಾಸು ಸಾಕ್ಷರತೆ ಬಗ್ಗೆ ಸಂಪನ್ಮೂಲ ವ್ಯಕ್ತಿ ಶ್ರೀಮತಿ ಸಂಗೀತ ಮಾಹಿತಿ ನೀಡಿದರು. ಇಲಾಖೆ ಶಿಕ್ಷಣಾಧಿಕಾರಿ ಸತೀಶ್‌ಕುಮಾರ್ ಪ್ರಧಾನ ಮಂತ್ರಿಗಳ ಶ್ರಮ್ ಯೋಗಿ ಮನ್ ಧನ್ ಯೋಜನೆಯಲ್ಲಿ ಗರಿಷ್ಟ ಪ್ರಮಾಣದಲ್ಲಿ ಜನರನ್ನು ನೋಂದಣಿ ಮಾಡುವ ಬಗ್ಗೆ ಮಾಹಿತಿ ತಿಳಿಸಿದರು. ಎಸ್‌ಐ ಆಪ್ತ ಸಮಾಲೋಚಕ ಗೋಪಾಲ್ ಹೆಚ್‌ಐವಿ /ಏಡ್ಸ್ /ಟಿಬಿ ಕಾನ್ಸರ್ ಬಗ್ಗೆ ಮಾಹಿತಿ ನೀಡಿದರು.

ಕೇಂದ್ರ ಸಂವಹನ ಇಲಾಖೆ ಛಾಯಾಚಿತ್ರ ಪ್ರದರ್ಶನ, ವಿಚಾರ ಸಂಕಿರಣಕ್ಕೆ ತೆರೆ



ಮೈಸೂರು,ಅ.18–ಕೇಂದ್ರ ಸಂವಹನ ಇಲಾಖೆ ಮೈಸೂರು ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ಹಾಗೂ ಮಹಾನಗರ ಪಾಲಿಕೆ ಮೈಸೂರು ಇವರ ವತಿಯಿಂದ ಮಹಾರಾಜ ಪದವಿಪೂರ್ವ ಕಾಲೇಜಿನ ಆವರಣದಲ್ಲಿ ಅ.12ರಿಂದ ನಡೆಯುತ್ತಿರುವ ಛಾಯಾಚಿತ್ರ ಪ್ರದರ್ಶನ ಮತ್ತು ವಿಚಾರ ಸಂಕಿರಣದ ಸಮಾರೋಪ ಸಮಾರಂಭ ಇಂದು ನಡೆಯಿತು.

ಮುಖ್ಯ ಅತಿಥಿಗಳಾಗಿ ರಾಜ್ಯ ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಕುಲಪತಿ ಡಾ. ನಾಗೇಶ್ ಬೆಟ್ಟಕೋಟೆ, ಕೇಂದ್ರ ಸಂವಹನ ಇಲಾಖೆ ನಿರ್ದೇಶಕಿ ಪಲ್ಲವಿ ಚಿಣ್ಯಾ, ಮೈಸೂರಿನ ಜೆಎಸ್‌ಎಸ್ ಸಂಸ್ಥೆಯ ನಿರ್ದೇಶಕ ಶ್ರೀಹರಿ, ಲಲಿತಕಲಾ ಕಾಲೇಜಿನ ಪ್ರಾಂಶುಪಾಲ, ಡಾ. ಶ್ರೀಧರ್, ಭಾರತ ಸೇವಾದಳದ ರಾಜ್ಯ ಸಂಪನ್ಮೂಲ ವ್ಯಕ್ತಿ ಶೇಷಾಚಲ, ಜೆಎಸ್‌ಎಸ್ ಜನ ಶಿಕ್ಷಣ ಸಂಸ್ಥೆಯ ನಿರ್ದೇಶಕ ರಮೇಶ್ ಉಪಸ್ಥಿತರಿದ್ದರು. ಕೇಂದ್ರ ಸಂವಹನ ಇಲಾಖೆ ಮೈಸೂರಿನ ಉಪನಿರ್ದೇಶಕಿ ಡಾ.ಟಿ.ಸಿ.ಪೂರ್ಣಿಮಾ ಸಮಾರೋಪ ಭಾಷಣ ಮಾಡಿದರು. ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಣೆ, ಅತಿಥಿಗಳಿಗೆ ಸನ್ಮಾನ ಕಾರ್ಯಕ್ರಮ ನಡೆಯಿತು. ವಿದ್ಯಾರ್ಥಿಗಳು ಉಪನ್ಯಾಸಕರು ಹಾಗೂ ಮಹಿಳೆಯರು ಉಪಸ್ಥಿತರಿದ್ದರು. ಕೇಂದ್ರ ಸಂವಹನ ಇಲಾಖೆಯ ನೋಂದಾಯಿತ ಕಲಾವಿದರು ಹಾಗೂ ಸ್ಥಳೀಯ ಕಲಾವಿದರಿಂದ ಸಾಂಸ್ಕೃತಿಕ ಕಾರ್ಯಕ್ರಮ ನಡೆಯಿತು. ದರ್ಶನ್ ನಿರೂಪಿಸಿ, ವಂದಿಸಿದರು.

ಶೂ ವರ್ಲ್ಡ್‌ನಲ್ಲಿ 2 ಖರೀದಿಸಿದರೆ 1 ಉಚಿತ

ಮೈಸೂರು, ಅ.18– ದೀಪಾವಳಿ ಹಬ್ಬದ ಪ್ರಯುಕ್ತ 'ಶೂ ವರ್ಲ್ಡ್'ನಲ್ಲಿ 2 ಖರೀದಿಸಿದರೆ 1 ಉಚಿತ ಎಂಬ ಭಾರೀ ರಿಯಾಯಿತಿ ಮಾರಾಟ ಮೇಳವನ್ನು ಆಯೋಜಿಸಿದೆ. ಮೈಸೂರಿನ ನೂತನ ಶಾಖೆಯಾದ ಶಿವರಾಂಪೇಟೆಯಲ್ಲಿರುವ (ಮನ್ನಾರ್ ಮಾರ್ಕೆಟ್ ಎದುರು) ಶೂ ವರ್ಲ್ಡ್‌ನಲ್ಲಿ ಸ್ತ್ರೀ ಮತ್ತು ಪುರುಷರ ಗುಣಮಟ್ಟದ, ಉತ್ತಮ ದರ್ಜೆಯ ಚಪ್ಪಲಿ, ಶೂ ಮತ್ತು ಇತರೆ ಎಲ್ಲಾ ಇನ್‌ಹೌಸ್ ಬ್ರಾಂಡ್‌ನ



ಪಾದರಕ್ಷೆಗಳ ಖರೀದಿಯ ಮೇಲೆ 2 + 1 ಆಫರ್ (2 ಖರೀದಿಸಿದಾಗ 1 ಉಚಿತ) ಅನ್ನು ದೀಪಾವಳಿ ಹಬ್ಬದ ಹಿನ್ನೆಲೆ ಅ.31ವರಗೂ ರಿಯಾಯಿತಿ ಮೇಳ ಏರ್ಪಡಿಸಿದೆ.

ಮೆಡಿಕಲ್ ಫುಟ್‌ವೇರ್: ವೈದ್ಯರು ಸಲಹೆ ನೀಡುವ ಹಾಗೂ ಆರೋಗ್ಯದ ಸಮಸ್ಯೆ ಇರುವವರು ಬಳಕೆ ಮಾಡುವ ಚಪ್ಪಲಿ ಮತ್ತು ಷೂಗಳು ಇಲ್ಲಿ ಮಾರಾಟಕ್ಕಿವೆ. ರಿಯಾಯಿತಿ ಮಾರಾಟವು 31–10–2022ರವರೆಗೆ ಇರುತ್ತದೆ. ಮೈಸೂರಿನ ಎಲ್ಲಾ ವರ್ಗದ ಜನರು ಈ ರಿಯಾಯಿತಿ ಮಾರಾಟದ ಸದುಪಯೋಗವನ್ನು ಪಡೆಯಬೇಕೆಂದು ಶೂ ವರ್ಲ್ಡ್ ವ್ಯವಸ್ಥಾಪಕ ಅಮರ್‌ನಾಥ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ. ಸಂಪರ್ಕಿಸಿ–0821–2424282.

ಯಶಸ್ವಿ ಮೈಸೂರು ದಸರೆಗೆ ವ್ಯವಸ್ಥಿತ ಭದ್ರತೆ

ಪೊಲೀಸ್ ಅಧಿಕಾರಿಗಳಿಗೆ ಹೋಟೆಲ್ ಮಾಲೀಕರಿಂದ ಸನ್ಮಾನ



ಮೈಸೂರು, ಅ.18 (ಆರ್‌ಕೆ)– ವ್ಯವಸ್ಥಿತ ಬಂದೋಬಸ್ತ್ ಮಾಡಿ ದಸರಾ ಯಶಸ್ಸಿಗೆ ಕಾರಣಕರ್ತರಾದ ಮೈಸೂರು ನಗರದ ಪೊಲೀಸ್ ಅಧಿಕಾರಿಗಳಿಗೆ ಹೋಟೆಲ್ ಮಾಲೀಕರು ಆತ್ಮೀಯವಾಗಿ ಅಭಿನಂದಿಸಿದರು.

ಹೋಟೆಲ್ ಮಾಲೀಕರ ಸಂಘ ಹಾಗೂ ಹೋಟೆಲ್ ಮಾಲೀಕರ ಸಂಘದ ಧರ್ಮದತ್ತಿ ವತಿಯಿಂದ ಮೈಸೂರಿನ ಬಿ.ಎನ್. ರಸ್ತೆಯಲ್ಲಿರುವ ಪೈವಿಸ್ಟಾ ಹೋಟೆಲ್ ಸಭಾಂಗಣದಲ್ಲಿ ಇಂದು ಏರ್ಪಡಿಸಿದ್ದ ಸಮಾರಂಭದಲ್ಲಿ ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ, ಡಿಸಿಪಿ ಎಂ.ಎಸ್. ಗೀತಾ ಪ್ರಸನ್ನ, ಎಸಿಪಿಗಳಾದ ಎಂ.ಎನ್.ಶಶಿಧರ್, ಎಂ.ಶಿವಶಂಕರ್, ಎಸ್.ಇ.ಗಂಗಾಧರ ಸ್ವಾಮಿ, ಸಿಸಿಬಿ ಎಸಿಪಿ ಅಶ್ವತ್ಥನಾರಾಯಣ ಹಾಗೂ ಸಂಚಾರ ಎಸಿಪಿ ಪರಶುರಾಮಪ್ಪ ಅವರನ್ನು ಅಭಿನಂದಿಸಲಾಯಿತು.

ಸನ್ಮಾನ ಸ್ವೀಕರಿಸಿ ಮಾತನಾಡಿದ ಪೊಲೀಸ್ ಆಯುಕ್ತ ಡಾ. ಚಂದ್ರಗುಪ್ತ, ಸಾಂಸ್ಕೃತಿಕ ನಗರಿ ಮೈಸೂರು ದಸರಾ ಮಹೋತ್ಸವದಿಂದಾಗಿ ಇಡೀ ವಿಶ್ವದ ಪ್ರವಾಸಿಗರು ಆಗಮಿಸುವುದರಿಂದ ಸಣ್ಣಪುಟ್ಟ ಬೀದಿಬದಿ ವ್ಯಾಪಾರಿಗಳೂ ಸೇರಿದಂತೆ ಮಧ್ಯಮ ಹಾಗೂ ಬೃಹತ್ ಉದ್ಯಮಕ್ಕೂ ಉತ್ತಮ ವಹಿವಾಟು ನಡೆದು ಆರ್ಥಿಕವಾಗಿ ಅನುಕೂಲವಾಗುವ ಜೊತೆಗೆ ಮೈಸೂರಿನ ಪ್ರವಾಸೋದ್ಯಮದ ಅಭಿವೃದ್ಧಿಗೆ ಸಹಕಾರಿಯಾಗುತ್ತದೆ ಎಂದರು.

ವೈಭವದ ಐತಿಹಾಸಿಕ ನವರಾತ್ರಿ ಉತ್ಸವ ನೋಡಲು ಲಕ್ಷಾಂತರ ಮಂದಿ ಬರುವುದರಿಂದ ಅವರಿಗೆ ಸರಿಯಾದ ಮಾಹಿತಿ ನೀಡಿ, ಸೌಲಭ್ಯ ಕಲ್ಪಿಸುವ ಜೊತೆಗೆ ಸುರಕ್ಷತೆಗೂ ಗಮನ ಹರಿಸಬೇಕು. ಅದಕ್ಕಾಗಿ ಅಧೀನಾಧಿಕಾರಿಗಳೊಂದಿಗೆ ಚರ್ಚಿಸಿ ಬಂದೋಬಸ್ತ್ ಯೋಜನೆ ರೂಪಿಸಲಾಗಿತ್ತು. ತಾಯಿ ಚಾಮುಂಡೇಶ್ವರಿ ಕೃಪೆ, ಅಧಿಕಾರಿಗಳು, ಸಿಬ್ಬಂದಿಗಳ ಪರಿಶ್ರಮ, ಜನಪ್ರತಿನಿಧಿಗಳು, ನಾಗರಿಕರ ಸಹಕಾರದಿಂದಾಗಿ ಈ ಬಾರಿ ದಸರಾ ಯಶಸ್ವಿಯಾಗಿದೆ. ನಮ್ಮ ಕಾರ್ಯವನ್ನು ಗುರ್ತಿಸಿ ನೀವು ತೋರಿದ ಈ ಪ್ರೀತಿ, ಅಭಿಮಾನ ಹಾಗೂ ಸನ್ಮಾನವು ಎಲ್ಲಾ ಪೊಲೀಸ್ ಅಧಿಕಾರಿಗಳು ಹಾಗೂ ಸಿಬ್ಬಂದಿಗೆ ಸಲ್ಲಬೇಕು ಎಂದು ನುಡಿದರು.

ಅಂದದ ಮೈಸೂರನ್ನು ಸ್ವಚ್ಛವಾಗಿರಿಸಬೇಕು. ನಗರದ ಹೃದಯ ಭಾಗದಲ್ಲಿರುವ ಹಾರ್ಡಿಂಜ್ ಸರ್ಕಲ್‌ಗೆ ದಸರಾ ಸಂದರ್ಭ ಅಳವಡಿಸಿದ್ದ ಬ್ಯಾರಿಕೇಡ್ ಬದಲಾಗಿ ನವೀನ ಮಾದರಿಯ ಖಾಯಂ ವಾಟರ್ ಬ್ಯಾರಿಕೇಡ್ ಅಳವಡಿಸಿ, ಅಲ್ಲಿನ ಅಪಘಾತ ನಿಯಂತ್ರಿಸಿ ಸಂಚಾರ ಸುಗಮಗೊಳಿಸುವ ಜೊತೆಗೆ ಸರ್ಕಲ್ ಸೌಂದರ್ಯ ವೃದ್ಧಿಸುವ ಹಾಗೂ ನಿರ್ವಹಣಾ ಜವಾಬ್ದಾರಿಯನ್ನು ಹೋಟೆಲ್ ಮಾಲೀಕರ ಸಂಘ ವಹಿಸಿಕೊಂಡಲ್ಲಿ, ಉಳಿದ ಸರ್ಕಲ್‌ಗಳನ್ನೂ ಉತ್ತಮ ರೀತಿಯಲ್ಲಿ ನಿರ್ವಹಿಸಲು ಇತರ ಸಂಘ–ಸಂಸ್ಥೆಗಳಿಗೆ ಪ್ರೇರಣೆಯಾಗಲಿದೆ ಎಂದು ನಗರ ಪೊಲೀಸ್ ಆಯುಕ್ತ ಡಾ.ಚಂದ್ರಗುಪ್ತ ಇದೇ ಸಂದರ್ಭ ನುಡಿದರು.

ಇದಕ್ಕೂ ಮೊದಲು ಪ್ರಾಸ್ತಾವಿಕ ನುಡಿಗಳನ್ನಾಡಿದ ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ಸಿ.ನಾರಾಯಣಗೌಡ ಅವರು, ವ್ಯವಸ್ಥಿತವಾಗಿ ಬಂದೋಬಸ್ತ್ ಮತ್ತು ಸಂಚಾರ ವ್ಯವಸ್ಥೆ ಮಾಡುವ ಮೂಲಕ ಯಾವುದೇ ಸಣ್ಣಪುಟ್ಟ ಗೊಂದಲ, ಅಹಿತಕರ ಘಟನೆಗಳೂ ಇಲ್ಲದೇ ದಸರಾ ಯಶಸ್ಸಿಗೆ ಪೊಲೀಸರು ಶ್ರಮಿಸಿರುವುದರಿಂದ ಅವರನ್ನು ಅಭಿನಂದಿಸಲಾಗುತ್ತಿದೆ ಎಂದು ಹೇಳಿದರು. ಹೋಟೆಲ್ ಮಾಲೀಕರ ಸಂಘದ ಕಾರ್ಯದರ್ಶಿ, ಎ.ಆರ್. ರವೀಂದ್ರ ಭಟ್, ಧರ್ಮದತ್ತಿ ಅಧ್ಯಕ್ಷ ರವಿಶಾಸ್ತ್ರಿ, ಕಾರ್ಯದರ್ಶಿ ಸುಬ್ರಹ್ಮಣ್ಯ ಆರ್.ತಂತ್ರಿ, ಮಹೇಶ್ ಕಾಮತ್, ಪದಾಧಿಕಾರಿಗಳು ಹಾಗೂ ಸದಸ್ಯರು ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಅಂಚೆ ಇಲಾಖೆಯಿಂದ ಅಪಘಾತ ವಿಮೆ



ಮೈಸೂರು,ಅ.18–ಅಂಚೆ ಇಲಾಖೆಯು ಆಕಸ್ಮಿಕ ಅವಘಡಗಳಿಗೆ ತುತ್ತಾಗುವ ಜನಸಾಮಾನ್ಯರಿಗೆ ನೆರವು ನೀಡಲೆಂದು ಕಡಿಮೆ ಹಣದಲ್ಲಿ ಭಾರಿ ಮೊತ್ತದ ಅಪಘಾತ ವಿಮೆಯನ್ನು ಪರಿಚಯಿಸಿದೆ. ವಾರ್ಷಿಕ 399 ರೂ.ಗಳನ್ನು ಪಾವತಿಸಿದರೆ, 10 ಲಕ್ಷ ರೂಗಳ ಅಪಘಾತ ವಿಮೆಗೆ ಅರ್ಹರಾಗಿರುತ್ತಾರೆ. ಕನಿಷ್ಠ 18ರಿಂದ ಗರಿಷ್ಠ 65 ವರ್ಷದೊಳಗಿನವರು ಈ ವಿಮೆಯ ಅನುಕೂಲ ಪಡೆಯಬಹುದಾಗಿದೆ. ಈ ವಿಮೆಯ ಫಲಾನುಭವಿಗಳು ಆಕಸ್ಮಿಕವಾಗಿ ಅಪಘಾತಕ್ಕೆ ತುತ್ತಾದರೆ ಅಥವಾ ಅಂಚೆ ಇಲಾಖೆ ಸೂಚಿಸಿರುವ ಅವಘಡದ ಸನ್ನಿವೇಶಗಳಿಗೆ ಒಳಗಾದರೆ ಆರ್ಥಿಕ ನೆರವು ಸಿಗಲಿದೆ. ಈ ವಿಮಾ ಯೋಜನೆಯ ಫಲಾನುಭವಿ ಆಕಸ್ಮಿಕ ಸಾವನ್ನಪ್ಪಿದರೆ ಅವರ ಕುಟುಂಬಸ್ಥರಿಗೆ, ಶಾಶ್ವತ ಅಂಗವೈಕಲ್ಯವಾದರೆ ಆರ್ಥಿಕ ಸಹಾಯ ದೊರಕುವುದಲ್ಲದೆ ಆಸ್ಪತ್ರೆಯ ಖರ್ಚು ವೆಚ್ಚಗಳು, ಮೃತರ ಮಕ್ಕಳ ಶಿಕ್ಷಣಕ್ಕಾಗಿ ನೆರವು ದೊರಕಲಿದೆ. ಮಾಹಿತಿಗಾಗಿ ಸಮೀಪದ ಅಂಚೆ ಕಚೇರಿಯಲ್ಲಿ ಇಂಡಿಯಾ ಪೋಸ್ಟ್ ಪೇಮೆಂಟ್ ಖಾತೆ ತೆರೆದು ಈ ವಿಮಾ ಯೋಜನೆಯ ಲಾಭ ಪಡೆದುಕೊಳ್ಳುವಂತೆ ಮೈಸೂರು ವಿಭಾಗದ ಹಿರಿಯ ಅಂಚೆ ಅಧೀಕ್ಷಕರು ತಿಳಿಸಿದ್ದಾರೆ.

ಅ.28ರಂದು ಉದ್ಯೋಗ ಮೇಳ

ಮೈಸೂರು,ಅ.18–ಕೈಗಾರಿಕಾ ತರಬೇತಿ ಮತ್ತು ಉದ್ಯೋಗ ಇಲಾಖೆ ವತಿಯಿಂದ ಅ.28ರಂದು ಉದ್ಯೋಗ ಮೇಳ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. ಉದ್ಯೋಗ ಮೇಳದಲ್ಲಿ ಹೆಸರಾಂತ ಕಂಪನಿಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆ ನೇರ ನೇಮಕಾತಿ ಮಾಡಿಕೊಳ್ಳಲಾಗುತ್ತದೆ. ಆಸಕ್ತ ಅಭ್ಯರ್ಥಿಗಳು ಎಸ್.ಎಸ್.ಎಲ್.ಸಿ, ಪಿಯುಸಿ, ಪದವಿ, ಐಟಿಐ, ಡಿಪ್ಲೋಮಾ, ಜೆಓಸಿ, ಸ್ನಾತಕೋತ್ತರ ಯಾವುದೇ ಪದವಿಗಳಲ್ಲಿ ತೇರ್ಗಡೆಯಾದ ಅಭ್ಯರ್ಥಿಗಳು ಅರ್ಜಿ ಸಲ್ಲಿಸಬಹುದು. ಮಾಹಿತಿಗೆ ಸಹಾಯಕ ನಿರ್ದೇಶಕರು ಜಿಲ್ಲಾ ಉದ್ಯೋಗ ವಿನಿಮಯ ಕೇಂದ್ರ ಅಥವಾ ದೂ.ಸಂ: 0821–2489972 ಸಂಪರ್ಕಿಸಬಹುದು

ಮೈಸೂರು ಆಂಗ್ಲೋ–ಇಂಡಿಯನ್ ಅಸೋಸಿಯೇಷನ್



ಆಲ್ ಇಂಡಿಯಾ ಆಂಗ್ಲೋ–ಇಂಡಿಯನ್ ಅಸೋಸಿಯೇಷನ್‌ನ 2022–23ನೇ ಸಾಲಿನ ವಾರ್ಷಿಕ ಮಹಾಸಭೆ ಇತ್ತೀಚೆಗೆ ನಡೆದು ಸಂಘದ ನೂತನ ಪದಾಧಿಕಾರಿಗಳ ಆಯ್ಕೆ ಮಾಡಲಾಯಿತು. ಕರ್ನಾಟಕದ ಆಡಳಿತ ಮಂಡಳಿ ಸದಸ್ಯ ಡಾ. ಲಾರೆನ್ಸ್ ಜೆನ್‌ಕಿನ್ಸ್ ಸಮಾರಂಭದ ಮುಖ್ಯ ಅತಿಥಿಗಳಾಗಿದ್ದರು. ಚಿತ್ರದಲ್ಲಿ ಜಾಯ್ ಆಂತೋಣಿ ಡವ್–ಗೌರವ ಖಜಾಂಚಿ, ಪೆಲಿಸಿಯಾ ರೋಡ್ರಿಗಸ್–ಜಂಟಿ ಕಾರ್ಯದರ್ಶಿ ಮತ್ತು ಯುವ ಪ್ರತಿನಿಧಿ; ಇರೆನೆ ಮರಿಯಾ ಡವ್–ಜಂಟಿ ಖಜಾಂಚಿ ಮತ್ತು ಯುವ ಪ್ರತಿನಿಧಿ; ಲೆಸ್ಟರ್ ನ್ಯೂನೆಸ್–ಗೌರವ ಕಾರ್ಯದರ್ಶಿ; ಜೆರಾರ್ಡ್ ಎಡ್ವರ್ಡ್–ಉಪಾಧ್ಯಕ್ಷ; ಡಾ. ಲಾರೆನ್ಸ್ ಜೆನ್‌ಕಿನ್ಸ್; ಅಲಿಸ್ಟರ್ ರೋಡ್ರಿಗಸ್–ಅಧ್ಯಕ್ಷರು; ಜಾಕ್ವಲೈನ್ ರಾಜ್, ಬರ್ಬರಾ ಬುಯ್ಯರ್ ಮತ್ತು ಲೆವೆಲೆನ್ ರೋಡ್ರಿಗಸ್–ಎಲ್ಲಾ ಸದಸ್ಯರು.



ಮೈಸೂರು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ(ಪರಿಶಿಷ್ಟ ವಿಭಾಗ)ಗೆ ಅಧ್ಯಕ್ಷರಾಗಿ ಆಯ್ಕೆಯಾದ ಕೆ.ಎಸ್.ಸಿದ್ದರಾಜು ಅವರಿಗೆ ಮಾಜಿ ಸಿಎಂ ಹಾಗೂ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ನೇಮಕಾತಿ ಆದೇಶ ಪತ್ರ ವಿತರಿಸಿದರು. ಈ ಸಂದರ್ಭದಲ್ಲಿ ಜಿಲ್ಲಾ ಪಂಚಾಯತ್ ಮಾಜಿ ಅಧ್ಯಕ್ಷ ಹಾಗೂ ಕೆಪಿಸಿಸಿ ಸದಸ್ಯ ಕೆ.ಮರೀಗೌಡ, ಬ್ಲಾಕ್ ಕಾಂಗ್ರೆಸ್ ಸಮಿತಿ ಅಧ್ಯಕ್ಷರಾದ ಬಿ.ಗುರುಸ್ವಾಮಿ, ಜೆ.ಸತೀಶ್‌ಕುಮಾರ್, ಡಿಸಿಸಿ ಸದಸ್ಯರಾದ ಬಿ.ರವಿ ಹಾಗೂ ಮುಖಂಡರು ಇದ್ದರು.

ದೀಪಾವಳಿ ಎನ್ನಿ... ದಿವಾಳಿ ಅಲ್ಲ...

ಕನ್ನಡ ಬಳಕೆ ಬಗ್ಗೆ ಅರಿವು ಅಭಿಯಾನ




ಮೈಸೂರು, ಅ.18(ಆರ್‌ಕೆಬಿ)– ಅಚ್ಚ ಕನ್ನಡದಲ್ಲಿ ದೀಪಾವಳಿ ಎಂದು ಬಳಸುವುದನ್ನು ಬಿಟ್ಟು ಹಿಂದಿ ಭಾಷೆಯ ದಿವಾಳಿ ಪದ ಬಳಸುವ ಮೂಲಕ ಕನ್ನಡವನ್ನು ದಿವಾಳಿ ಎಬ್ಬಿಸುವುದು ಬೇಡ ಎಂದು ಜನರಲ್ಲಿ ಅರಿವು ಮೂಡಿಸಲು ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಕಾರ್ಯಕರ್ತರು ಮೈಸೂರಿನ ವಿವಿಧ ರಸ್ತೆಗಳಲ್ಲಿ ಜನರಿಗೆ ಹಾಗೂ ಅಂಗಡಿಗಳಿಗೆ ತೆರಳಿ ಗುಲಾಬಿ ಹೂ ನೀಡಿ ಅರಿವು ಅಭಿಯಾನ ನಡೆಸಿದರು.

ಇತ್ತೀಚೆಗೆ ದೀಪಾವಳಿಯನ್ನು ದಿವಾಳಿ, ದಸರೆಯನ್ನು ದುಷೆರಾ ಎಂಬ ಪದಗಳಲ್ಲಿ ಕರೆಯುವ ಮೂಲಕ ಕನ್ನಡ ಪದಗಳ ಮೇಲೆ ಬೇರೆ ಭಾಷೆಯನ್ನು ಹೇರಲಾಗುತ್ತಿದೆ. ಕನ್ನಡ ಪದಗಳನ್ನು ಅಪಭ್ರಂಶಗೊಳಿಸುವ ಉದಾಹರಣೆಗಳು ಹೆಚ್ಚುತ್ತಿವೆ. ಹಾಗಾಗಿ ದಸರಾ, ದೀಪಾವಳಿ, ಕನ್ನಡ ರಾಜ್ಯೋತ್ಸವ ಇನ್ನಿತರೆ ಸಂದರ್ಭಗಳಲ್ಲಿ ದಿವಾಳಿ, ದುಷೆರಾ ಇನ್ನಿತರೆ ಪದಗಳ ಬಳಕೆಯಿಂದ ದೂರವಿದ್ದು, ದೀಪಾವಳಿ, ದಸರಾ ಎಂಬ ಕನ್ನಡ ಪದಗಳ ಬಳಕೆ ಇರಬೇಕು ಎಂದು ಅಭಿಯಾನದಲ್ಲಿ ಜನರಿಗೆ ತಿಳುವಳಿಕೆ ಮೂಡಿಸಲಾಯಿತು.

ಕನ್ನಡದಲ್ಲಿ ದಿವಾಳಿ ಎಂದರೆ ಎಲ್ಲವನ್ನೂ ಕಳೆದುಕೊಳ್ಳುವುದು ಎಂಬರ್ಥವಿದೆ. ಹಾಗಾಗಿ ದಿವಾಳಿ ಹಬ್ಬ ಎಂದರೆ ಕನ್ನಡಿಗರು ಏನೆಂದು ತಿಳಿದುಕೊಳ್ಳಬೇಕು. ಅದರಲ್ಲೂ ಕನ್ನಡಿಗರು ಹಣ ಇಟ್ಟಿರುವ ಬ್ಯಾಂಕ್‌ಗಳೇ ಹೀಗೆ ಹಾರೈಸಿದರೆ ಹೇಗೆ ಎಂದು ಪ್ರಶ್ನಿಸಿರುವ ಟ್ರಸ್ಟ್, ಎಲ್ಲರೂ ಸಾಧ್ಯವಾದಷ್ಟು ಕನ್ನಡದ ಪದಗಳನ್ನೇ ಬಳಸುವಂತೆ ಅರಿವು ಮೂಡಿಸಬೇಕು. ಈ ವಿಷಯದಲ್ಲಿ ಕನ್ನಡ ಅಭಿವೃದ್ಧಿ ಪ್ರಾಧಿಕಾರ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಟ್ರಸ್ಟ್ ಆಗ್ರಹಿಸಿದೆ.

ಈ ಸಂದರ್ಭದಲ್ಲಿ ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ ಅಧ್ಯಕ್ಷ ವಿಕ್ರಂ ಅಯ್ಯಂಗಾರ್, ನಜರ್‌ಬಾದ್ ನಟರಾಜ್, ಕೆ.ಆರ್. ಬ್ಯಾಂಕ್ ಉಪಾಧ್ಯಕ್ಷ ಬಸವರಾಜ್ ಬಸಪ್ಪ ಮುಖಂಡರಾದ ಅಜಯ್ ಶಾಸ್ತ್ರಿ, ಸುರೇಶ್ ಗೋಲ್ಡ್, ರಾಕೇಶ್ ಕುಂಚಿಟಿಗ, ಲಯನ್ ಶಂಕರ್‌ಗುರು, ಎಸ್.ಎನ್.ರಾಜೇಶ್, ವಿನಯ್ ಕಣಗಾಲ್, ಮಂಜುನಾಥ್, ಸುಚೇಂದ್ರ, ಚಕ್ರಪಾಣಿ ಇನ್ನಿತರರು ಉಪಸ್ಥಿತರಿದ್ದರು.

ಅಂಡಾಳ್ ಎಸ್. ಚಾರಿ ನಿಧನ



ಮೈಸೂರು,ಅ.18–ಮೈಸೂರಿನ ಹೊರವಲಯ ಇಲವಾಲದಲ್ಲಿರುವ ಆಚಾರ್ಯ ವಿದ್ಯಾಕುಲದ (ಎವಿಕೆ) ಅಧ್ಯಕ್ಷರು ಹಾಗೂ ಮೈಸೂರಿನ ಜಯಲಕ್ಷ್ಮಿಪುರಂನ ಟೆಂಪಲ್ ರಸ್ತೆ ನಿವಾಸಿ ಅಂಡಾಳ್ ಎಸ್.ಚಾರಿ ನಗರದ ಖಾಸಗಿ ಆಸ್ಪತ್ರೆಯಲ್ಲಿ ಮಂಗಳವಾರ ಬೆಳಗ್ಗೆ ನಿಧನರಾದರು. ಅವರಿಗೆ 92 ವರ್ಷ ವಯಸ್ಸಾಗಿತ್ತು.


ಮೃತರು ಮಾಜಿ ರಾಯಭಾರಿ ಹಾಗೂ ಎವಿಕೆ ಸಂಸ್ಥಾಪಕ ದಿವಂಗತ ವಿ. ಸಿದ್ಧಾರ್ಥಚಾರಿಯವರ ಪತ್ನಿಯಾಗಿದ್ದು, ಪುತ್ರರಾದ ಮಹಾವೀರ್ ಆಚಾರ್ಯ (ನಿವೃತ್ತ ಐಎಎಸ್ ಅಧಿಕಾರಿ) ಮತ್ತು ಅಭಿಮನ್ಯು ಆಚಾರ್ಯ (ಶೈಕ್ಷಣಿಕ ಸಲಹೆಗಾರ), ಪುತ್ರಿಯರಾದ ರಮಾದೇವಿ ಪ್ರಸಾದ್, ಮೊಮ್ಮಕ್ಕಳು, ಮರಿಮಕ್ಕಳು ಸೇರಿದಂತೆ ಅಪಾರ ಬಂಧುಗಳು, ಸ್ನೇಹಿತರು, ಹಿತೈಷಿಗಳನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಗೋಕುಲಂನ ಚಿರಶಾಂತಿಧಾಮದಲ್ಲಿ ಇಂದು ಮಧ್ಯಾಹ್ನ ನೆರವೇರಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ. ಸಿದ್ಧಾರ್ಥಚಾರಿಯವರು ಜನವರಿ 1, 2017ರಲ್ಲಿ ನಿಧನರಾಗಿದ್ದರು.

ಜೆ.ಲಿಸ್ಸಾಗೆ ಪಿಹೆಚ್.ಡಿ



ಮೈಸೂರು,ಅ.18–ಡಾ.ಎಂ.ಎಸ್. ಸುಜಾತ ಅವರ ಮಾರ್ಗದರ್ಶನದಲ್ಲಿ ಜೆ. ಲಿಸ್ಸಾ ಅವರು "ಎಫೆಕ್ಟಿವ್‌ನೆಸ್ ಆಫ್ ಸ್ಟ್ರಕ್ಚರ್ಡ್ ಟೀಚಿಂಗ್ ಪ್ರೋಗ್ರಾಂ" ವಿಷಯದಲ್ಲಿ ಸಂಶೋಧನೆ ನಡೆಸಿ ಸಾದರಪಡಿಸಿದ ಮಹಾಪ್ರಬಂಧವನ್ನು ಜೆಎಸ್‌ಎಸ್ ಉನ್ನತ ಶಿಕ್ಷಣ ಮತ್ತು ಸಂಶೋಧನಾ ಅಕಾಡೆಮಿ ಪಿಎಚ್.ಡಿ ಪದವಿಗೆ ಅಂಗೀಕರಿಸಿದೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.10.2022 ಬುಧವಾರ, ಮಳೆ ನಕ್ಷತ್ರ: ಚಿತ್ತ 11.10.2022ರಿಂದ 23.10.2022
ಶ್ರೀ ಶುಭಕೃತು ನಾಮ ಸಂವತ್ಸರ, ದಕ್ಷಿಣಾಯನ, ಶರದ್ ಋತು, ಆಶ್ವಯುಜ ಮಾಸ, ಕೃಷ್ಣ ಪಕ್ಷ, ತಿಥಿ: ನವಮಿ, ನಕ್ಷತ್ರ : ಪುಷ್ಯ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

■ **ಎಸ್‌ಡಿಎಂ ಮತ್ತು ಎಂಎಂಕೆ ಮಹಿಳಾ ಮಹಾವಿದ್ಯಾಲಯ :** ಸ್ವರ್ಣಾಮೃತಪ್ರಾಶನ, ಸ್ಥಳ: ಮಹಾವಿದ್ಯಾಲಯ, ಬಲ್ಲಾಳ್ ಸರ್ಕಲ್ ಹತ್ತಿರ, ಬೆಳಗ್ಗೆ 7 ರಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಸುವರ್ಣಪ್ರಾಶನ ಅಭಿಯಾನ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಬೆಳಗ್ಗೆ 8 ರಿಂದ.

■ **ರಾಮ್‌ಸನ್ಸ್ ಕಲಾ ಪ್ರತಿಷ್ಠಾನ:** ಬೊಂಬೆ ಮನೆ, ದಸರೆಯ ಬೊಂಬೆ ಪ್ರದರ್ಶನ. ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ. ಬೆಳಗ್ಗೆ 10 ರಿಂದ.

■ **ಗೊಂಬೆಗಳ ಪ್ರದರ್ಶನ:** ಕೆ.ಎಸ್.ರಾಘವೇಂದ್ರ ಅವರು ಕೈಯಿಂದ ಮಾಡಿರುವ 170 ಬೊಂಬೆಗಳ ಪ್ರದರ್ಶನ. ಸ್ಥಳ: ಇಂಚರ ಕಲಾ ಕ್ಷೇತ್ರ, ವಿಜಯನಗರ. ಬೆಳಗ್ಗೆ 10 ಗಂಟೆಯಿಂದ.

■ **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ:** ಮಧುಮೇಹ ತೊಂದರೆಗೆ ಚಿಕಿತ್ಸಾ ಶಿಬಿರ. ಸ್ಥಳ: ಆಸ್ಪತ್ರೆ ಆವರಣ, ಲಲಿತಾದ್ರಿ ರಸ್ತೆ, ಆಲನಹಳ್ಳಿ. ಬೆಳಗ್ಗೆಯಿಂದ.

■ **ಮೈಸೂರು ವಿಶ್ವವಿದ್ಯಾನಿಲಯ ದೈಹಿಕ ಶಿಕ್ಷಣ ವಿಭಾಗ :** ಮೈಸೂರು ವಿವಿ ಸಂಯೋಜಿತ ಹಾಗೂ ಘಟಕ ಕಾಲೇಜುಗಳ ದೈಹಿಕ ಶಿಕ್ಷಣ ನಿರ್ದೇಶಕರ ವಾರ್ಷಿಕ ಸಭೆ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಜಿ.ಹೇಮಂತ್‌ಕುಮಾರ್, ಸ್ಥಳ: ಮೈಸೂರು ವಿವಿ ದೈಹಿಕ ಶಿಕ್ಷಣ ವಿಭಾಗ, ಬೆಳಗ್ಗೆ 10.45ಕ್ಕೆ

■ **ಕಲಿಸು ಫೌಂಡೇಷನ್ :** 75ನೇ ಗ್ರಂಥಾಲಯದ ಉದ್ಘಾಟನಾ ಸಮಾರಂಭ, ಉದ್ಘಾಟನೆ : ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್, ಹ್ಯಾಟ್ರಿಕ್ ಹೀರೋ ಡಾ. ಶಿವರಾಜ್‌ಕುಮಾರ್, ಶ್ರೀಮತಿ ಗೀತಾ ಶಿವರಾಜ್‌ಕುಮಾರ್, ಅಧ್ಯಕ್ಷತೆ : ಕಲಿಸು ಫೌಂಡೇಷನ್ ಸಿಇಓ ಎಂ.ಎಂ. ನಿಖಿಲೇಶ್, ಸ್ಥಳ: ಶಕ್ತಿಧಾಮ, ಜೆಎಸ್‌ಎಸ್ ಕಾಲೇಜು ಹತ್ತಿರ, ಸಂಜೆ 4.30ಕ್ಕೆ

■ **ಮೈಸೂರು ವಿಶ್ವವಿದ್ಯಾನಿಲಯ ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ ಸಂಜೆ ಕಾಲೇಜು:** ಪ್ರಚಾರೋಪನ್ಯಾಸ, ಪ್ರಾಸ್ತಾವಿಕ ಭಾಷಣ: ಮೈಸೂರು ವಿವಿ ಪ್ರಸಾರಾಂಗ ನಿರ್ದೇಶಕ ಪ್ರೊ.ಎಂ.ಎಸ್.ಶೇಖರ್, ಅಧ್ಯಕ್ಷತೆ: ಮೈಸೂರು ವಿವಿ ಸಂಜೆ ಕಾಲೇಜು ಪ್ರಿನ್ಸಿಪಾಲ್ ಪ್ರೊ. ಹೆಚ್.ಸಿ.ದೇವರಾಜೇಗೌಡ, ಮೈಸೂರು ವಿವಿ ಪ್ರಸಾರಾಂಗ ನಿರ್ದೇಶಕ ಪ್ರೊ.ಎಂ.ಎಸ್.ಶೇಖರ್ ಅವರಿಂದ ರಾಗಿ ಪ್ರಪಂಚದ ದಂತಕಥೆ ರಾಗಿ ಲಕ್ಷ್ಮಣಯ್ಯ ಕುರಿತು ಉಪನ್ಯಾಸ, ಸ್ಥಳ: ನೂತನ ಕೊಠಡಿ ಸಂಖ್ಯೆ 20ರಲ್ಲಿ, ಸಂಜೆ 5.30ಕ್ಕೆ.

■ **ನೃತ್ಯಗಿರಿ (ಪ್ರದರ್ಶನ ಕಲೆಗಳ ಸಂಶೋಧನಾ ಕೇಂದ್ರ, ಮೈಸೂರು):** ನೃತ್ಯ ಸಪ್ತಾಹ, ಬೆಳ್ಳಿಹಬ್ಬದ ಸಂಭ್ರಮ, ಗುರುವಂದನಾ ಕಾರ್ಯಕ್ರಮ, ಕುಮಾರಿ ರಂಜಿತಾ ಎಸ್.ಆರ್. ಅವರಿಂದ ಗುರುವಂದನಾ ಕಾರ್ಯಕ್ರಮ, ಅಧ್ಯಕ್ಷತೆ : ಖ್ಯಾತ ಕೊಳಲು ವಾದಕ ವಿದ್ವಾನ್ ಸಿ.ಎ. ನಾಗರಾಜ್, ಮುಖ್ಯ ಅತಿಥಿಗಳು : ಶಾರದಾ ಕಲಾ ಕೇಂದ್ರದ ನಿರ್ದೇಶಕರಾದ ಶ್ರೀಮತಿ ರೇಖಾ ವೆಂಕಟೇಶ್, ಸ್ಥಳ: ವೀಣೆಶೇಷಣ್ಣ ಭವನ, ಗಾನ ಭಾರತಿ, ಆದಿಚುಂಚನಗಿರಿ ರಸ್ತೆ, ಕುವೆಂಪುನಗರ. ಸಂಜೆ 6 ಗಂಟೆಯಿಂದ.

■ **ಶಾರದಾ ವಿಲಾಸ ಫಾರ್ಮಸಿ ಕಾಲೇಜು :** ರಾಷ್ಟ್ರೀಯ ಆಯುರ್ವೇದ ದಿನದ ಪ್ರಯುಕ್ತ ಹರ್ಬಲ್ ಫಾರ್ಮಕೋಥೆರಪಿ ಮತ್ತು ಆಯುರ್‌ಸುಟಿಕಲ್ ಫಾರ್ ಮೆಂಟಲ್ ಹೆಲ್ತ್ ಆಯುರ್ ಮಾನಸ ಕುರಿತು ವಿಚಾರ ಸಂಕಿರಣ, ಉದ್ಘಾಟನೆ : ವಿಶ್ವೇಶ್ವರಯ್ಯ ಟೆಕ್ನಾಲಜಿಕಲ್ ಯೂನಿವರ್ಸಿಟಿ ಕುಲಪತಿ ಡಾ. ಎಸ್. ವಿದ್ಯಾಶಂಕರ್, ಮುಖ್ಯ ಅತಿಥಿಗಳು : ಶಾರದಾ ವಿಲಾಸ ಎಜುಕೇಷನಲ್ ಇನ್ಸ್‌ಟಿಟ್ಯೂಷನ್ಸ್ ಕಾರ್ಯದರ್ಶಿ ಎನ್. ಚಂದ್ರಶೇಖರ್, ಸರ್ಕಾರಿ ಆಯುರ್ವೇದ ಮೆಡಿಕಲ್ ಕಾಲೇಜು ಪ್ರಿನ್ಸಿಪಾಲ್ ಡಾ. ಗಜಾನನ ಹೆಗ್ಡೆ, ಅಧ್ಯಕ್ಷತೆ : ಶಾರದಾ ವಿಲಾಸ ಫಾರ್ಮಸಿ ಕಾಲೇಜು ಪ್ರಿನ್ಸಿಪಾಲ್ ಡಾ. ಹನುಮಂತಾಚಾರ್ ಜೋಷಿ, ಸ್ಥಳ: ಪ್ರೊ. ಚಿನ್ನಸ್ವಾಮಿ ಶೆಟ್ಟಿ ಕಾನ್ಫರೆನ್ಸ್ ಹಾಲ್, ಎಸ್‌ವಿಸಿಪಿ, ಬೆಳಗ್ಗೆ 11ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.05 ಚಿಂತನ, 6.20 ಗೀತಾರಾಧನ, 6.35 ನಖ ಶಿಖಾಂತ –ಆರೋಗ್ಯ ಸೌಂದರ್ಯಗಳ ವೈಜ್ಞಾನಿಕ ಮಾಹಿತಿ–ಡಾ.ಕೇಶವ ಕೊರಸೆ, 6.40 ಅರಿವಿನ ಶಿಖರ– ಸಿ.ವಿಶ್ವನಾಥ್, ವ್ಯಾಖ್ಯಾನ–ಡಾ.ಮ. ರಾಮಕೃಷ್ಣ, 10.00 ಅಬ್ದುಲ್ ಲತೀಫ್ ಖಾನ್ –ಸಾರಂಗಿವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ **ಮಧ್ಯಾಹ್ನ:** 12.30 ದೇವರನಾಮ–ರೇಖಾ ವೆಂಕಟೇಶ್, ಸುಚೇತನ್ ರಂಗಸ್ವಾಮಿ, 12.45 ಕನ್ನಡಿಯಲ್ಲಿ ಕಂಡಂತೆ ಮಾಲಿಕೆಯಲ್ಲಿ ಪ್ರಹಸನ "ಅಂದು–ಒಂದು", ರಚನೆ– ಯಮುನಾ ಮೂರ್ತಿ, ನಿರ್ಮಾಣ–ಪ್ರಭುಸ್ವಾಮಿ ಮಳಿಮಠ್, 1.20 ಭಾವಗೀತೆ–ಎಂ.ಎಸ್.ಶೀಲ, ಶ್ರೀಪಾದ ಹೆಗ್ಡೆ, 3.00 ಲಯ ಸಂಭ್ರಮ, ಪರಿಕಲ್ಪನೆ ಮತ್ತು ಪ್ರಸ್ತುತಿ–ಎಚ್.ಎಲ್. ಶಿವಶಂಕರಸ್ವಾಮಿ, ನಿರ್ಮಾಣ– ಎಸ್.ಸುಬ್ರಹ್ಮಣ್ಯ, 4.00 ಮಹಿಳಾರಂಗ–ಸ್ತ್ರೀ ಚೇತನ–ರಂಗ ಕಲಾವಿದೆ ಶಿಲ್ಪಾ ಅವರೊಂದಿಗೆ ಮಾತುಕತೆ, 4.45 ಹಿಂದಿ ಪಾಠ– ಡಾ.ಜಯಂತಿ ಪ್ರಸಾದ್ ನೌಟಿಯಾಲ್, 6.50 ಕೃಷಿರಂಗ –ಕಿಸಾನ್‌ವಾಣಿ–ಬಾಳೆ ಬೆಳೆಯಲ್ಲಿ ಪೋಷಕಾಂಶಗಳ ನಿರ್ವಹಣೆ ಕುರಿತು ಡಾ.ಜೆ.ಜಿ.ರಾಜಣ್ಣ ಅವರೊಂದಿಗೆ ಸಂದರ್ಶನ, 10.00 ಹಳ್ಳಿಹಾಡು, 10.30 ಸವಿನೆನಪು

ಹೆಬ್ಬಾಳು ಆಶ್ರಯ ಬಡಾವಣೆ ನಿವಾಸಿಗಳಿಗೆ ಹಕ್ಕು ಖುಲಾಸೆ ಪತ್ರ ವಿತರಣೆ

ಮೈಸೂರು, ಅ.18(ಎಸ್‌ಬಿಡಿ)– ಮೈಸೂರಿನ ಚಾಮರಾಜ ವಿಧಾನಸಭಾ ಕ್ಷೇತ್ರ ವ್ಯಾಪ್ತಿಯ ಹೆಬ್ಬಾಳು ಆಶ್ರಯ ಬಡಾವಣೆ ಕೆಲ ನಿವಾಸಿಗಳಿಗೆ ಹಕ್ಕುಪತ್ರ ಖುಲಾಸೆ ಪತ್ರ ವಿತರಿಸಲಾಯಿತು.

ಆಶ್ರಯ ಯೋಜನೆಯಡಿ 20 ವರ್ಷದ ಹಿಂದೆ ಮಂಜೂರಾಗಿದ್ದ ಮನೆ ನಿವಾಸಿಗಳಿಗೆ ಹಕ್ಕುಪತ್ರ ವಿತರಿಸಲಾಗಿತ್ತಾದರೂ ಹಕ್ಕು ಖುಲಾಸೆ ಪತ್ರ ನೀಡಿರಲಿಲ್ಲ. ಪರಿಣಾಮ ಮನೆಯ ಸಂಪೂರ್ಣ ಮಾಲೀಕತ್ವ ಪಡೆಯಲು ಸಾಧ್ಯವಾಗಿರಲಿಲ್ಲ. ಈ ಹಿನ್ನೆಲೆಯಲ್ಲಿ ಕಳೆದ ತಿಂಗಳು ಅದಾಲತ್ ನಡೆಸಿ ಆಶ್ರಯ ಬಡಾವಣೆ ನಿವಾಸಿಗಳಿಂದ ಅರ್ಜಿ ಸ್ವೀಕರಿಸಲಾಗಿತ್ತು. ಸಲ್ಲಿಕೆಯಾಗಿದ್ದ ಒಟ್ಟು 105 ಅರ್ಜಿಗಳಲ್ಲಿ ನಿಯಮಬದ್ಧವಾಗಿದ್ದ 20 ಅರ್ಜಿದಾರರ ಪಟ್ಟಿ ಮಾಡಲಾಗಿತ್ತು. ನಂತರ ಮೈಸೂರು ಮಹಾನಗರ ಪಾಲಿಕೆ ವತಿಯಿಂದಲೇ ಹೊಣೆಗಾರಿಕೆ ಪತ್ರ(ಇಸಿ) ಪಡೆಯಲಾಗಿತ್ತು. ಈ ಹಿನ್ನೆಲೆಯಲ್ಲಿ ಕ್ಷೇತ್ರದ ಆಶ್ರಯ ಸಮಿತಿ ಅಧ್ಯಕ್ಷರೂ ಆದ ಶಾಸಕ ಎಲ್.ನಾಗೇಂದ್ರ ಅವರು 20 ಮನೆ ಮಾಲೀಕರಿಗೆ ಹಕ್ಕು ಖುಲಾಸೆ ಪತ್ರ ವಿತರಿಸಿದರು.

ಈ ವೇಳೆ ಮಾತನಾಡಿದ ಶಾಸಕರು, ಹಕ್ಕು ಖುಲಾಸೆ ಪತ್ರವಿಲ್ಲದೆ ಆಶ್ರಯ ಬಡಾವಣೆ ನಿವಾಸಿಗಳು ಸಂಕಷ್ಟ ಅನುಭವಿಸುವುದನ್ನು ಅರಿತು, ಈ ಸಂಬಂಧ ಆಶ್ರಯ ಸಮಿತಿ ಸಭೆಯಲ್ಲಿ ನಿರ್ಣಯ ಕೈಗೊಂಡು ಇಂದು 20 ಜನರಿಗೆ ಹಕ್ಕು ಖುಲಾಸೆ ಪತ್ರ ವಿತರಿಸಲಾಗಿದೆ. ನಿಯಮ ಉಲ್ಲಂಘನೆ ಕಾರಣಕ್ಕೆ ಇನ್ನುಳಿದ 85 ಜನರಿಗೆ ಸದ್ಯಕ್ಕೆ ಹಕ್ಕು ಖುಲಾಸೆ ಪತ್ರ ನೀಡಲು ಸಾಧ್ಯವಾಗಿಲ್ಲ. ಆದರೆ ಕನಿಷ್ಟ ದಂಡ ಪಾವತಿ ಮಾಡಿಸಿಕೊಂಡು ಉಳಿದವರಿಗೂ ಖಾತೆ–ಕಂದಾಯ ಮಾಡಿಕೊಡಲು ಅವಕಾಶ ನೀಡುವಂತೆ ಆಶ್ರಯ ಸಮಿತಿ ನಿರ್ಣಯದೊಂದಿಗೆ ನಗರಾಭಿವೃದ್ಧಿ ಇಲಾಖೆಗೆ ಪ್ರಸ್ತಾವನೆ ಸಲ್ಲಿಸಿದ್ದು, ಈ ಸಂಬಂಧ ಸರ್ಕಾರ ಮಟ್ಟದಲ್ಲಿ ಮಾತನಾಡಿ ಸಮಸ್ಯೆ ಇತ್ಯರ್ಥಪಡಿಸುವುದಾಗಿ ಭರವಸೆ ನೀಡಿದರು.



ಅರ್ಜಿದಾರರಿಗೆ ತಿಳಿವಳಿಕೆ: ಅದಾಲತ್‌ಗೆ ಅರ್ಜಿ ಸಲ್ಲಿಸಿದ್ದ 85 ನಿವಾಸಿಗಳಿಗೆ ಹಕ್ಕು ಖುಲಾಸೆ ಪತ್ರ ವಿತರಣೆಗಿರುವ ಅಡತಡೆ ಬಗ್ಗೆ ಪಾಲಿಕೆ ಉಪ ಆಯುಕ್ತೆ ಸವಿತಾ ಮಾಹಿತಿ ನೀಡಿದರು. ಆಶ್ರಯ ಯೋಜನೆಯಡಿ ಮನೆ ಮಂಜೂರಾದ ದಿನದಿಂದ 10 ವರ್ಷದ ಗುತ್ತಿಗೆ ಅವಧಿಯಲ್ಲಿ ಫಲಾನುಭವಿಗಳು ಬೇರೆಯವರಿಗೆ ಮಾರಾಟ ಮಾಡುವಂತಿಲ್ಲ. ನಂತರ ಹಕ್ಕು ಖುಲಾಸೆ ಪತ್ರ ಪಡೆದು ಮಾರಾಟಕ್ಕೆ ಅವಕಾಶವಿದೆ. ಈ ನಿಯಮ ಉಲ್ಲಂಘನೆಯಾದರೆ ಸರ್ಕಾರ ಅನುಮೋದನೆ ನೀಡುವುದಿಲ್ಲ. ಆದರೂ ಈ ರೀತಿಯ ಪ್ರಕರಣಗಳಲ್ಲಿ ದಂಡ ಪಾವತಿ ಮಾಡಿಸಿಕೊಂಡು ಟೈಟಲ್ ಡೀಡ್ ನೀಡುವ ಕ್ರಮ ಮುಡಾದಲ್ಲಿದೆ. ಹಾಗೆಯೇ ಪಾಲಿಕೆ ವ್ಯಾಪ್ತಿಯ ಆಶ್ರಯ ಯೋಜನೆ ಮನೆಗಳ ನಿವಾಸಿಗಳಿಂದಲೂ ಕನಿಷ್ಟ ದಂಡ ಪಾವತಿಸಿ ಕೊಂಡು ಖಾತೆ–ಕಂದಾಯಕ್ಕೆ ಅವಕಾಶ ಕೋರಿ ಸರ್ಕಾರಕ್ಕೆ ಪ್ರಸ್ತಾವನೆ ಸಲ್ಲಿಸಿದ್ದು, ಈ ಸಂಬಂಧ ಶಾಸಕರು ಸರ್ಕಾರ ಮಟ್ಟದಲ್ಲಿ ಪ್ರಯತ್ನ ಮುಂದುವರೆಸಿದ್ದಾರೆ ಎಂದು ತಿಳಿಸಿದರು. ಕಾರ್ಯಕ್ರಮದಲ್ಲಿ ಪಾಲಿಕೆ ಸದಸ್ಯರಾದ ಪೈಲ್ವಾನ್ ಶ್ರೀನಿ ವಾಸ್, ಆಶ್ರಯ ಸಮಿತಿ ಸದಸ್ಯರಾದ ಅನುಜ್ ಸಾರಸ್ವತ, ಮಹೇಶ್, ಮಹೇಶ್ ರಾಜೇ ಅರಸ್, ಆರಾಧನಾ ಸಮಿತಿ ಸದಸ್ಯ ಭೈರಪ್ಪ, ಮುಖಂಡರಾದ ರಾಮೇಗೌಡ, ಸಿ.ಎಂ.ಕೃಷ್ಣ, ಅರುಣ್, ಕದಂಬ ಸತೀಶ್, ಶ್ರೀನಿವಾಸ್‌ಗೌಡ, ಸುಪ್ರೀಂ ಮಂಜು, ಬೆಟ್ಟೇಗೌಡ, ನವೀನ್ ಮತ್ತಿತರರು ಉಪಸ್ಥಿತರಿದ್ದರು.

ಎಂಜಿನಿಯರಿಂಗ್ ಕೋರ್ಸ್ ಪ್ರವೇಶಕ್ಕೆ ನ.30ರವರೆಗೆ ಕಾಲಾವಕಾಶ

ಬೆಂಗಳೂರು, ಅ.18(ಕೆಎಂಶಿ)–ಎಂಜಿನಿಯರಿಂಗ್ ಕೋರ್ಸುಗಳಿಗೆ ಪ್ರವೇಶಾವಕಾಶದ ಕೊನೆಯ ದಿನಾಂಕವನ್ನು ಸುಪ್ರೀಂಕೋರ್ಟ್ ನವೆಂಬರ್ 30ರವರೆಗೆ ವಿಸ್ತರಿಸಿದೆ ಎಂದು ಉನ್ನತ ಶಿಕ್ಷಣ ಸಚಿವ ಡಾ.ಸಿ.ಎನ್.ಅಶ್ವತ್ಥನಾರಾಯಣ ಸೋಮವಾರ ತಿಳಿಸಿದ್ದಾರೆ.



ಈ ಮುನ್ನ ಎಐಸಿಟಿಇ ನಿಗದಿ ಮಾಡಿದ್ದ ಪ್ರಕಾರ ಎಂಜಿನಿಯರಿಂಗ್ ಕೋರ್ಸ್‌ಗಳಿಗೆ ಅ.25 ಕೊನೆಯ ದಿನವಾಗಿತ್ತು. ಆದರೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರವು (ಕೆಇಎ) ಈ ದಿನಾಂಕವನ್ನು ವಿಸ್ತರಿಸಬೇಕೆಂದು ಕೋರಿ ಸುಪ್ರೀಂ ಕೋರ್ಟಿನ ಮೊರೆ ಹೋಗಿತ್ತು. ಈ ಮನವಿಯನ್ನು ನ್ಯಾಯಾಲಯವು ಪುರಸ್ಕರಿಸಿದೆ ಎಂದು ಹೇಳಿದ್ದಾರೆ.

ಹೀಗಾಗಿ ನಮಗೆ ಒಂದು ತಿಂಗಳಿಗಿಂತ ಹೆಚ್ಚು ಕಾಲಾವಕಾಶ ಸಿಕ್ಕಿದೆ. ಇಷ್ಟರಲ್ಲಿ ನಾವು ಸುಗಮ ಕೌನ್ಸೆಲಿಂಗ್ ಸೇರಿದಂತೆ ಪ್ರವೇಶ ಪ್ರಕ್ರಿಯೆ ಮುಗಿಸಲಿದ್ದೇವೆ ಎಂದು ಸ್ಪಷ್ಟಪಡಿಸಿದ್ದಾರೆ.

ಕಳೆದ ವರ್ಷ ಪಿಯುಸಿ ಪಾಸಾದ 24 ಸಾವಿರ ಅಭ್ಯರ್ಥಿಗಳು ಈ ವರ್ಷ ಸಿಇಟಿ ಬರೆದು, ರ್‍ಯಾಂಕಿಂಗ್ ನೀಡುವ ವಿಚಾರದಲ್ಲಿ ಹೈಕೋರ್ಟ್ ಮೆಟ್ಟಿಲೇರಿದ್ದರಿಂದ ಸ್ವಲ್ಪ ಅಡಚಣೆ ಎದುರಾಯಿತು. ಹೀಗಾಗಿ ಅಂತಿಮ ದಿನಾಂಕ ವಿಸ್ತರಿಸುವಂತೆ ಸರ್ವೋಚ್ಚ ನ್ಯಾಯಾಲಯಕ್ಕೆ ಕೇಳಿಕೊಂಡಿದ್ದೆವು ಎಂದು ವಿವರಿಸಿದ್ದಾರೆ.

ಅಯೋಧ್ಯೆಯಲ್ಲಿ ಪ್ರಧಾನಿ ಮೋದಿ ದೀಪಾವಳಿ

ನವದೆಹಲಿ, ಅ.18– ದೀಪಗಳ ಹಬ್ಬ ದೀಪಾವಳಿ ಮುನ್ನ ದಿನ (ಭಾನುವಾರ) ಪ್ರಧಾನಿ ನರೇಂದ್ರ ಮೋದಿ ಅಯೋಧ್ಯೆಗೆ ಭೇಟಿ ನೀಡಲಿದ್ದು, ಶ್ರೀರಾಮನ ದರ್ಶನ ಪಡೆದು ಅಂದು ನಡೆಯಲಿರುವ ದೀಪೋತ್ಸವ ಕಾರ್ಯಕ್ರಮದಲ್ಲಿ ಭಾಗಿಯಾಗಲಿದ್ದಾರೆ.



ರಾಮ ಮಂದಿರದಲ್ಲಿ ಪ್ರಾರ್ಥನೆ ಸಲ್ಲಿಸಿದ ನಂತರ ಪ್ರಧಾನಿ ಮೋದಿ ಅವರು, ನಿರ್ಮಾಣ ಹಂತದಲ್ಲಿರುವ ಭವ್ಯ ಶ್ರೀರಾಮ ಮಂದಿರದ ಕಾಮಗಾರಿಯನ್ನು ಪರಿಶೀಲಿಸುವ ನಿರೀಕ್ಷೆಯಿದೆ. ಬಳಿಕ ಅವರು ತಾತ್ಕಾಲಿಕ ಪ್ರವಾಸದ ವೇಳಾಪಟ್ಟಿಯಂತೆ, ರಾಮ್ ಲೀಲಾದಲ್ಲಿ ರಾಮ್ ಮತ್ತು ಇತರರ ಪಾತ್ರವನ್ನು ಬರೆಯುವವರನ್ನು ಸ್ವಾಗತಿಸಲು ರಾಮ್ ಕಥಾ ಪಾರ್ಕ್‌ಗೆ ಭೇಟಿ ನೀಡಬಹುದು. ನರೇಂದ್ರ ಮೋದಿ ಆಗಮನ ಹಿನ್ನಲೆ ರಾಮಮಂದಿರ ನಿರ್ಮಾಣ ಸಮಿತಿಯ (ಆರೆಂಸಿಸಿ) ಎರಡು ದಿನಗಳ ಪರಿಶೀಲನಾ ಸಭೆ ನಡೆಸಿದೆ. ಶ್ರೀ ರಾಮ ಜನ್ಮಭೂಮಿ ತೀರ್ಥ ಕ್ಷೇತ್ರ ಟ್ರಸ್ಟ್‌ನ ಸದಸ್ಯರು ರಾಮಮಂದಿರದ ಸುಮಾರು 50 ಪ್ರತಿಶತದಷ್ಟು ನಿರ್ಮಾಣ ಕಾರ್ಯವನ್ನು ಪೂರ್ಣಗೊಳಿಸಿದ್ದು, ಇದನ್ನು ಪ್ರಧಾನಮಂತ್ರಿಗಳಿಗೆ ವಿವರಿಸಲಿದ್ದಾರೆ. ಅದೇ ದಿನ ಸಂಜೆ ಅವರು ಸರಯು ನದಿ ತಟದಲ್ಲಿ ನಡೆಯುವ ಆರತಿ ಕಾರ್ಯ ಕ್ರಮದಲ್ಲಿ ಪಾಲ್ಗೊಂಡು, ದೀಪೋತ್ಸವ ಕಾರ್ಯಕ್ರಮಕ್ಕೂ ಚಾಲನೆ ನೀಡದಿದ್ದಾರೆ. ಈ ವೇಳೆ ಹಸಿರು ಡಿಜಿಟಲ್ ಪಟಾಕಿಗಳನ್ನು ಸಿಡಿಸಲು ಯೋಜಿಸಲಾಗಿದೆ. ಭಾನುವಾರ ದಿಂದ ಪ್ರಾರಂಭವಾಗುವ 3 ದಿನಗಳ ದೀಪೋತ್ಸವ ಆಚರಣೆಯಲ್ಲಿ, ರಷ್ಯಾ, ಮಲೇಷ್ಯಾ, ಶ್ರೀಲಂಕಾ ಮತ್ತು ಫಿಜಿ ಕಲಾವಿದರಿಂದ ರಾಮಲೀಲಾ ಪ್ರದರ್ಶನಗಳು ನಡೆಯಲಿವೆ. ಈ ಬಾರಿ ಹೊಸ ದಾಖಲೆಯನ್ನು ಸೃಷ್ಟಿಸಲು ನಿರ್ಧರಿಸಲಾಗಿದ್ದು, 17 ಲಕ್ಷ ದೀಪಗಳು ಬೆಳಗಲಾಗುತ್ತಿದೆ.

ನ್ಯಾಯಬೆಲೆ ಅಂಗಡಿಗಳಿಗೆ ನುಗ್ಗಿ ದೌರ್ಜನ್ಯ ಆರೋಪ; ಮಾಲೀಕರ ಪ್ರತಿಭಟನೆ

ಮೈಸೂರು,ಅ.18(ಪಿಎಂ)– ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷದ (ಕೆಆರ್‌ಎಸ್) ಕಾರ್ಯ ಕರ್ತರು ನ್ಯಾಯಬೆಲೆ ಅಂಗಡಿಗಳಿಗೆ ನುಗ್ಗಿ ಮಾಲೀಕರ ಮೇಲೆ ದೌರ್ಜನ್ಯ ನಡೆಸುತ್ತಿದ್ದಾರೆ ಎಂದು ಆರೋಪಿಸಿ ನ್ಯಾಯಬೆಲೆ ಅಂಗಡಿ ಮತ್ತು ಬಳಕೆದಾರರ ಸಹಕಾರ ಸಂಘದ (ಮೈಸೂರು ನಗರ) ಆಶ್ರಯದಲ್ಲಿ ನ್ಯಾಯಬೆಲೆ ಅಂಗಡಿ ಮಾಲೀಕರು ಮಂಗಳವಾರ ಪ್ರತಿಭಟನೆ ನಡೆಸಿದರು.

ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ಜಮಾಯಿಸಿದ ಪ್ರತಿಭಟನಾಕಾರರು, ಇತ್ತೀಚೆಗೆ ಕೆಆರ್‌ಎಸ್ ಪಕ್ಷದ ಕಾರ್ಯಕರ್ತರು ದಿನನಿತ್ಯ ಒಂದಿಲ್ಲೊಂದು ನ್ಯಾಯಬೆಲೆ ಅಂಗಡಿಗೆ ನುಗ್ಗಿ ದೌರ್ಜನ್ಯ ನಡೆಸುತ್ತಿದ್ದಾರೆ. ಪಡಿತರ ವಿತರಣೆಗೆ ಅವಕಾಶ ನೀಡದೇ ಸರ್ವಾಧಿಕಾರಿಯಂತೆ ವರ್ತಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಅಂಗಡಿಗಳಿಗೆ ನುಗ್ಗಿ ಅಕೌಂಟ್ಸ್ ಕೇಳುವುದು, ದಾಸ್ತಾನು ಪರಿಶೀಲಿಸುವುದು, ಮೊಬೈಲ್‌ನಿಂದ ಚಿತ್ರೀಕರಿಸುವುದು ಮಾತ್ರವಲ್ಲದೆ, ಮಾಲೀಕರಿಗೆ ಅವಾಚ್ಯ ಶಬ್ಧಗಳಿಂದ ನಿಂದಿಸಲಾಗುತ್ತಿದೆ. ಪಡಿತರದಾರರಿಗೆ ಪಡಿತರ ವಿತರಿಸುವ ಸಮಯದಲ್ಲಿ ರೌಡಿಗಳಂತೆ ವರ್ತಿಸುತ್ತಿದ್ದಾರೆ ಎಂದು ದೂರಿದರು. ಸಂಘವು ಈ ಬಗ್ಗೆ ಆಹಾರ ಇಲಾಖೆ ಆಯುಕ್ತರು, ಸಹಾಯಕ ಆಯುಕ್ತರಿಗೂ ದೂರು ನೀಡಿದೆ. ರಾಜ್ಯಾದ್ಯಂತ 20 ಸಾವಿರ ನ್ಯಾಯಬೆಲೆ ಅಂಗಡಿಗಳನ್ನು ವಯಸ್ಸಾದವರು, ವಿದ್ಯಾವಂತರು, ಮಹಿಳೆಯರು ನಡೆಸುತ್ತಿದ್ದೇವೆ. ಆದರೆ ಇತ್ತೀಚೆಗೆ ಕೆಆರ್‌ಎಸ್ ಪಕ್ಷದವರಿಂದ ಕಿರುಕುಳ ಅನುಭವಿಸುವಂತಾಗಿದೆ. ನಮ್ಮನ್ನು ಕಳ್ಳರೆಂದು ಬಿಂಬಿಸುವುದು ಹಾಗೂ ಆಹಾರ ಇಲಾಖೆ ಅಧಿಕಾರಿಗಳಿಗೆ ವಿಡಿಯೋ ಲೈವ್ ಮಾಡುವ ಮೂಲಕ ದೌರ್ಜನ್ಯ ನಡೆಸುತ್ತಿದ್ದಾರೆ. ಆದ್ದರಿಂದ ಇವರ ಯಾವುದೇ ದೂರುಗಳನ್ನು ಪರಿಗಣಿಸಬಾರದು. ಪಡಿತರ ಚೀಟಿದಾರರಿಂದ ದೂರು ಬಂದಲ್ಲಿ ಮಾತ್ರ ಪರಿಗಣಿಸಬೇಕೆಂದು ಒತ್ತಾಯಿಸಿದರು.



ಮೈಸೂರು ಜಿಲ್ಲಾಧಿಕಾರಿ ಕಚೇರಿ ಎದುರು ನ್ಯಾಯಬೆಲೆ ಅಂಗಡಿ ಮಾಲೀಕರು ಮಂಗಳವಾರ ಪ್ರತಿಭಟನೆ ನಡೆಸಿದರು.

ಕೆಆರ್‌ಎಸ್ ಪಕ್ಷದ ಕಾರ್ಯಕರ್ತರು ನ್ಯಾಯಬೆಲೆ ಅಂಗಡಿಯವರಿಗೆ ಇನ್ನು ಮುಂದೆ ಯಾವುದೇ ರೀತಿಯ ತೊಂದರೆ ಕೊಡದಂತೆ ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಆಗ್ರಹಿಸಿದರು. ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಿ ಪ್ರತಿಭಟನೆ ಕೈಬಿಡಲಾ ಯಿತು. ಸಂಘದ ಅಧ್ಯಕ್ಷ ದೇಶಿಗೌಡ, ಉಪಾಧ್ಯಕ್ಷ ನಾಗೇಂದ್ರಗೌಡ, ಪ್ರಧಾನ ಕಾರ್ಯದರ್ಶಿ ಎನ್.ಮಂಜುನಾಥ್, ನ್ಯಾಯಬೆಲೆ ಅಂಗಡಿ ಮಾಲೀಕರಾದ ಸುಂದರಪ್ಪ, ನಜರ್ ಬಾದ್ ರವಿ, ನಟರಾಜ್ ಸೇರಿದಂತೆ ನೂರಕ್ಕೂ ಹೆಚ್ಚು ಮೈಸೂರು ನಗರದ ನ್ಯಾಯಬೆಲೆ ಅಂಗಡಿ ಮಾಲೀಕರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಅ.21ರಂದು ಹುಕ್ಕೇರಿಯಲ್ಲಿ ಲಿಂಗಾಯತ ಪಂಚಮಸಾಲಿ ಬೃಹತ್ ಸಮಾವೇಶ

ಬೆಳಗಾವಿ,ಅ.18–ಪಂಚಮಸಾಲಿ ಸಮುದಾಯಕ್ಕೆ 2ಎ ಮೀಸಲಾತಿಗೆ ಆಗ್ರಹಿಸಿ ಅ.21ರಂದು ಹುಕ್ಕೇರಿಯಲ್ಲಿ ಲಿಂಗಾಯತ ಪಂಚಮ ಸಾಲಿ ಬೃಹತ್ ಸಮಾವೇಶ ಮಾಡಲಾಗುತ್ತಿದೆ ಎಂದು ಬಸವ ಜಯ ಮೃತ್ಯುಂಜಯ ಸ್ವಾಮೀಜಿ ಹೇಳಿದ್ದಾರೆ.

ನಗರದಲ್ಲಿ ಮಾಧ್ಯಮದವರೊಂದಿಗೆ ಮಾತನಾಡಿದ ಅವರು, ಅ.21ರಂದು ನಡೆಯುವ ಸಮಾವೇಶದಲ್ಲಿ ಕಿತ್ತೂರು ಕರ್ನಾಟಕದ ಪ್ರಥಮ ರಾಷ್ಟ್ರಮಾತೆ ಚನ್ನಮ್ಮರವರ 244ನೇ ಜಯಂತಿ, 199ನೇ ವಿಜಯೋತ್ಸವ ಮಾಡಲಾಗುವುದು. ಅ.21ರೊಳಗೆ ಮೀಸಲಾತಿ ಘೋಷಿಸದಿದ್ದರೆ ಅಂತಿಮ ಹಂತದ ಹೋರಾಟದ ದಿನಾಂಕ ನಿಗದಿ ಮಾಡುತ್ತೇವೆ. 25 ಲಕ್ಷ ಜನ ಸೇರಿಸಿ ವಿಧಾನ ಸೌಧಕ್ಕೆ ಮುತ್ತಿಗೆ ಹಾಕುವ ದಿನಾಂಕ ನಿಗದಿ ಮಾಡುತ್ತೇವೆ ಎಂದರು.

ವರದಕ್ಷಿಣೆ ಕಿರುಕುಳ, ಎರಡನೇ ಮದುವೆ ಆರೋಪ

ಪತಿ, ಮನೆಯವರ ವಿರುದ್ಧ ಪ್ರಕರಣ ದಾಖಲು

ಮೈಸೂರು, ಅ.18(ಆರ್‌ಕೆ)–ವರದಕ್ಷಿಣೆ ಕಿರುಕುಳ ಹಾಗೂ ಕಾನೂನು ಬಾಹಿರವಾಗಿ ಎರಡನೇ ಮದುವೆಯಾಗಿದ್ದಾರೆಂದು ಮಹಿಳೆ ನೀಡಿದ ದೂರಿನ ಹಿನ್ನೆಲೆಯಲ್ಲಿ ಪತಿ ಹಾಗೂ ಮನೆಯ ಇತರ ಐವರ ವಿರುದ್ಧ ಅಕ್ಟೋಬರ್ 8ರಂದು ಮೈಸೂರಿನ ಮಹಿಳಾ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಮೈಸೂರಿನ ಬೋಗಾದಿ 2ನೇ ಹಂತದ ನಿವಾಸಿಯಾದ ಸಹಾಯಕ ಪ್ರಾಧ್ಯಾಪಕಿ ಡಿ.ಅಂಬಿಕಾ ಅವರು ನೀಡಿದ ದೂರಿನನ್ವಯ ಆಕೆಯ ಪತಿ ಲೋಕೇಶ್, ಮಾವ ನಂಜಪ್ಪ ನಾಯಕ, ಅತ್ತೆ ಮಂಜುಳಮ್ಮ, ನಾದಿನಿ ವಸಂತ, ಮೈದುನ ಪ್ರಭುಕುಮಾರ್, ಶ್ವೇತಾ ಎಂಬುವರ ವಿರುದ್ಧ ಐಪಿಸಿ 1860 ಸೆಕ್ಷನ್ 498ಎ, 494, 149 ಹಾಗೂ ವರದಕ್ಷಿಣೆ ನಿಷೇಧ ಕಾಯ್ದೆ 1961 ಸೆಕ್ಷನ್ 4ರಡಿ ಮಹಿಳಾ ಠಾಣೆ ಎಎಸ್‌ಐ ಎಸ್.ಶ್ವೇತಾರಾವ್ ಅವರು ಪ್ರಕರಣ (ಸಂಖ್ಯೆ 0125/2022) ದಾಖಲಿಸಿದ್ದಾರೆ.

2014ರ ಜೂನ್ 8ರಂದು ಸಂಪ್ರದಾಯದಂತೆ ಲೋಕೇಶ್‌ರೊಂದಿಗೆ ಮದುವೆಯಾಗಿದ್ದು, ಆರಂಭದಲ್ಲಿ ನಾನು ಅವರ ಮನೆಯಲ್ಲಿ ವಾಸವಾಗಿದ್ದೆ. ನಂತರ ನಾವಿಬ್ಬರೂ ಮೈಸೂರಿಗೆ ಬಂದು ವಾಸಿಸುತ್ತಿದ್ದೆವು. ಆಗಿಂದಾಗ್ಗೆ ನಮ್ಮ ಮನೆಗೆ ಬರುತ್ತಿದ್ದ ಮನೆಯವರು, ವಿವಾಹದ ವೇಳೆ ವರದಕ್ಷಿಣೆ ಕೊಡದ ಹಿನ್ನೆಲೆಯಲ್ಲಿ ಈಗ ನಿನ್ನ ಸಂಬಳವನ್ನು ನಮಗೆ ಕೊಡಬೇಕೆಂದು ಗಲಾಟೆ ಮಾಡುತ್ತಿದ್ದರಿಂದ ಮಾನಸಿಕ ಹಾಗೂ ದೈಹಿಕ ಹಿಂಸೆಯಾಗುತ್ತಿತ್ತು ಎಂದು ಅಂಬಿಕಾ ದೂರಿನಲ್ಲಿ ತಿಳಿಸಿದ್ದಾರೆ.

ಈ ಸಂಬಂಧ ಈ ಹಿಂದೆ ಎರಡು ಬಾರಿ ಮಹಿಳಾ ಠಾಣೆಗೆ ದೂರು ನೀಡಿದ್ದೆ. ಪೊಲೀಸರು ನನ್ನ ಪತಿ ಮತ್ತು ಅತ್ತೆ–ಮಾವನನ್ನು ಕರೆಸಿ ಮುಚ್ಚಳಿಕೆ ಬರೆಸಿಕೊಂಡಿದ್ದರು. ನಂತರವೂ ಅವರು ಬಂದು ಹಣದ ವಿಚಾರವಾಗಿ ಗಲಾಟೆ ಮಾಡುತ್ತಿದ್ದರಲ್ಲದೆ, ನನ್ನ ಗಂಡನಿಗೆ ಬೇರೊಂದು ಮದುವೆ ಮಾಡುತ್ತೇವೆಂದು ಹೇಳುತ್ತಿದ್ದರು. ಈ ಅಕ್ಟೋಬರ್ 7ರಂದು ನನ್ನ ಪತಿ ಲೋಕೇಶ್ ಅವರು ಬೇರೊಂದು ಮಹಿಳೆ ಜೊತೆ ಮದುವೆಯಾಗಿರುವ ಫೋಟೋವನ್ನು ಅಪರಿಚಿತರ ಮೊಬೈಲ್‌ನಿಂದ ನನಗೆ ಕಳುಹಿಸಲಾಗಿದೆ. ನಾನು ಜೀವಂತ ಇದ್ದರೂ ಬೇರೆ ಹೆಂಗಸಿನ ಜೊತೆ ಮದುವೆಯಾಗಿರುವ ಪತಿ ಹಾಗೂ ಅದಕ್ಕೆ ಪ್ರೇರಣೆ ನೀಡಿರುವ ಅತ್ತೆ–ಮಾವ, ಮೈದುನ, ನಾದಿನಿಯರ ವಿರುದ್ಧ ಕಾನೂನು ಕ್ರಮ ಜರುಗಿಸುವಂತೆ ಅಂಬಿಕಾ ನೀಡಿದ ದೂರಿನನ್ವಯ ಪೊಲೀಸರು ಪ್ರಕರಣ ದಾಖಲಿಸಿದ್ದಾರೆ.

ಉಚಿತ ಪರೀಕ್ಷಾ ಪೂರ್ವ ತರಬೇತಿ

ಮೈಸೂರು, ಅ.18– ಉದ್ಯೋಗ ಮತ್ತು ತರಬೇತಿ ಇಲಾಖೆ ವತಿಯಿಂದ ಪೊಲೀಸ್ ಇಲಾಖೆಯಲ್ಲಿ ಖಾಲಿ ಇರುವ ಸಶಸ್ತ್ರ ಪೊಲೀಸ್ ಕಾನ್ಸ್‌ಟೇಬಲ್ ಹಾಗೂ ಸಿವಿಲ್ ಪೊಲೀಸ್ ಕಾನ್ಸ್‌ಟೇಬಲ್ ಹುದ್ದೆಗಳಿಗೆ 10 ದಿನಗಳ ಉಚಿತ ಪರೀಕ್ಷಾ ಪೂರ್ವ ತರಬೇತಿ ಕಾರ್ಯಕ್ರಮವನ್ನು ನ.2ರಿಂದ 15 ರವರೆಗೆ ಹಮ್ಮಿಕೊಳ್ಳಲಾಗಿದೆ. ಆಸಕ್ತ ಅಭ್ಯರ್ಥಿಗಳು ಅರ್ಜಿ ಸಲ್ಲಿಸಿದ ದಾಖಲಾತಿಯೊಂದಿಗೆ ಉಚಿತ ತರಬೇತಿಗಾಗಿ ಹೆಸರನ್ನು ನೋಂದಾಯಿಸಿಕೊಳ್ಳಲು ಕೋರಿದೆ. ಹೆಚ್ಚಿನ ಮಾಹಿತಿಗಾಗಿ ಸಹಾಯಕ ನಿರ್ದೇಶಕರು ಜಿಲ್ಲಾ ಉದ್ಯೋಗ ವಿನಿಮಯ ಕಚೇರಿ ಸರ್ಕಾರಿ ಕೈಗಾರಿಕಾ ತರಬೇತಿ ಸಂಸ್ಥೆ ಆವರಣ ಎನ್.ಆರ್.ಮೊಹಲ್ಲಾ. ಮೈಸೂರು ಇವರನ್ನು ಸಂಪರ್ಕಿಸಬಹುದು ಅಥವಾ ದೂ. ಸಂ:0821–2489972 ಅನ್ನು ಸಂಪರ್ಕಿಸಬಹುದು.

ಹಾಸ್ಟೆಲ್ ಸೌಲಭ್ಯಕ್ಕೆ ಒತ್ತಾಯಿಸಿ ಮೈಸೂರು ವಿವಿ ಕಾನೂನು ವಿದ್ಯಾರ್ಥಿಗಳ ಪ್ರತಿಭಟನೆ

ಮೈಸೂರು, ಅ.18(ಪಿಎಂ)– ಹಾಸ್ಟೆಲ್ ವ್ಯವಸ್ಥೆ ಕಲ್ಪಿಸಬೇಕೆಂದು ಒತ್ತಾಯಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್‌ಎಫ್‌ಐ) ನೇತೃತ್ವದಲ್ಲಿ ಮೈಸೂರು ವಿವಿಯ ಕಾನೂನು ವಿದ್ಯಾರ್ಥಿಗಳು ಮಂಗಳವಾರ ಪ್ರತಿಭಟನೆ ನಡೆಸಿದರು.

ಮೈಸೂರು ವಿವಿ ಕ್ರಾಫರ್ಡ್ ಭವನದ ಎದುರು ಜಮಾಯಿಸಿದ ಪ್ರತಿಭಟನಾಕಾರರು, ವಿವಿಯ ಕಾನೂನು ಕಾಲೇಜು ಪ್ರಾರಂಭವಾಗಿ ತಿಂಗಳು ಕಳೆದಿದೆ. ಆದರೆ ನಮಗೆ (ಪುರುಷ ವಿದ್ಯಾರ್ಥಿಗಳು) ಯಾವುದೇ ಹಾಸ್ಟೆಲ್ ಸೌಲಭ್ಯ ಕಲ್ಪಿಸಿಲ್ಲ. ಈ ಹಿಂದೆ ನಮಗೆ ವಿಲೇಜ್ ಹಾಸ್ಟೆಲ್‌ನಲ್ಲಿ ಪ್ರವೇಶಾತಿ ಕಲ್ಪಿಸಲಾಗಿತ್ತು. ಆದರೆ ವಿಲೇಜ್ ಹಾಸ್ಟೆಲ್ ಕಟ್ಟಡವನ್ನು ದುರಸ್ತಿ ಮಾಡಲು ಆದೇಶಿಸಿರುವುದಾಗಿ ತಿಳಿಸಿ, ನಮ್ಮನ್ನು ಖಾಲಿ ಮಾಡಿಸಲಾಯಿತು. ಆದರೆ ಯಾವುದೇ ಪರ್ಯಾಯ ವ್ಯವಸ್ಥೆ ಮಾಡಲಿಲ್ಲ ಎಂದು ದೂರಿದರು.



ಕಳೆದ ಒಂದು ತಿಂಗಳಿಂದ ಮನವಿ ಮಾಡಿದರೂ ಹಾಸ್ಟೆಲ್ ಸೌಲಭ್ಯ ಕಲ್ಪಿಸಿಲ್ಲ. ವಿವಿಯ ಕುಲಸಚಿವರ ಗಮನಕ್ಕೆ ತರಲಾಗಿ ಅವರು ಅ.17ರಿಂದ ಹಾಸ್ಟೆಲ್ ಸೌಲಭ್ಯ ಕಲ್ಪಿಸಿ, ಅಂದಿನಿಂದ ಆಹಾರದ ವ್ಯವಸ್ಥೆಯನ್ನೂ ಮಾಡಲಾಗುವುದು ಎಂದು ಭರವಸೆ ನೀಡಿದ್ದರು. ಆದರೆ ಯಾವುದೇ ಪ್ರಯೋಜನವಾಗಿಲ್ಲ. ಇದೀಗ 35 ಕಾನೂನು ವಿದ್ಯಾರ್ಥಿಗಳು ಉಳಿದುಕೊಳ್ಳಲು ಹಾಸ್ಟೆಲ್ ಸೌಲಭ್ಯ ಇಲ್ಲದೆ ಪರದಾಡುವಂತಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ನಾಳೆಯಿಂದಲೇ ಹಾಸ್ಟೆಲ್ ಮತ್ತು ಊಟದ ವ್ಯವಸ್ಥೆ ಕಲ್ಪಿಸುವುದಾಗಿ ಕುಲಪತಿಗಳು ಭರವಸೆ ನೀಡಿದ ಹಿನ್ನೆಲೆಯಲ್ಲಿ ಪ್ರತಿಭಟನೆ ಕೈಬಿಟ್ಟಿದ್ದೇವೆ. ಅದರಂತೆ ಅವರು ಕ್ರಮ ವಹಿಸಿಲ್ಲವೆಂದರೆ ಗುರುವಾರದಿಂದ ಅನಿರ್ದಿಷ್ಟಾವಧಿ ಪ್ರತಿಭಟನೆ ನಡೆಸಲಾಗುವುದು ಎಂದು ಜಿಲ್ಲಾ ಸಂಚಾಲಕ ವಿಜಯ್‌ಕುಮಾರ್ ತಿಳಿಸಿದರು. ಮೈಸೂರು ವಿವಿ ಘಟಕದ ಕಾರ್ಯದರ್ಶಿ ವೀರಭದ್ರ ಹಿರೇಮಠ್, ನಗರ ಸಮಿತಿ ಕಾರ್ಯದರ್ಶಿ ಅಭಿ, ಮೈಸೂರು ವಿವಿ ಕಾನೂನು ವಿದ್ಯಾರ್ಥಿಗಳಾದ ಗಿರೀಶ್, ಪ್ರಜ್ವಲ್, ಪ್ರಶಾಂತ್, ಶ್ರೀಕಾಂತ್, ಶಾಹು ಮಹಾರಾಜ್ ಮತ್ತಿತರರು ಪ್ರತಿಭಟನೆಯಲ್ಲಿ ಪಾಲ್ಗೊಂಡಿದ್ದರು.

ಇಂದು ಉದ್ಯಾನವನ, ಸ್ಮಶಾನಗಳ ಅಭಿವೃದ್ಧಿಗೆ ಚಾಲನೆ

ಮೈಸೂರು, ಅ.18(ಎಸ್‌ಪಿಎನ್)–ಮೈಸೂರು ನಗರ ಪಾಲಿಕೆ ವ್ಯಾಪ್ತಿಯ ವಾರ್ಡ್ ನಂ 48, 55, 56 ಮತ್ತು 65ನೇ ವಾರ್ಡ್‌ನಲ್ಲಿ ಪಾಲಿಕೆ ನಗರೋತ್ಥಾನ ವಿಭಾಗದ ವತಿಯಿಂದ ಉದ್ಯಾನವನ ಮತ್ತು ಸ್ಮಶಾನಗಳ ಅಭಿವೃದ್ಧಿ ಕಾಮಗಾರಿಗೆ ಶಾಸಕ ಎಸ್.ಎ.ರಾಮದಾಸ್ ಬುಧವಾರ ಚಾಲನೆ ನೀಡಲಿದ್ದಾರೆ.

ವಾರ್ಡ್ ನಂ 56ರ ಕೃಷ್ಣಮೂರ್ತಿಪುರಂನಲ್ಲಿರುವ ಅನಂತ ಸ್ವಾಮಿ ಉದ್ಯಾನವನ ಅಭಿವೃದ್ಧಿ ಕಾಮಗಾರಿಗೆ ಬೆಳಗ್ಗೆ 9 ಗಂಟೆಗೆ, ವಾರ್ಡ್ 56ರ ಅಶೋಕಪುರಂನ ಡಾ.ಬಿ.ಆರ್. ಅಂಬೇಡ್ಕರ್ ಉದ್ಯಾನವನ ಅಭಿವೃದ್ಧಿ ಕಾಮಗಾರಿ 9.20ಕ್ಕೆ, ವಾರ್ಡ್ 48ರ ಜಯನಗರ ಚಿನ್ನಗಿರಿ ಕೊಪ್ಪಲ್ ಮುಖ್ಯರಸ್ತೆ ಡಾಂಬರೀಕರಣ ಕಾಮಗಾರಿಗೆ ಬೆಳಗ್ಗೆ 9.40ಕ್ಕೆ, ವಾರ್ಡ್ 48ರಲ್ಲಿ ಪೈಲ್ವಾನ್ ಬಸವಯ್ಯ ಸಮುದಾಯ ಭವನದ ಶೌಚಾಲಯ ಕಾಮಗಾರಿ 10 ಗಂಟೆಗೆ, ವಾರ್ಡ್ 65ರ ಶ್ರೀರಾಂಪುರ –ದೇವಯ್ಯನಹುಂಡಿ ಸ್ಮಶಾನ ಅಭಿವೃದ್ಧಿ ಕಾಮಗಾರಿ 10.20ಕ್ಕೆ, ವಾರ್ಡ್ 55ರ ರಾಮಲಿಂಗೇಶ್ವರ ಉದ್ಯಾನವನ ಅಭಿವೃದ್ಧಿ ಕಾಮಗಾರಿ 10.40ಕ್ಕೆ ಚಾಲನೆ ದೊರಕಲಿದೆ. ಈ ವೇಳೆ ನಗರ ಪಾಲಿಕೆ ಸದಸ್ಯರಾದ ಎಂ.ಎಸ್.ಶೋಭ, ಪಲ್ಲವಿ ಬೇಗಂ, ಶೋಭ ಸುನೀಲ್ ಸೇರಿದಂತೆ ಸ್ಥಳೀಯ ಕಾರ್ಯಕರ್ತರು ನಗರಪಾಲಿಕೆ ಅಧಿಕಾರಿಗಳು ಉಪಸ್ಥಿತರಿರುತ್ತಾರೆ.

ಮೃತ್ಯುಂಜಯ ಹೋಮ

ಮೈಸೂರು, ಅ.18– ಶ್ರೀ ಶಿರಡಿ ಸಾಯಿ ಬಾಬಾ 104ನೇ ಪುಣ್ಯ ಸ್ಮರಣೆ ಪ್ರಯುಕ್ತ ಮೈಸೂರಿನ ಹೆಬ್ಬಾಳಿನ ಶ್ರೀ ಶಿರಡಿ ಸಾಯಿ ಸೇವಾಶ್ರಮ ಟ್ರಸ್ಟ್ ವತಿಯಿಂದ ಅ.20 ಮೃತ್ಯುಂಜಯ ಹೋಮವನ್ನು ಏರ್ಪಡಿಸಲಾಗಿದೆ. ಅಂದು ನಗರದ ಹೆಬ್ಬಾಳಿನ ಚೆನ್ನಮ್ಮ ಬಸ್ ಸ್ಟಾಂಡ್ ಹಿಂಭಾಗವಿರುವ ಬಾಬಾ ಮಂದಿರದಲ್ಲಿ ಸಂಜೆ 4ರಿಂದ ರಾತ್ರಿ 10ರವರೆಗೂ ವಿವಿಧ ಪೂಜಾ ಕೈಂಕರ್ಯಗಳು ನಡೆಯಲಿದೆ ಎಂದು ಪತ್ರಿಕಾ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹೆಚ್ಚಿನ ಮಾಹಿತಿಗಾಗಿ ಸಂಪರ್ಕಿಸಿ : 9986073507, 8152915666

ಕೇದಾರನಾಥ ದೇಗುಲಕ್ಕೆ ಯಾತ್ರಿಕರನ್ನು ಹೊತ್ತೊಯ್ಯುತ್ತಿದ್ದ ಹೆಲಿಕಾಪ್ಟರ್ ಪತನ: 7 ಮಂದಿ ಸಾವು

ಡೆಹ್ರಾಡೂನ್, ಅ.18– ಉತ್ತರಾಖಂಡದಲ್ಲಿನ ಕೇದಾರನಾಥ ದೇಗುಲಕ್ಕೆ ಯಾತ್ರಾರ್ಥಿಗಳನ್ನು ಹೊತ್ತೊಯ್ಯುತ್ತಿದ್ದ ಹೆಲಿಕಾಪ್ಟರ್ ಪತನಗೊಂಡಿದ್ದು, ಪೈಲಟ್ ಸೇರಿದಂತೆ 7 ಮಂದಿ ಸಾವನ್ನಪ್ಪಿರುವ ದುರಂತ ಮಂಗಳವಾರ ನಡೆದಿದೆ.

ಕೇದಾರನಾಥ್ ದೇವಸ್ಥಾನದಿಂದ 2 ಕಿ.ಮೀ ದೂರದಲ್ಲಿ ಈ ದುರಂತ ನಡೆದಿದೆ ಎಂದು ಅಧಿಕಾರಿಗಳು ಮಾಹಿತಿ ನೀಡಿದ್ದಾರೆ.

ಹೆಲಿಕಾಪ್ಟರ್‌ನಲ್ಲಿದ್ದ 8 ಮಂದಿ ಪೈಕಿ ಪೈಲಟ್ ಸೇರಿ 7 ಮಂದಿ ಸ್ಥಳದಲ್ಲೇ ದುರ್ಮರಣ ಹೊಂದಿದ್ದಾರೆ. ಘಟನಾ ಸ್ಥಳಕ್ಕೆ ಎನ್‌ಡಿಆರ್‌ಎಫ್, ಪೊಲೀಸರು ಧಾವಿಸಿದ್ದು, ರಕ್ಷಣಾ ಕಾರ್ಯಾಚರಣೆ ಆರಂಭಿಸಿದ್ದಾರೆ. ದುರಂತಕ್ಕೆ ಕಾರಣ ತಿಳಿದುಬಂದಿಲ್ಲ. ಘಟನೆಗೆ ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್ ಸಿಂಗ್ ಧಾಮಿ ಸಂತಾಪ ಸೂಚಿಸಿದ್ದಾರೆ. ಈ ಕುರಿತು ಸಾಮಾಜಿಕ ಜಾಲತಾಣದಲ್ಲಿ ಟ್ವೀಟ್ ಮಾಡಿರುವ ಅವರು, ಪರಿಹಾರ ಮತ್ತು ರಕ್ಷಣಾ ಕಾರ್ಯಕ್ಕಾಗಿ ಎಸ್‌ಡಿಆರ್‌ಎಫ್ ಮತ್ತು ಜಿಲ್ಲಾಡಳಿತ ತಂಡಗಳು ಸ್ಥಳಕ್ಕೆ ತಲುಪಿವೆ. ಈ ದುರಂತದ ಕುರಿತು ವಿವರವಾದ ತನಿಖೆಗೆ ಆದೇಶಿಸಲಾಗಿದೆ ಎಂದು ಹೇಳಿದ್ದಾರೆ.

'ವಾಗರ್ಥ', 'ಶರಣರ ಸುತ್ತ' ಹಾಗೂ 'ಅಜ್ಜ ಪ್ರತ್ಯಕ್ಷ' ಕೃತಿಗಳ ಬಿಡುಗಡೆ

ಕೃತಿಗಳು ಆಧುನಿಕ ಸಾಹಿತ್ಯ, ಕನ್ನಡ ಅರ್ಥ ಮಾಡಿಕೊಳ್ಳಲು ಸಹಕಾರಿ

ಮೈಸೂರು, ಅ.18(ಜಿಎ)–'ವಾಗರ್ಥ', 'ಶರಣರ ಸುತ್ತ' ಹಾಗೂ 'ಅಜ್ಜ ಪ್ರತ್ಯಕ್ಷ' ಕೃತಿಗಳ ಮೂಲಕ ಹಳೆಗನ್ನಡ, ವಚನ ಸಾಹಿತ್ಯ ಮತ್ತು ಆಧುನಿಕ ಸಾಹಿತ್ಯ ಸೇರಿದಂತೆ ಇತರೆ ಸಾಹಿತ್ಯ ಪ್ರಕಾರಗಳ ಬಗ್ಗೆ ಹಾಗೂ ಕನ್ನಡವನ್ನು ಅರ್ಥ ಮಾಡಿಕೊಳ್ಳಬಹುದಾಗಿದೆ ಎಂದು ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಡಾ.ಬಿ.ವಿ. ವಸಂತ ಕುಮಾರ್ ಅಭಿಪ್ರಾಯಪಟ್ಟರು.

ಮೈಸೂರು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್, ಕನ್ನಡ ಸಾಹಿತ್ಯ ಕಲಾಕೂಟ ಹಾಗೂ ಮೈಸೂರು ಸಂವಹನ: ಪ್ರಕಾಶಕರ ಸಹಯೋಗದಲ್ಲಿ ನಗರದ ಎಂ.ಜಿ. ರಸ್ತೆಯಲ್ಲಿರುವ ರಾಜೇಂದ್ರ ಭವನದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿಶ್ರಾಂತ ಇಂಗ್ಲಿಷ್ ಪ್ರಾಧ್ಯಾಪಕರಾದ ಡಾ.ಡಿ.ಎ.ಶಂಕರ್ ಅವರ 'ವಾಗರ್ಥ', 'ಶರಣರ ಸುತ್ತ' ಹಾಗೂ 'ಅಜ್ಜ ಪ್ರತ್ಯಕ್ಷ' ಮೂರು ಕೃತಿಗಳನ್ನು ಲೋಕಾರ್ಪಣೆಗೊಳಿಸಿ ಕೃತಿ ಕುರಿತು ಮಾತನಾಡಿದರು.



'ವಾಗರ್ಥ' ಕೃತಿಯಲ್ಲಿ 35ಕ್ಕೂ ಹೆಚ್ಚು ಲೇಖನಗಳಿವೆ. ಎಲ್ಲಾ ಪ್ರಕಾರದ ಸಾಹಿತ್ಯಗಳು ಇದರಲ್ಲಿ ಅಡಕವಾಗಿವೆ. ಕೃತಿ ವಿಮರ್ಶೆ ಮಾಡುವವರಿಗೆ ಮತ್ತೊಂದು ಕಣ್ಣು ತೆರೆಸುವ ರೀತಿಯಲ್ಲಿ ಡಾ.ಡಿ.ಎ. ಶಂಕರ್ ಅವರು ಕೃತಿಯನ್ನು ರಚಿಸಿದ್ದಾರೆ. 'ವಾಗರ್ಥ' ಎಂದರೆ ವಾಕ್ಯದ ಅರ್ಥ ಎಂಬ ಅರ್ಥವನ್ನು ನೀಡಲಿದ್ದು, ಕೃತಿಗಳನ್ನು ಅಧ್ಯಯನ ಮಾಡುವವರಿಗೆ ಇದು ಮೂಲದಂಡವಾಗಿರಬೇಕು ಎಂದರು.

ಡಾ.ಯು.ಆರ್. ಅನಂತಮೂರ್ತಿ ಅವರ ಒಂದು ಲೇಖನ ಕುರಿತು ಶಂಕರ್ ಅವರು ಕೋಪಗೊಂಡಿದ್ದಾಗ ಪತ್ರ ಬರೆಯುವ ಮುನ್ನ ಅವರು ತೆಗೆದುಕೊಂಡ ನಿರ್ಧಾರವನ್ನು ಇಲ್ಲಿ ಉಲ್ಲೇಖಿಸಿದ್ದಾರೆ. ಸಿಟ್ಟು ಬಂದಾಗ ಮಾತನಾಡಬಾರದು ಮತ್ತು ಏನು ಬರೆಯ ಬಾರದು ಎಂಬುದನ್ನು ಒಂದು ಲೇಖನಿ ಮೂಲಕ ತಿಳಿಸಿಕೊಟ್ಟಿದ್ದಾರೆ. ಹಾಗೇ ಡಿ.ವಿ.ಜಿ ಅವರ ಭಾರತೀಯ ಶೂದ್ರರ ಪುರಾಣ ಕೃತಿ ಬಗ್ಗೆಯೂ ವಿಮರ್ಶೆ ಮತ್ತು ಬಿ.ಎಂ.ಶ್ರೀ ಅವರ ಏನಿದೇ ನಿಮ್ಮ ಕನ್ನಡದಲ್ಲಿ ಎಂಬ ಕೃತಿ ಕುರಿತು ಜೊತೆಗೆ ಮೈಸೂರು ಅನಂತಸ್ವಾಮಿ ಅವರ ಮೈಸೂರು ಮಲ್ಲಿಗೆ ಬಗ್ಗೆಯೂ ವಿಮರ್ಶೆ ಮಾಡಿರುವುದು 'ವಾಗರ್ಥ' ಕೃತಿಯಲ್ಲಿದೆ ಎಂದರು.

ರಂಗಭೂಮಿಗೆ ಮೇಲೆ ತರಬಹುದಾದ ರೀತಿಯಲ್ಲಿ 'ಅಜ್ಜ ಪ್ರತ್ಯಕ್ಷ' ಎಂಬ ನಾಟಕ ಕೃತಿಯನ್ನು ಬರೆದಿದ್ದು, ಅದ್ಭುತವಾಗಿ ರಚನೆ ಮಾಡಿದ್ದಾರೆ. ಇತ್ತೀಚಿನ ದಿನಗಳಲ್ಲಿ ಮನುಷ್ಯನ ದನಿಯನ್ನು ಕೇಳದ ಸ್ಥಿತಿಗಳಿದ್ದು, ಇದರ ನಡುವೇ ಈ ಕೃತಿಯಲ್ಲಿ ಕಲ್ಲಿನ ಒಳಗೆ ಅಡಗಿರುವ ದನಿಯನ್ನು ವಿಮರ್ಶಿಸಿದ್ದಾರೆ. ಇದರಲ್ಲಿ ಬರುವ ಪ್ರತಿ ಪಾತ್ರಗಳಿಗೂ ಜೀವ ತುಂಬಿದ್ದಾರೆ ಎಂದರು. ಕಾರ್ಯಕ್ರಮದಲ್ಲಿ ಸುತ್ತೂರು ಕ್ಷೇತ್ರದ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ವಿಶ್ರಾಂತ ನಿರ್ದೇಶಕ ಡಾ.ಎನ್.ಎಂ.ತಳವಾರ್, ಕಸಾಪ ಜಿಲ್ಲಾಧ್ಯಕ್ಷ ಮಡ್ಡಿಕೆರೆ ಗೋಪಾಲ್, ಸಾಹಿತಿ ಡಾ.ಡಿ.ಎ.ಶಂಕರ್, ಶ್ರೀ ರಾಜೇಂದ್ರ ಪ್ರಿಂಟರ್ಸ್ ಅಂಡ್ ಪಬ್ಲಿಷರ್ಸ್‌ನ ಪ್ರಕಾಶಕರು ಮತ್ತು ಮುದ್ರಕರಾದ ಡಿ.ಎನ್. ಲೋಕಪ್ಪ ಮತ್ತು ಕನ್ನಡ ಸಾಹಿತ್ಯ ಕಲಾಕೂಟ ಅಧ್ಯಕ್ಷ ಎಂ. ಚಂದ್ರಶೇಖರ್ ಸೇರಿದಂತೆ ಮತ್ತಿತರರಿದ್ದರು.

ನಕ್ಕರೆ ಅದೇ ಸ್ವರ್ಗ

ಅವರು : (ಮನೆಗೆ ದುಬಾರಿ ಬಾಡಿಗೆ ಹೇಳಿದಾಗ) ಬಾಡಿಗೆ ಸ್ವಲ್ಪ ಕಡಿಮೆ ಮಾಡ್ಕೊಳ್ಳೀ!

ಮನೆ ಮಾಲೀಕ : ಬಾಡಿಗೆ ಕಮ್ಮಿ ಮಾಡೋಕಾಗಲ್ಲ. ಮಳೆಗಾಲದಲ್ಲಿ ಒಂದೈದನೂರು ರೂಪಾಯಿ ಕಡಿಮೆ ಕೊಡಿ. ಮನೆ ಸ್ವಲ್ಪ ಸೋರುತ್ತೆ!

ಮೈಸೂರು ಮಿತ್ರ

ಬುಧವಾರ, 19 ಅಕ್ಟೋಬರ್ 2022

ಸತ್ಯೇನೋತ್ತಭಿತಾ ಭೂಮಿಃ!! ನಹಿ ಸತ್ಯಾತ್ಪರೋ ಧರ್ಮಃ!
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತವಾಹಿನಿ..........

ನಮಗೇನು ಗೊತ್ತಿದೆ ಮತ್ತು ಏನು ಗೊತ್ತಿಲ್ಲ ಎನ್ನುವುದನ್ನು ತಿಳಿದುಕೊಳ್ಳುವುದೇ ನಿಜವಾದ ಜ್ಞಾನ. –ಕನ್‌ಫ್ಯೂಶಿಯಸ್

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ನಿಷ್ಠೆಯಿದ್ದವನಿಗೆ ನಷ್ಟವಿಲ್ಲ

ನಿಮ್ಮ ಪತ್ರಗಳು

ಶ್ರೀನಿವಾಸ ಪ್ರಸಾದ್ ನಿರ್ಧಾರ ಸ್ವಾಗತಾರ್ಹ

ಮಾನ್ಯರೆ,



ಹಿರಿಯ ರಾಜಕಾರಣಿ, ಮಾಜಿ ಕೇಂದ್ರ ಸಚಿವ, ಹಾಲಿ ಚಾಮರಾಜನಗರ ಮೀಸಲು ಕ್ಷೇತ್ರದ ಲೋಕಸಭಾ ಸದಸ್ಯ, ವಿ.ಶ್ರೀನಿವಾಸ್ ಪ್ರಸಾದ್ ರಾಜಕೀಯ ನಿವೃತ್ತಿ ಘೋಷಿಸಿರುವುದು ಸ್ವಾಗತಾರ್ಹವಾಗಿದೆ. ತಮ್ಮ ಮುಂದಿನ ಒಂದೂವರೆ ವರ್ಷಗಳ ಅವಧಿ ಮುಗಿದ ನಂತರ, ತಾವು ರಾಜಕೀಯ ನಿವೃತ್ತಿ ಪಡೆಯುವುದಾಗಿ ಹೇಳಿರುವ ಶ್ರೀನಿವಾಸ್ ಪ್ರಸಾದ್, ಕೇಂದ್ರ ಮತ್ತು ರಾಜ್ಯದಲ್ಲಿ ಸಚಿವರಾಗಿ ಕಾರ್ಯ ನಿರ್ವಹಿಸಿದ್ದಾರೆ. ಜಿಲ್ಲಾ ಉಸ್ತುವಾರಿ ಸಚಿವರಾಗಿ ಕೂಡ ಕಾರ್ಯ ನಿರ್ವಹಿಸಿದ್ದಾರೆ.

14 ಚುನಾವಣೆಯಲ್ಲಿ ಸ್ಪರ್ಧಿಸಿ, 11 ಚುನಾವಣೆಗಳಲ್ಲಿ ಜಯಭೇರಿ ಬಾರಿಸಿರುವ ಶ್ರೀನಿವಾಸ ಪ್ರಸಾದ್ ಕಳಂಕ ರಹಿತ ರಾಜಕಾರಣಿಗಳ ಪೈಕಿ ಒಬ್ಬರಾಗಿದ್ದಾರೆ. ರಾಜಕಾರಣಿಗಳಿಗೂ ಇತರ ಕ್ಷೇತ್ರಗಳಲ್ಲಿ ಇರುವ ಹಾಗೆ ನಿವೃತ್ತಿ ಇರಬೇಕು. ಅನೇಕ ರಾಜಕಾರಣಿಗಳು ತಮ್ಮ ಕೈಲಾಗದೆ ಹೋದರೂ 80–90 ವರ್ಷಗಳಾದರೂ ಸಹ, ಅಧಿಕಾರದ ವ್ಯಾಮೋಹಕ್ಕೆ ಬಲಿಯಾಗಿ ರಾಜಕಾರಣದಲ್ಲಿ ಮುಂದುವರೆಯುತ್ತಾರೆ. ಅಷ್ಟು ಸಾಲದು ಅನ್ನುವ ಹಾಗೆ ತಮ್ಮ ಮಕ್ಕಳು ಮೊಮ್ಮಕ್ಕಳು, ಮರಿ ಮಕ್ಕಳು ಇವರನ್ನೆಲ್ಲಾ ರಾಜಕೀಯಕ್ಕೆ ಕರೆತಂದು ಅಧಿಕಾರದಲ್ಲಿ ಕೂರಿಸುತ್ತಾರೆ. ಅಕ್ರಮ ಮಾರ್ಗಗಳಲ್ಲಿ ಕೋಟಿಗಟ್ಟಲೇ ಹಣ ಸಂಪಾದಿಸಿ ಲೆಕ್ಕವಿಲ್ಲದಷ್ಟು ಆಸ್ತಿ ಪಾಸ್ತಿ ಮಾಡಿಕೊಳ್ಳುತ್ತಾರೆ. ಕೆಲವು ದಿನಗಳ ಹಿಂದೆ ಸ್ಪೀಕರ್ ಆಗಿ ಕಾರ್ಯನಿರ್ವಹಿಸಿದಂತಹ ಹಿರಿಯ ರಾಜಕಾರಣಿಯೋರ್ವರು, ತಾವು ಮೂರು ತಲೆಮಾರಿಗೆ ಆಗುವಷ್ಟು ಆಸ್ತಿ ಪಾಸ್ತಿ ಮಾಡಿಕೊಂಡಿದ್ದು, ಅದಕ್ಕಾಗಿ ಪಕ್ಷಕ್ಕೆ ಋಣ ತೀರಿಸಬೇಕಾದ ಅಗತ್ಯವಿದೆ ಎಂದು ಹೇಳಿರುವುದು ಸಾಮಾಜಿಕ ತಾಣಗಳಲ್ಲಿ ವೈರಲ್ ಆಗಿತ್ತು.

ಈ ಹಿನ್ನೆಲೆಯಲ್ಲಿ ರಾಜಕಾರಣಿಗಳ ಬಗ್ಗೆ ಜನಸಾಮಾನ್ಯರಿಗೆ ಜಿಗುಪ್ಸೆ ಹುಟ್ಟಿದ್ದರೆ ಅಚ್ಚರಿಯಿಲ್ಲ. ರಾಜಕೀಯ ಎಂಬುದು ಇತ್ತೀಚಿನ ವರ್ಷಗಳಲ್ಲಿ ತೀರಾ ಗಬ್ಬೆದ್ದು, ಹೊಲಸೆದ್ದು ಹೋಗಿದೆ. ರಾಜಕಾರಣಿಗಳನ್ನು ಜನ ಸಂಶಯ ದೃಷ್ಟಿಯಿಂದ ನೋಡುವಂತಾಗಿದೆ. ಪ್ರಾಮಾಣಿಕ ರಾಜಕಾರಣಿಗಳನ್ನು ದುರ್ಬೀನು ಹಾಕಿಕೊಂಡು ಹುಡುಕುವಂತಾಗಿದೆ. ಈ ಹಿನ್ನೆಲೆಯಲ್ಲಿ ತಮ್ಮ ರಾಜಕೀಯ ನಿವೃತ್ತಿ ಘೋಷಿಸಿ ಹೊಸ ಪೀಳಿಗೆಗೆ ಅವಕಾಶ ಮಾಡಿಕೊಟ್ಟಿರುವ ಶ್ರೀನಿವಾಸ ಪ್ರಸಾದ್ ಅಭಿನಂದನಾರ್ಹರು. ಅವರ ಮೇಲ್ಪಂಕ್ತಿಯನ್ನು ಇತರ ರಾಜಕಾರಣಿಗಳು ಅನುಸರಿಸಲಿ.

–ಕೆ.ವಿ.ವಾಸು, ವಕೀಲರು ಮತ್ತು ನೋಟರಿ, ಮೈಸೂರು

ಪ್ರಶಸ್ತಿಯ ಮೌಲ್ಯ ಹೆಚ್ಚಿಸಿದ ಡಾ. ಶಂಕರೇಗೌಡರ ಆಯ್ಕೆ

ಮಾನ್ಯರೆ,



ಖಾಸಗಿ ಆಂಗ್ಲ ಸುದ್ದಿ ವಾಹಿನಿಯಾದ ಸಿಎನ್‌ಎನ್ ನ್ಯೂಸ್ 18 ಸಾಮಾಜಿಕ ಬದಲಾವಣೆಯ ವಿಭಾಗದಲ್ಲಿ "ಇಂಡಿಯನ್ ಆಫ್ ದಿ ಇಯರ್" ಪ್ರಶಸ್ತಿಯನ್ನು 5 ರೂಪಾಯಿ ಡಾಕ್ಟರ್ ಎಂದೇ ಖ್ಯಾತಿ ಗಳಿಸಿರುವ ಎಲೆ ಮರೆ ಕಾಯಿಯಂತೆ ಅವಿರತವಾಗಿ ಶ್ರಮಿಸಿ ಇಂದಿಗೂ ಸಮಾಜಕ್ಕೆ ಬೆಳಕಾಗುತ್ತಿರುವ ಮಂಡ್ಯದ ಡಾ. ಶಂಕರೇಗೌಡ ಅವರ ನಿಸ್ವಾರ್ಥ ಸೇವೆಯನ್ನು ಗುರುತಿಸಿ ನೀಡಿರುವುದು ಗೌರವದ ವಿಷಯ.

ಕಳೆದ ನಾಲ್ಕು ದಶಕಗಳಿಂದ ಕೇವಲ ಐದು ರೂಪಾಯಿಗೆ ಚಿಕಿತ್ಸೆ ನೀಡುವ ಮೂಲಕ ಬಡ ಜನರ ನಾನಾ ತರಹದ ಆರೋಗ್ಯದ ಸಮಸ್ಯೆಗಳಿಗೆ ಸ್ಪಂದಿಸಿ ಯಾವುದೇ ರೀತಿಯ ಪ್ರತಿಫಲಾಪೇಕ್ಷೆ ಇಲ್ಲದೆ ಸಾಮಾನ್ಯರಲ್ಲಿ ಸಾಮಾನ್ಯರಂತೆ ಹೊಲ ಗದ್ದೆಗಳಲ್ಲಿ ವ್ಯವಸಾಯದಲ್ಲೂ ತೊಡಗಿಕೊಳ್ಳುವ ಇವರ ಸರಳ ವ್ಯಕ್ತಿತ್ವ ಹಾಗೂ ಜನಸೇವೆಯ ಜನಾರ್ಧನ ಸೇವೆ ಎಂಬಂತೆ ಕಲಿತ ವಿದ್ಯೆಗೆ ಬೆಲೆ ಕೊಡುತ್ತಾ ತಮ್ಮ ಜೀವಮಾನವನ್ನು ಸಾರ್ವಜನಿಕರ ಸೇವೆಗೆ ಮುಡಿಪಾಗಿಟ್ಟ ಬದ್ಧತೆಯ ಸಾಮಾಜಿಕ ಕಳಕಳಿ ಸರ್ವರಿಗೂ ಪ್ರೇರಣೆಯಾಗಬೇಕು.!

ಉನ್ನತ ಶಿಕ್ಷಣ ಪಡೆದು ಹಣದಾಸೆಗಾಗಿ ವಿದೇಶಕ್ಕೆ ಹೋಗುವ ದೇಶದ ಯುವ ಸಮೂಹ ಮತ್ತು ಅಧಿಕಾರದ ಅಮಲಿನಲ್ಲಿ ಆಳ್ವಿಕೆ ನಡೆಸುವ ರಾಜಕೀಯ ಪಕ್ಷಗಳ ನಾಯಕರು, ಉನ್ನತ ಅಧಿಕಾರಿಗಳ ವರ್ಗ, ಮಾನದಂಡ, ಅರ್ಹತೆ ಇಲ್ಲದಿದ್ದರೂ ಡಾಕ್ಟರ್ ಗೌರವ ಹಾಗೂ ಇನ್ನಿತರರ ಶಿಫಾರಸಿನ ಮೇರೆಗೆ ಅಧಿಕಾರ, ಪುರಸ್ಕಾರಗಳನ್ನು ಪಡೆಯುವವರು ಇತ್ತೀಚಿನ ವರ್ಷಗಳಲ್ಲಿನ ನಕಲಿ ಸಾಧಕರು..

ಪ್ರಾಮಾಣಿಕ ಸೇವೆ ಹೇಗೆ ಮಾಡಬೇಕು? ತಾಯ್ನಾಡಿನ ಋಣ ಅಂದರೆ ಏನು? ಇಚ್ಛಾಶಕ್ತಿಯಿಂದ ಸಕ್ರಿಯರಾಗಿ ಕೆಲಸದಲ್ಲಿ ತೊಡಗಿಕೊಳ್ಳುವ ಬಗೆ ಹೇಗೆ? ಎನ್ನುವುದನ್ನು ಐದು ರೂಪಾಯಿ ಮಂಡ್ಯ ಡಾಕ್ಟರ್ ಶಂಕರೇಗೌಡ ಅವರನ್ನು ನೋಡಿ ಕಲಿತು ಅಳವಡಿಸಿಕೊಳ್ಳಬೇಕು. ಆಗ ಸಮ ಸಮಾಜದ ಉನ್ನತಿ, ಸ್ವಾಸ್ಥ್ಯ ಎಲ್ಲವೂ ಸುಂದರವಾಗಿರುತ್ತದೆ. ಇವರು ಪಡೆದ ರಾಷ್ಟ್ರೀಯ ಮಟ್ಟದ ಈ ಪ್ರತಿಷ್ಠಿತ ಪ್ರಶಸ್ತಿಗೆ ಅತ್ಯಂತ ಹೆಚ್ಚು ಅರ್ಹರು.

– ಅನಿಲ್ ಕುಮಾರ್, ನಂಜನಗೂಡು..

ಕೂತು ತಿನ್ನುವ ಸಂಸ್ಕೃತಿಯನ್ನು ಸರಕಾರ ಬೆಳೆಸಬೇಕಾ?

ಮಾನ್ಯರೆ,

ಜನರ ಕೆಲಸ ಮಾಡಿ ಇಲ್ಲಾಂದ್ರೆ ಸ್ಥಾನ ಬಿಟ್ಟು ಹೋಗಿ ಎಂದ ಮುಖ್ಯಮಂತ್ರಿಗಳ ಎಚ್ಚರಿಕೆಯ ಸುದ್ದಿ ಪ್ರಕಟವಾಗಿದೆ. ಮುಖ್ಯ ಮಂತ್ರಿಗಳು ಹೀಗೆ ಹೇಳುವುದರಲ್ಲಿ ಅರ್ಥವಿಲ್ಲ. ಜನರ ಕೆಲಸ ಮಾಡಬೇಕಾದ ಅಧಿಕಾರಿಗಳು ಕೆಲಸ ಮಾಡಲು ವಿಫಲರಾದರೆ ಅವರನ್ನು ಕೆಲಸದಿಂದ ವಜಾ ಮಾಡುತ್ತೇನೆಂದು ಮುಖ್ಯಮಂತ್ರಿಗಳು ಹೇಳಬೇಕಾಗಿತ್ತು. ಜನರ ಕೆಲಸ ಮಾಡದ ಅಧಿಕಾರಿಗಳಿಗೆ ಜನರ ತೆರಿಗೆಯ ಹಣದಿಂದ ಸಂಬಳ ನೀಡಿ ಹಾಯಾಗಿ ಕೂತು ತಿನ್ನುವ ಸಂಸ್ಕೃತಿಯನ್ನು ಸರಕಾರ ಬೆಳೆಸಬೇಕಾ? ಎಪ್ಪತ್ತೆರಡು ವರ್ಷದವನಾದ ನನಗೆ ಎಲ್ಲೋ ಕೆಲವು ಒಳ್ಳೆಯ ನೌಕರರ ಕೆಲಸವನ್ನು ಹೊರತುಪಡಿಸಿದರೆ ಶೇ. 75 ರಷ್ಟು ನೌಕರರ ಕೆಲಸ ತೃಪ್ತಿ ತಂದಿಲ್ಲ. ನಿಯಮಾನುಸಾರ ಕೆಲಸ ಮಾಡುತ್ತೇವೆಂಬ ಕಾರಣದಿಂದ ಜನಸಾಮಾನ್ಯರ ಕೆಲಸ ಮಾಡಲು ಆಲಸಿಗರಾಗಿ ವರ್ತಿಸುವ ನೌಕರರೇ ಹಚ್ಚಿನ ಮಂದಿ ಸರಕಾರಿ ಉದ್ಯೋಗದಲ್ಲಿದ್ದಾರೆ.!

–ಕೊ.ಸು.ನರಸಿಂಹಮೂರ್ತಿ, ಹಿರಿಯ ನಾಗರಿಕ, ಚಾಮರಾಜಪುರಂ, ಮೈಸೂರು


ಯಾತ್ರೆಯ ಪಾತ್ರ



ಬಿಚ್ಚು ನುಡಿ

ವಿಕ್ರಂ ಮುತ್ತಣ್ಣ





ಭಾರತ್ ಜೋಡೋ ಯಾತ್ರೆಯಲ್ಲಿ ರಾಹುಲ್ ಗಾಂಧಿಯವರು ಮಗುವೊಂದನ್ನು ಮುದ್ದಿಸುತ್ತಿರುವುದು. ಬಲಚಿತ್ರದಲ್ಲಿ ಬಿಜೆಪಿ ಕರ್ನಾಟಕ ಘಟಕವು ಅಕ್ಟೋಬರ್ 8 ರಂದು 'ಕನ್ನಡ ಪ್ರಭ' ಪತ್ರಿಕೆಯಲ್ಲಿ ನೀಡಿದಂತಹ ಜಾಹೀರಾತು.

ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ನೇತೃತ್ವದ "ಭಾರತ್ ಜೋಡೋ ಯಾತ್ರೆಯು (ಭಾರತವನ್ನು ಒಗ್ಗೂಡಿಸುವ ಯಾತ್ರೆ) ಸಾಗುತ್ತಿದೆ. ಕಾಂಗ್ರೆಸ್ ಪಕ್ಷದ ಭಾರತ್ ಜೋಡೋ ಯಾತ್ರೆ ಮಹದುದ್ದೇಶಕ್ಕಿಂತಲೂ ಹೆಚ್ಚಾಗಿ ಆ ಪಕ್ಷದಲ್ಲಿನ ಆಂತರಿಕ ಒಡಕಿನಿಂದಾಗಿ ಇದು "ಕಾಂಗ್ರೆಸ್ ಜೋಡೋ" ಯಾತ್ರೆಯೇನೋ ಎಂಬ ಭಾವನೆಯನ್ನು ಜನರಲ್ಲಿ ಮೂಡಿಸುತ್ತದೆ.

ರಾಹುಲ್ ಗಾಂಧಿಯವರು ನಮ್ಮ ವೈವಿಧ್ಯಮಯ ದೇಶವನ್ನು ಒಗ್ಗೂಡಿಸುವ ವಿಚಾರವನ್ನು ನಿಜಕ್ಕೂ ಗಂಭೀರವಾಗಿ ತೆಗೆದುಕೊಂಡಿದ್ದರೆ, ಅವರು ಅಪ್ಪಟ ಜಾತ್ಯಾತೀತರಾಗಬೇಕಾಗಿತ್ತು. ತಮಿಳುನಾಡಿನ ಕನ್ಯಾಕುಮಾರಿಯ ಧಾರ್ಮಿಕ ಮುಖಂಡರೊಬ್ಬರು ಹಿಂದೂ ಧರ್ಮವನ್ನು ಅಪಹಾಸ್ಯ ಮಾಡಿದಾಗ, ರಾಹುಲ್ ಗಾಂಧಿ ಬಾಯಿ ಮುಚ್ಚಿಕೊಂಡಿದ್ದರು. ಈ ಮೂಲಕ ರಾಹುಲ್ ಗಾಂಧಿ ತಮ್ಮ ಜಾತ್ಯಾತೀತ ಮನೋಭಾವನೆಯನ್ನು ಸಾಬೀತುಪಡಿಸುವ ಒಂದು ಸುವರ್ಣಾವಕಾಶವನ್ನು ಅಂದು ಅವರೇ ಕಳೆದುಕೊಂಡರು.

ಈಗೇನೋ ಕಾಂಗ್ರೆಸ್ ಭಾರತ್ ಜೋಡೋ ಯಾತ್ರೆ ನಡೆಸುವ ಹಕ್ಕನ್ನು ಹೊಂದಿದೆ. ಆದರೆ ಈ ಯಾತ್ರೆಯನ್ನು ಮಹಾತ್ಮ ಗಾಂಧಿ ನೇತೃತ್ವದ ದಂಡಿಯಾತ್ರೆಗೆ ಹೋಲಿಕೆ ಮಾಡುವುದು ಅಜ್ಞಾನದ ಪರಮಾವಧಿಯಾಗಿದೆ! ತೆಲಂಗಾಣ ಪ್ರದೇಶ ಕಾಂಗ್ರೆಸ್ ಅಧ್ಯಕ್ಷ ಎ.ರೇವಂತ್ ರೆಡ್ಡಿ, ರಾಹುಲ್ ಗಾಂಧಿ ನೇತೃತ್ವದ ಭಾರತ್ ಜೋಡೋ ಯಾತ್ರೆಯು ಮಹಾತ್ಮ ಗಾಂಧೀಜಿಯವರ ದಂಡಿಯಾತ್ರೆಗೆ ಸಮ ಎಂದು ಹೇಳಿದ್ದಾರೆ.

1930ರಲ್ಲಿ ಕಾಲಿಗೆ ಬರೀ ಚಪ್ಪಲಿ, ಒಂದು ಧೋತಿ, ಒಂದು ಶಾಲು ತೊಟ್ಟುಕೊಂಡಿದ್ದ 62 ವರ್ಷದ ಪೀಚಲು ಶರೀರದ ಮಹಾತ್ಮ ಗಾಂಧಿಯವರು 386 ಕಿ.ಮಿ. ದೂರ ದಂಡಿ ಯಾತ್ರೆಯನ್ನು ಸುಡುವ ಬಿಸಿಲನ್ನು ಲೆಕ್ಕಿಸದೇ ನಡೆಸಿದ್ದರು. ಈ ಯಾತ್ರೆಯಿಂದಾಗಿ ನಾಗರಿಕ ಅಸಹಕಾರ ಚಳವಳಿಯೂ ಪ್ರಾರಂಭವಾಯಿತು. ಇದು ಅಹಿಂಸಾ ಮಾರ್ಗದ ಮೂಲಕ ದೇಶದ ಸ್ವಾತಂತ್ರ್ಯಕ್ಕೆ ನಾಂದಿಯಾಯಿತು.

ರಾಹುಲ್ ಗಾಂಧಿಯವರು ಈಗಾಗಲೇ 1,000 ಕಿ.ಮೀ.ಗೂ ಅಧಿಕ ದೂರ ಕ್ರಮಿಸಿದ್ದಾರೆ. ಮಾರ್ಗದುದ್ದಕ್ಕೂ ಅಲ್ಲಲ್ಲಿ ಅವರಿಗೆ ಸುಖದಾಯಕ ನಿದ್ರೆಗೆ ವ್ಯವಸ್ಥೆ ಮಾಡಲಾಗಿದೆ. ಪ್ರತಿ ಎರಡು ವಾರಕ್ಕೊಮ್ಮೆ ಪ್ರಖ್ಯಾತ ಕಂಪನಿಯ ಒಂದು ಜೊತೆ ಬ್ರಾಂಡೆಡ್ ಸ್ಪೋರ್ಟ್ಸ್ ಶೂಗಳನ್ನು ಕಳಿಸಲಾಗುತ್ತಿದೆ. ಹಾಗೂ ದೈಹಿಕವಾಗಿ ಪುನಶ್ಚೇತನಗೊಳ್ಳುವ ಸಲುವಾಗಿ ಸಾಂದರ್ಭಿಕವಾಗಿ ರೆಸಾರ್ಟ್ ಮತ್ತು ಸ್ಪಾಗಳಲ್ಲಿ ತಂಗಲು ಎರಡು ದಿನಗಳ ಬಿಡುವು ನೀಡಲಾಗುತ್ತದೆ (ಮೈಸೂರಿನಲ್ಲಿ ತಂಗಿದ್ದ ಹಾಗೆ). ಹಾಗಾಗಿ, ರಾಹುಲ್ ಗಾಂಧಿ ಅವರ "ಭಾರತ್ ಜೋಡೋ ಯಾತ್ರೆ"ಯನ್ನು ಮಹಾತ್ಮ ಗಾಂಧಿ ಅವರ ದಂಡಿಯಾತ್ರೆಗೆ ಹೋಲಿಸುವುದು ಹಾಸ್ಯಾಸ್ಪದವಾಗುತ್ತದೆ.

ಬಹುತೇಕ ಆಧುನಿಕ ಯಾತ್ರೆಗಳು ರಾಜಕೀಯ ಲಾಭ ಪಡೆಯುವ ದೃಷ್ಟಿಯಿಂದಲೇ ಸೃಷ್ಟಿಸಲಾದ ಅವಕಾಶವಾದಿತನವೇ ಹೊರತು ಇವುಗಳಿಂದ ಜನಸಾಮಾನ್ಯರಿಗೇನು ಹೆಚ್ಚಿನ ಒಳಿತಾಗುವುದಿಲ್ಲ.

1990ರಲ್ಲಿ, ಆಗಿನ ಭಾರತೀಯ ಜನತಾ ಪಕ್ಷದ ಅಧ್ಯಕ್ಷರಾಗಿದ್ದ ಎಲ್.ಕೆ.ಅಡ್ವಾನಿಯವರು ಅಯೋಧ್ಯ ಚಳುವಳಿಗೆ ದೇಶದ ಜನರ ಬೆಂಬಲ ಗಿಟ್ಟಿಸಿಕೊಳ್ಳಲು, ಪಾದಯಾತ್ರೆಗೆ ನಿರ್ಧರಿಸಿದಾಗ, ದಿವಂಗತ ಪ್ರಮೋದ್ ಮಹಾಜನ್, ಒಂದೊಮ್ಮೆ ಪಾದಯಾತ್ರೆ ಹೊರಟರೆ, ಅದು ದೀರ್ಘ ಕಾಲ ಹಿಡಿಯುತ್ತದೆ ಎಂದು ಹೇಳಿದ್ದರು. ಅದಕ್ಕೆ ಅಡ್ವಾನಿಯವರು ಪ್ರತಿಕ್ರಿಯಿಸಿ ಹಾಗಾದರೆ "ಒಂದು ಜೀಪ್ ಯಾತ್ರೆ" ಮಾಡೋಣ ಎಂದಿದ್ದರು.

ಆದರೆ ಜೀಪ್ ಯಾತ್ರೆ ದೃಶ್ಯ ಪರಿಪೂರ್ಣತೆ ಅಥವಾ ಮನವಿಯನ್ನು ಪರಿಪೂರ್ಣಗೊಳಿಸದು. ಹಾಗಾಗಿ ಅತ್ಯಂತ ಚಾಲಾಕಿತನದ ಪ್ರಮೋದ್ ಮಹಾಜನ್ ಮಿನಿ ಬಸ್ ಅನ್ನು ತೆಗೆದುಕೊಂಡು ರಥದ ಮಾದರಿ ಪುನರ್‌ವಿನ್ಯಾಸಗೊಳಿಸುವುದೆಂದು ಸಲಹೆಯನ್ನಿತ್ತರು. ಮತಬ್ರಾಂತರನ್ನು ಆಕರ್ಷಿಸಲು ಇದೊಂದು ಪರಿಪೂರ್ಣವಾದ ದೃಶ್ಯ ಮನವಿ.

ಅದೇ ರೀತಿ, 'ಭಾರತ್ ಜೋಡೋ' ಯಾತ್ರೆಯ ಸಂದರ್ಭದಲ್ಲಿ, ರಾಹುಲ್ ಗಾಂಧಿಯವರು ಸುರಿಯುತ್ತಿರುವ ಮಳೆಯ ನಡುವೆಯೂ ಭಾಷಣ ಮಾಡುವುದು, ಮಕ್ಕಳೊಡನೆ ಆಟವಾಡುತ್ತಿರುವುದು, ಅವುಗಳನ್ನು ಎತ್ತಿ ಮುದ್ದಾಡುತ್ತಿರುವುದು ಹಾಗೂ ಹಿರಿಯರೊಂದಿಗೆ ಸಂವಾದಿಸುತ್ತಿರುವ ಚಿತ್ರಗಳ ಪ್ರದರ್ಶನ ಹೃದಯವನ್ನು ಗೆಲ್ಲುವಂತಹ ದೃಶ್ಯಗಳಾಗಿದ್ದು, ಮತದಾನದ ದಿನದಂದು ಅಡ್ಡಗೋಡೆ ಮೇಲೆ ಕುಳಿತ ಮತದಾರರ ಮನಸ್ಸನ್ನು ಬದಲಾಯಿಸುವ ಉದ್ದೇಶವನ್ನು ಹೊಂದಿರಬಹುದು.

ಈ ಯಾತ್ರೆಯು ರಾಹುಲ್ ಗಾಂಧಿ ಹಾಗೂ ಕಾಂಗ್ರೆಸ್ ಪಕ್ಷಕ್ಕೆ ಮಹತ್ವದ್ದಾಗಿದೆ. ಅದು ಭಾರತ್ ಜೋಡೋ ಯಾತ್ರೆಯಾಗಿರಬಹುದು. ಅದಕ್ಕೂ ಮಿಗಿಲಾಗಿ ಅದು ಕಾಂಗ್ರೆಸ್ ಬಚಾವೋ ಯಾತ್ರೆಯೂ ಆಗಿದೆ!

1977 ಹಾಗೂ 1989ರ ಲೋಕಸಭಾ ಚುನಾವಣೆಗಳಲ್ಲಿ ಪರಾಭವದ ಬಳಿಕ ದಿವಂಗತ ಇಂದಿರಾಗಾಂಧಿ ಹಾಗೂ ರಾಜೀವ್ ಗಾಂಧಿಯವರು ಅನುಕ್ರಮವಾಗಿ ಯಾತ್ರೆಗಳ ಮೊರೆ ಹೊಕ್ಕರು. ಅವರೇನು ಮುಂದಿನ ಚುನಾವಣೆಗಳಲ್ಲಿ ಜಯವನ್ನೇನು ಗಳಿಸಲಿಲ್ಲ. ಆದರೆ ಕೆಲವು ವಿನಾಯಿತಿಗಳಿವೆ.

ಆದರೆ, ಇದು ಬಿಜೆಪಿಗೆ ಅನುಕೂಲ ತಂದುಕೊಟ್ಟಿದೆ. 1990ರಲ್ಲಿ ಎಲ್.ಕೆ.ಅಡ್ವಾನಿಯವರು ರಥಯಾತ್ರೆ ಕೈಗೊಂಡಾಗ 85 ಸ್ಥಾನಗಳನ್ನು ಹೊಂದಿದ್ದ ಬಿಜೆಪಿಯ ಸಂಖ್ಯೆ 1991ರಲ್ಲಿ 120ಕ್ಕೆ ಏರಿತು.

ಇತ್ತೀಚಿನ ವರ್ಷಗಳಲ್ಲಿ ಯಾತ್ರೆಗಳು ಕೆಲವು ರಾಜಕಾರಣಿಗಳಿಗೆ ಅನುಕೂಲಕರವಾಗಿ ಪರಿಣಮಿಸಿವೆ. 1983ರಲ್ಲಿ ಅಂದಿನ ಜನತಾ ಪಕ್ಷದ ಅಧ್ಯಕ್ಷರಾಗಿದ್ದ ಚಂದ್ರಶೇಖರ್‌ರವರು ಕನ್ಯಾಕುಮಾರಿಯಿಂದ ನವದೆಹಲಿಯಲ್ಲಿನ ಮಹಾತ್ಮ ಗಾಂಧಿಯವರ ಸಮಾಧಿ ಸ್ಥಳ ರಾಜ್‌ಘಾಟ್‌ವರೆಗೆ 4,000 ಕಿ.ಮೀ. ಉದ್ದದ ಪಾದಯಾತ್ರೆ ನಡೆಸಿದ್ದರು. 1990ರಲ್ಲಿ ಅವರು ಪ್ರಧಾನಮಂತ್ರಿ ಹುದ್ದೆಗೇರಿದರು.

2003ರಲ್ಲಿ ಅಂದಿನ ಅಖಂಡ ಆಂಧ್ರಪ್ರದೇಶದಲ್ಲಿ ಕಾಂಗ್ರೆಸ್ ನಾಯಕ ವೈ.ಎಸ್.ರಾಜಶೇಖರ ರೆಡ್ಡಿಯವರು 1500 ಕಿ.ಮೀ. ಅಂತರದ ಎರಡು ತಿಂಗಳ ಕಾಲ ಪಾದಯಾತ್ರೆ ಕೈಗೊಂಡಿದ್ದರು. ಅದರ ಮುಂದಿನ ವರ್ಷವೇ ಅವರು ಆಂಧ್ರಪ್ರದೇಶದ ಮುಖ್ಯಮಂತ್ರಿಯಾದರು.

ಅವರ ಮಗ ಜಗನ್ ಮೋಹನ ರೆಡ್ಡಿ ಸಹ ಇದೇ ರಾಜಕೀಯ ತಂತ್ರಗಾರಿಕೆ ಅಳವಡಿಸಿಕೊಂಡರು. ಅವರು ಆ ರಾಜ್ಯದ 13 ಜಿಲ್ಲೆಗಳಲ್ಲಿ 340 ದಿನಗಳ ಕಾಲ 3,500 ಕಿ.ಮೀ. ಉದ್ದದ ಪಾದಯಾತ್ರೆ ಮಾಡಿದರು. ಎರಡು ವರ್ಷಗಳ ನಂತರ, ಅಂದರೆ, 2019ರಲ್ಲಿ ಜಗನ್ ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಿ ಪ್ರಮಾಣ ವಚನ ಸ್ವೀಕರಿಸಿದರು.

ಅತ್ಯಂತ ಕುತೂಹಲಕಾರಿ ಸಂಗತಿ ಎಂದರೆ, ಜಗನ್ 2013ರಲ್ಲಿ ಸೋಲಿಸಿ, ಗದ್ದುಗೆಗೇರಿದ್ದು, 1,700 ಕಿ.ಮೀ ಉದ್ದದ ಪಾದಯಾತ್ರೆ ಕೈಗೊಂಡು, 2014ರಲ್ಲಿ ಆಂಧ್ರಪ್ರದೇಶದ ಮುಖ್ಯಮಂತ್ರಿಯಾಗಿದ್ದ ತೆಲುಗು ದೇಶಂ ಪಕ್ಷದ ನಾಯಕ ಎನ್. ಚಂದ್ರಬಾಬು ನಾಯ್ಡು ಅವರನ್ನು.

2010ರಲ್ಲಿ ಸಿದ್ದರಾಮಯ್ಯ ನೇತೃತ್ವದಲ್ಲಿ ಬೆಂಗಳೂರಿನಿಂದ ಬಳ್ಳಾರಿವರೆಗೆ ನಡೆದ ಪಾದಯಾತ್ರೆಯನ್ನು ನಾವು ಹೇಗೆ ಮರೆಯಲು ಸಾಧ್ಯ? ಈ ಯಾತ್ರೆಯು, ಬಳ್ಳಾರಿಯಲ್ಲಿ ನಡೆಯುತ್ತಿದ್ದ ಅಕ್ರಮ ಗಣಿಗಾರಿಕೆಯನ್ನು ತಡೆಯುವಲ್ಲಿ ವಿಫಲವಾಗಿದ್ದ ಅಂದಿನ ರಾಜ್ಯ ಬಿಜೆಪಿ ಸರ್ಕಾರದ ವಿರುದ್ಧವಾಗಿತ್ತು.

ಕೊನೆಗೆ ಈ ಯಾತ್ರೆ ಸಿದ್ದರಾಮಯ್ಯನವರನ್ನು ಕಾಂಗ್ರೆಸ್ ನಾಯಕರನ್ನಾಗಿ ರೂಪಿಸಿತು. ಮಾತ್ರವಲ್ಲ ಅವರನ್ನು ಕಾಂಗ್ರೆಸ್ ಪಕ್ಷದ ಕಾರ್ಯಕರ್ತರು ನಾಯಕನೆಂದು ಒಪ್ಪಿಕೊಳ್ಳುವಂತೆ ಮಾಡಿತು. ಅಲ್ಲಿಂದ ಮೂರು ವರ್ಷಗಳ ನಂತರ, ಅಂದರೆ, 2013ರಲ್ಲಿ ಸಿದ್ದರಾಮಯ್ಯ ರಾಜ್ಯದ ಮುಖ್ಯಮಂತ್ರಿಯಾದರು. ಅದೇ ರೀತಿಯಲ್ಲಿ, "ಭಾರತ್ ಜೋಡೋ ಯಾತ್ರೆಯು ರಾಹುಲ್ ಗಾಂಧಿಯವರ ರಾಜಕೀಯ ಭವಿಷ್ಯವನ್ನು ಉಜ್ವಲಗೊಳಿಸುವುದೇ? ಇದುವರೆಗಂತೂ ಯಾತ್ರೆಗಳು ರಾಹುಲ್ ಗಾಂಧಿಗೆ ಸಹಾಯಕಾರಿಯಾಗಿಲ್ಲ.

2015ರಲ್ಲಿ ರಾಹುಲ್ ಗಾಂಧಿ, ಮಹಾರಾಷ್ಟ್ರ ಮತ್ತು ತೆಲಂಗಾಣ ರಾಜ್ಯಗಳಲ್ಲಿ "ರೈತರ ಪಾದಯಾತ್ರೆ" ನಡೆಸಿದರು. ಈ ಯಾವೊಂದು ರಾಜ್ಯದಲ್ಲಿಯೂ ಕಾಂಗ್ರೆಸ್ ಪಕ್ಷಕ್ಕೆ ಅನುಕೂಲಕಾರಿಯಾಗಲಿಲ್ಲ.

2016ರಲ್ಲಿ ರಾಹುಲ್ ಗಾಂಧಿಯವರು, "ದಿಯೋರಿಯಾದಿಂದ ದಿಲ್ಲಿಯವರೆಗೆ" ಯಾತ್ರೆ ಕೈಗೊಂಡು, 3,400 ಕಿ.ಮೀ. ಅಂತರ ಕ್ರಮಿಸಿದರು. ಹಾಗೂ 141 ವಿಧಾನಸಭಾ ಕ್ಷೇತ್ರಗಳಿಗೆ ಭೇಟಿ ನೀಡಿ ಉತ್ತರಪ್ರದೇಶದಲ್ಲಿ ಕಾಂಗ್ರೆಸ್ ಪಕ್ಷದ 27 ವರ್ಷಗಳ ವನವಾಸಕ್ಕೆ ಅಂತ್ಯ ಹಾಡಲು ಉದ್ದೇಶಿಸಿದ್ದರು. ಆದರೆ, ಅಯ್ಯೋ, 2017ರ ಉತ್ತರಪ್ರದೇಶ ವಿಧಾನಸಭಾ ಚುನಾವಣೆಯಲ್ಲಿ ಕಾಂಗ್ರೆಸ್ ಪಕ್ಷ ಕೇವಲ 7 ಸ್ಥಾನಗಳನ್ನು ಪಡೆಯಿತು.

2020ರಲ್ಲಿ ರಾಹುಲ್ ಗಾಂಧಿ ವಿವಾದಾತ್ಮಕ ಕೃಷಿ ಕಾನೂನುಗಳ ವಿರುದ್ಧ ಹೋರಾಡಲು ಪಂಜಾಬಿನಲ್ಲಿ "ಕೃಷಿ ಉಳಿಸಿ" ಎಂಬ ಮೂರು ದಿನಗಳ ಯಾತ್ರೆ ಕೈಗೊಂಡರು. ಆದರೆ ಆ ಪ್ರತಿಭಟನೆಯನ್ನು ಅವರಿಂದ ಬೇರೆಯವರು ಹೈಜಾಕ್ ಮಾಡಿದರು. ಈಗ ಪಂಜಾಬಿನಲ್ಲಿ ಆಮ್ ಆದ್ಮಿ ಪಕ್ಷದ (ಎಎಪಿ) ಆಳ್ವಿಕೆ ಇದೆ!

ಕರ್ನಾಟಕದಲ್ಲಿ ಬಿಜೆಪಿ ರಕ್ಷಣಾ ಪಥದಲ್ಲಿದೆ:

ರಾಹುಲ್ ಗಾಂಧಿಯವರಿಗೆ ಯಾತ್ರೆಗಳು ಫಲಪ್ರದವಾಗದೆ ಹೋಗಿರಬಹುದು. ಆದರೆ ಅವರು ಯಾತ್ರೆಯ ನೆಪದಲ್ಲಿ ಕರ್ನಾಟಕಕ್ಕೆ ಬಂದಿರುವುದು ನಮಗೆ ಸಂತಸ ಉಂಟು ಮಾಡಿದೆ. ಏಕೆಂದರೆ ರಾಜ್ಯದಲ್ಲಿ ಬಿಜೆಪಿಗೆ ಬಿಸಿ ಮುಟ್ಟಿಸುವ ಅಗತ್ಯವಿದೆ. ರಾಹುಲ್ ಗಾಂಧಿಯವರು, ಮೈಸೂರನ್ನು ಹಾದುಹೋದ ಕೆಲ ದಿನಗಳ ನಂತರ ಎಲ್ಲಾ ರಾಜ್ಯ ಮಟ್ಟದ ಪತ್ರಿಕೆಗಳಲ್ಲಿ ಒಂದು ಜಾಹೀರಾತು ಪ್ರಕಟವಾಯಿತು. ಆ ಜಾಹೀರಾತಿನಲ್ಲಿ: **"ರಾಹುಲ್ ಗಾಂಧಿ, ವೀರೇಂದ್ರ ಪಾಟೀಲ್, ದೇವರಾಜ ಅರಸು ಹಾಗೂ ಎಸ್.ಬಂಗಾರಪ್ಪ ನಂತರ ಮತ್ಯಾವ ಕನ್ನಡಿಗ ನಾಯಕರನ್ನು ಅಪಮಾನಿಸುವ ಹುನ್ನಾರದಲ್ಲಿದ್ದೀರ?**

ಎಂತಹ ಅಕಾಲಿಕವಾದ, ಗೊತ್ತುಗುರಿಯಿಲ್ಲದ ಹಾಗೂ ಅನವಶ್ಯಕ ಜಾಹೀರಾತು ಇದು?

ಕಾಂಗ್ರೆಸ್ ಪಕ್ಷವು ದೆಹಲಿಯ ವ್ಯಕ್ತಿಯನ್ನು ಮುಖ್ಯಮಂತ್ರಿಯನ್ನಾಗಿ ಮಾಡಲು ವೀರೇಂದ್ರ ಪಾಟೀಲ್, ದೇವರಾಜ ಅರಸು ಹಾಗೂ ಎಸ್. ಬಂಗಾರಪ್ಪನವರನ್ನು ಮುಖ್ಯಮಂತ್ರಿ ಹುದ್ದೆಯಿಂದ ತೆಗೆಯಲಿಲ್ಲ; ಬೇರೊಬ್ಬ ಕನ್ನಡಿಗನಿಂದಲೇ ಸ್ಥಾನವನ್ನು ತುಂಬಿದರು. ಆದ್ದರಿಂದ ಇಲ್ಲಿ ಕನ್ನಡಿಗರನ್ನು ಅಪಮಾನಗೊಳಿಸಿದ ಪ್ರಶ್ನೆ ಹೇಗೆ ಉದ್ಭವಿಸುತ್ತದೆ?

ಇಂತಹ ಜಾಹೀರಾತು ನೀಡುವ ಅಗತ್ಯವಾದರೂ ಏನು? ರಾಹುಲ್ ಗಾಂಧಿಯವರ ಯಾತ್ರೆಯು ಕರ್ನಾಟಕದಲ್ಲಿ ಬಿಜೆಪಿ ಆಡಳಿತದಲ್ಲಿ ಆಳವಾಗಿ ಬೇರೂರಿರುವ ಭ್ರಷ್ಟಾಚಾರದಿಂದ ಬೇಸತ್ತ ಕೆಲವು ಮತದಾರರ ಮನಸ್ಸನ್ನು ಗೆಲ್ಲಬಹುದೆಂಬ ಹೆದರಿಕೆ ಬಿಜೆಪಿಗೆ ಇದೆಯೇ?

ಇಷ್ಟು ಮುಜುಗರ ಸಾಲದು ಎಂಬಂತೆ ಕರ್ನಾಟಕ ಬಿಜೆಪಿಯು ತರಾತುರಿಯಲ್ಲಿ ತಮ್ಮದೇ ಆದ "ಜನ ಸಂಕಲ್ಪ ಯಾತ್ರೆ"ಯನ್ನು ಆರಂಭಿಸಿದರು. ಏಕೆ?

ವಿಷಾದಕರ ಸಂಗತಿ ಎಂದರೆ, ಈ ಯಾತ್ರೆಯ ನೇತೃತ್ವವನ್ನು ಅತ್ಯಂತ ಉತ್ಸಾಹಿಗಳು, ವಾಗ್ಪಟುಗಳು, ಶ್ರಮಪಟ್ಟು ಕೆಲಸ ಮಾಡುವಂತವರೂ, ಯುವಕರೂ ಹಾಗೂ ಕಳಂಕರಹಿತರೂ ಆದ ಪ್ರತಾಪ ಸಿಂಹ ಮತ್ತು ತೇಜಸ್ವಿ ಸೂರ್ಯರಿಗೆ ವಹಿಸುವುದರ ಬದಲು ಅದೇ ಕಳಂಕಿತ ನಾಯಕರನ್ನು ಮುಂದಿಟ್ಟುಕೊಂಡರು.

ಮುಖ್ಯಮಂತ್ರಿಯವರು ಹೇಳಿಕೊಂಡ ಹಾಗೆ, ಬಿಜೆಪಿ ರಾಹುಲ್ ಗಾಂಧಿಯವರ "ಭಾರತ್ ಜೋಡೋ" ಯಾತ್ರೆಯಿಂದ ವಿಚಲಿತವಾಗದಿದ್ದಲ್ಲಿ, ರಾಹುಲ್ ಗಾಂಧಿಯವರನ್ನು ಕಡೆಗಣಿಸಿ ರಾಜ್ಯದಲ್ಲಿ ನೀವು ಮಾಡಲಿರುವ ಅಭಿವೃದ್ಧಿ ಕೆಲಸಗಳ ಬಗ್ಗೆ ಮಾತನಾಡಿ.

ಯಾತ್ರೆಗಳು ನಾಯಕನ ಅಥವಾ ಪಕ್ಷದ ಭವಿಷ್ಯವನ್ನು ಬದಲಾಯಿಸಬಹುದು. ಆದರೆ, ಹಾಗಾಗಲು ಸರಿಯಾದ ನಾಯಕನಿರಬೇಕು. ಉದ್ದೇಶ ಪ್ರಾಮಾಣಿಕವಾಗಿರಬೇಕು.

ರಾಹುಲ್ ಗಾಂಧಿಯವರ ಯಾತ್ರೆಯ ಅಂತರ ಮತ್ತು ಅವಧಿ ಬಹು ಸುದೀರ್ಘವಾಗಿರಬಹುದು ಹಾಗೂ ಈ ಯಾತ್ರೆಯಿಂದ ಗಳಿಸಬಹುದಾದ ಒಳ್ಳೆಯ ಹೆಸರು ಮತದಾರರ ಅಲ್ಪಕಾಲದ ಸ್ಮರಣೆಯಿಂದ ಮತ್ತು ಅವರ ಪಕ್ಷದ ಅಲ್ಲಾಡಿಸಲಾಗದ "ಓಲೈಕೆ ರಾಜಕಾರಣದಿಂದ" ಮಸುಕಾಗಿ ಹೋಗಬಹುದು.

ಆದರೆ ಈಗ, ರಾಹುಲ್ ಗಾಂಧಿಯವರ "ಭಾರತ್ ಜೋಡೋ" ಯಾತ್ರೆಯಿಂದ ಕರ್ನಾಟಕದಲ್ಲಿನ ಭಾರತೀಯ ಜನತಾ ಪಕ್ಷ ಬಡಬಡಿಸುತ್ತಿರುವುದು ನಮಗೆ ಸಂತಸವನ್ನು ಉಂಟು ಮಾಡಿದೆ. ದುರದೃಷ್ಟವಶಾತ್ ಕಣ್ಣಿಗೆ ಕಾಣಿಸುವಂತಹ ಅಭಿವೃದ್ಧಿ ಕೆಲಸಗಳನ್ನು ಮಾಡಿ ನಮಗೆ ಭ್ರಷ್ಟಾಚಾರರಹಿತ ಆಡಳಿತವನ್ನು ನೀಡಲು ಅವರಿಗೆ ಯಾತ್ರೆ ಉತ್ತೇಜನ ನೀಡಿಲ್ಲ. ಅದರ ಬದಲಿಗೆ ಹಳೆಯ ಕುದುರೆಗಳನ್ನು ಇಟ್ಟುಕೊಂಡು, ವ್ಯರ್ಥ ಯಾತ್ರೆಗೆ ಪ್ರೇರೇಪಿಸಿದೆ.

email : vikram@starofmysore.com



ಮಂಗಳವಾರ ಹುಟ್ಟುಹಬ್ಬ ಆಚರಿಸಿಕೊಂಡ ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕಿ ಶ್ರೀಮತಿ ಪಿ.ರಾಜೇಶ್ವರಿ ಅವರನ್ನು ಅವರ ನಿವಾಸದಲ್ಲಿ ಆತ್ಮೀಯವಾಗಿ ಅಭಿನಂದಿಸಿ, ಶುಭ ಕೋರಲಾಯಿತು. ಈ ಸಂದರ್ಭದಲ್ಲಿ ಬ್ಯಾಂಕ್ ಅಧ್ಯಕ್ಷ ಸಿ.ರೇವಣ್ಣ, ಉಪಾಧ್ಯಕ್ಷ ಜೆ.ಯೋಗೇಶ್, ನಿರ್ದೇಶಕರಾದ ಕೆ.ಉಮಾಶಂಕರ್ ಶ್ರೀಮತಿ ಪಿ.ಸವಿತಾ ನಂದಕುಮಾರ್, ವಕೀಲ ಪಡುವಾರಹಳ್ಳಿ ಎಂ.ರಾಮಕೃಷ್ಣ, ಹೆಚ್.ಹರೀಶ್‌ಕುಮಾರ್, ವೈದ್ಯ ಡಾ.ಪರಮೇಶ್, ಮಾಜಿ ನಿರ್ದೇಶಕರಾದ ಆಡಿಟರ್ ಚಂದ್ರಶೇಖರ್, ಪರಮೇಶ್ ಇನ್ನಿತರರು ಉಪಸ್ಥಿತರಿದ್ದರು.

ದೀಪಾವಳಿ: 1,500 ಹೆಚ್ಚುವರಿ ಸಾರಿಗೆ ಬಸ್ ಸೌಲಭ್ಯ

ಬೆಂಗಳೂರು, ಅ.18– ದೀಪಾವಳಿ ಹಬ್ಬದ ಪ್ರಯುಕ್ತ ಪ್ರಯಾಣಿಕರ ಅನುಕೂಲಕ್ಕಾಗಿ ಕೆಎಸ್‌ಆರ್‌ಟಿಸಿ 1,500 ವಿಶೇಷ ಬಸ್‌ಗಳ ವ್ಯವಸ್ಥೆ ಮಾಡಿದೆ. ಅಕ್ಟೋಬರ್ 21ರಿಂದ 23ರವರೆಗೆ ಬೆಂಗಳೂರಿನಿಂದ ರಾಜ್ಯದ ವಿವಿಧ ಜಿಲ್ಲೆಗಳು ಮತ್ತು ಹೊರ ರಾಜ್ಯಗಳಿಗೆ ವಿಶೇಷ ಬಸ್‌ಗಳು ಹೊರಡಲಿವೆ. 26ರಿಂದ 30ರವರೆಗೆ ಬೆಂಗಳೂರಿಗೆ ವಾಪಸ್ ಬರಲಿವೆ.

ಮೆಜೆಸ್ಟಿಕ್ ನಿಲ್ದಾಣದಿಂದ ಧರ್ಮಸ್ಥಳ, ಕುಕ್ಕೆ ಸುಬ್ರಹ್ಮಣ್ಯ, ಶಿವಮೊಗ್ಗ, ಹಾಸನ, ಮಂಗಳೂರು, ಕುಂದಾಪುರ, ಶೃಂಗೇರಿ, ಹೊರನಾಡು, ದಾವಣಗೆರೆ, ಹುಬ್ಬಳ್ಳಿ, ಧಾರವಾಡ, ಬೆಳಗಾವಿ, ವಿಜಯಪುರ, ಗೋಕರ್ಣ, ಶಿರಸಿ, ಕಾರವಾರ, ರಾಯಚೂರು, ಕಲಬುರಗಿ, ಬಳ್ಳಾರಿ, ಕೊಪ್ಪಳ, ಯಾದಗಿರಿ, ಬೀದರ್, ತಿರುಪತಿಗೆ ಬಸ್‌ಗಳು ಸಂಚಾರ ಮಾಡಲಿವೆ. ಮೈಸೂರು ರಸ್ತೆ ಬಸ್ ನಿಲ್ದಾಣದಿಂದ ಮೈಸೂರು, ಹುಣಸೂರು, ಪಿರಿಯಾಪಟ್ಟಣ, ವಿರಾಜಪೇಟೆ, ಕುಶಾಲನಗರ, ಮಡಿಕೇರಿಗೆ ತೆರಳಲಿವೆ. ತಮಿಳುನಾಡು ಮತ್ತು ಆಂಧ್ರ ಪ್ರದೇಶಕ್ಕೆ ಶಾಂತಿನಗರದ ಬಿಎಂಟಿಸಿ ಬಸ್ ನಿಲ್ದಾಣದಿಂದ ಬಸ್‌ಗಳು ಸಂಚರಿಸಲಿವೆ. ಆಸನಗಳನ್ನು ಮುಂಗಡವಾಗಿ ಕಾಯ್ದಿರಿಸುವ ಸೌಲಭ್ಯಗಳನ್ನು ಕಲ್ಪಿಸಲಾಗಿದೆ. 4 ಅಥವಾ ಹೆಚ್ಚು ಪ್ರಯಾಣಿಕರು ಒಟ್ಟಾಗಿ ಮುಂಗಡ ಟಿಕೆಟ್ ಕಾಯ್ದಿರಿಸಿದಲ್ಲಿ ಶೇ.5ರಷ್ಟು ರಿಯಾಯಿತಿ ನೀಡಲಾಗುವುದು. ಹೋಗುವ ಮತ್ತು ಬರುವ ಪ್ರಯಾಣದ ಟಿಕೆಟನ್ನು ಒಟ್ಟಿಗೆ ಕಾಯ್ದಿರಿಸಿದಾಗ ಹಿಂದಿರುಗುವ ಪ್ರಯಾಣ ದರದಲ್ಲಿ ಶೇ.10ರಷ್ಟು ರಿಯಾಯಿತಿ ಕೊಡಲಾಗುವುದು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com, website: www.mysurumithra.com

ಮೈಸೂರು ಜಿಲ್ಲೆಯಲ್ಲಿ ಡೆಂಗ್ಯೂ ಆತಂಕ

●ಜನವರಿಯಿಂದ 638 ಪ್ರಕರಣ ಪತ್ತೆ ●ಆರೋಗ್ಯ ಸಿಬ್ಬಂದಿ, ಆಶಾ ಕಾರ್ಯಕರ್ತರಿಂದ ಮನೆ ಮನೆ ಸಮೀಕ್ಷೆ ●ಸೊಳ್ಳೆಗಳಿಂದ ರಕ್ಷಣೆ ಪಡೆಯುವಂತೆ ಜಾಗೃತಿ




ಡೆಂಗ್ಯೂ ತಡೆಗಾಗಿ ಆರೋಗ್ಯ ಸಿಬ್ಬಂದಿ ಮನೆ ಮನೆಗೆ ತೆರಳಿ ಸಮೀಕ್ಷೆ ನಡೆಸುತ್ತಿರುವುದು.

ಮನೆ ಮನೆ ಸಮೀಕ್ಷೆ ಮಾಡಿ, ಜಾಗೃತಿ ಮೂಡಿಸಲಾಗುತ್ತಿದೆ

ಡೆಂಗ್ಯೂ ಹರಡದಂತೆ ಕಟ್ಟೆಚ್ಚರ ವಹಿಸಲಾಗಿದೆ. ಜಿಲ್ಲೆಯಲ್ಲಿ ನಿಯಂತ್ರಣದಲ್ಲಿದೆ. ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿ, ಆಶಾ ಕಾರ್ಯಕರ್ತರ ಸೇರಿದಂತೆ ಸಿಬ್ಬಂದಿ ತಂಡ ಮನೆ ಮನೆಗೆ ತೆರಳಿ ಸಮೀಕ್ಷೆ ನಡೆಸುತ್ತಿದೆ. ಮನೆಯಲ್ಲಿ ನೀರಿನ ತೊಟ್ಟಿ, ಫ್ಲವರ್ ಪಾಟ್, ಡ್ರಮ್ ಸೇರಿದಂತೆ ವಿವಿಧೆಡೆ ನಿಲ್ಲುವ ನೀರಲ್ಲಿ ಸೊಳ್ಳೆಗಳ ಉತ್ಪಾದನೆಯಾಗದಂತೆ ಜಾಗ್ರತೆ ವಹಿಸುವಂತೆ ಅರಿವು ಮೂಡಿಸಲಾಗುತ್ತಿದೆ. ನೀರಿನ ತೊಟ್ಟಿಯನ್ನು ಸದಾ ಮುಚ್ಚಿರುವಂತೆ ತಿಳಿಸಲಾಗುತ್ತಿದೆ. ಮೈಸೂರಿನ ತಿಲಕ್‌ನಗರದ ಬಾಲಕಿ ಸಾವು ಪ್ರಕರಣ ಡೆಂಗ್ಯೂನಿಂದಲೇ ಆಗಿದೆ ಎಂದು ಹೇಳಲು ಆಗುವುದಿಲ್ಲ. ವರದಿಯಲ್ಲಿ ಬಾಲಕಿಗೆ ಟೈಫಾಯ್ಡ್ ಇತ್ತು ಎಂದು ದೃಢಪಟ್ಟಿದೆ. ಎಲಿಸಾ ಟೆಸ್ಟ್ ಮಾಡಿಸಿದ್ದರೆ, ಡೆಂಗ್ಯೂ ಬಗ್ಗೆ ಖಚಿತವಾಗುತ್ತಿತ್ತು. ಆದರೆ, ಬಾಲಕಿಗೆ ಎಲಿಸಾ ಟೆಸ್ಟ್ ಮಾಡಿಸಿಲ್ಲ. ಹಾಗಾಗಿ ಸಾವಿಗೆ ಡೆಂಗ್ಯೂ ಕಾರಣ ಎಂದು ಹೇಳಲು ಸಾಧ್ಯವಿಲ್ಲ.

-ಡಾ.ಕೆ.ಹೆಚ್.ಪ್ರಸಾದ್, ಜಿಲ್ಲಾ ಆರೋಗ್ಯಾಧಿಕಾರಿ

ಮೈಸೂರು, ಅ. 18(ಎಂಟಿವೈ)- ಸಾಂಸ್ಕೃತಿಕ ನಗರಿ ಮೈಸೂರಲ್ಲಿ ಕಳೆದ ಕೆಲವು ದಿನಗಳಿಂದ ಸುರಿಯುತ್ತಿರುವ ಮಳೆಯಿಂದಾಗಿ ಡೆಂಗ್ಯೂ ಆತಂಕ ಹೆಚ್ಚಾಗುತ್ತಿದೆ. ಈ ಮಾರಕ ಸೋಂಕು ಹರಡದಂತೆ ಕಟ್ಟೆಚ್ಚರ ವಹಿಸುವ ನಿಟ್ಟಿನಲ್ಲಿ ಆರೋಗ್ಯ ಸಿಬ್ಬಂದಿ ಮನೆ ಮನೆ ಸಮೀಕ್ಷೆ ಕೈಗೊಂಡು, ಜಾಗೃತಿ ಮೂಡಿಸಲಾರಂಭಿಸಿದ್ದಾರೆ.

ರಸ್ತೆ, ಮನೆ ಸುತ್ತಮುತ್ತ ಮಳೆ ನೀರು ನಿಲ್ಲುವುದರಿಂದ ಅಪಾರ ಸೊಳ್ಳೆಗಳ ಉತ್ಪತ್ತಿಯಾಗುತ್ತಿದ್ದು, ಈಡಿಸ್ ಈಜಿಪ್ಟೈ ಸೊಳ್ಳೆ ಹಗಲಿನ ವೇಳೆ ಜನರನ್ನು ಕಚ್ಚುವುದರಿಂದ ಡೆಂಗ್ಯೂ ಸೋಂಕು ಹರಡಲಿದ್ದು, ಕೆಲ ಸಂದರ್ಭದಲ್ಲಿ ಜೀವಕ್ಕೆ ಕುತ್ತು ತಂದೊಡ್ಡುತ್ತಿದೆ. ಈ ಸಾಲಿನ ಜನವರಿಯಿಂದ ಅ.18ರವರೆಗೆ ಮೈಸೂರು ಜಿಲ್ಲೆಯಲ್ಲಿ 638 ಡೆಂಗ್ಯೂ ಪ್ರಕರಣ ದಾಖಲಾಗಿದೆ. ಕಳೆದ ಒಂದು ವಾರದಿಂದ ಎಡಬಿಡದೆ ಸುರಿಯುತ್ತಿರುವ ಮಳೆಯಿಂದಾಗಿ ಈ ತಿಂಗಳಾಂತ್ಯಕ್ಕೆ ಡೆಂಗ್ಯೂ ಸೋಂಕಿತರ ಸಂಖ್ಯೆ ಹೆಚ್ಚಾಗುವ ಸಾಧ್ಯತೆ ಇದ್ದು, ಹಾಗಾಗಿ ಈಡಿಸ್ ಸೊಳ್ಳೆಗಳ ಮೂಲೋತ್ಪಾಟನೆಗೆ ಆರೋಗ್ಯ ಸಿಬ್ಬಂದಿ ಸಮರ ಸಾರಿದ್ದಾರೆ. ಅಲ್ಲದೆ, ಪ್ರತಿ ಮನೆಗೂ ತೆರಳಿ ಸ್ವಚ್ಛತೆ ಕಾಪಾಡಿಕೊಳ್ಳುವಂತೆ ಸಲಹೆ ನೀಡುತ್ತಿದ್ದಾರೆ.

ಕಾಡುತ್ತಿದ್ದ ಜ್ವರದ ಬಾಧೆ: ಈ ಸಾಲಿನ ಜೂನ್‌ನಿಂದ ಸೆಪ್ಟೆಂಬರ್‌ವರೆಗೆ ಮೈಸೂರು ನಗರ ಸೇರಿದಂತೆ ಜಿಲ್ಲೆಯಲ್ಲಿ ಸಾಕಷ್ಟು ಮಂದಿಗೆ ಜ್ವರದ ಬಾಧೆ ಕಾಡಿತ್ತು. ಈಗ ನಿಯಂತ್ರಣಕ್ಕೆ ಬಂದಿದೆಯಾದರೂ, ಮಾಸಾಂತ್ಯದ ವೇಳೆಗೆ ಮಳೆಯಿಂದಾಗಿ ಇನ್ನಷ್ಟು ಹೆಚ್ಚಾಗಬಹುದು ಎಂಬ ಆತಂಕವಿದೆ. ಜನವರಿಯಿಂದ ಇದುವರೆಗೆ ಜಿಲ್ಲೆಯಲ್ಲಿ ಡೆಂಗ್ಯೂ ಶಂಕೆ ಮೇರೆಗೆ 3829 ಮಂದಿಯ ರಕ್ತದ ಮಾದರಿಯನ್ನು ಪರೀಕ್ಷಿಸಲಾಗಿದೆ. ಅದರಲ್ಲಿ 638 ಪಾಸಿಟಿವ್ ಪ್ರಕರಣಗಳು ಪತ್ತೆಯಾಗಿದೆ. ಜನವರಿಯಲ್ಲಿ 39, ಫೆಬ್ರವರಿಯಲ್ಲಿ 28, ಮಾರ್ಚ್‌ನಲ್ಲಿ 29, ಏಪ್ರಿಲ್‌ನಲ್ಲಿ 30, ಮೇ ನಲ್ಲಿ 55, ಜೂನ್‌ನಲ್ಲಿ 115, ಜುಲೈನಲ್ಲಿ 149, ಆಗಸ್ಟ್‌ನಲ್ಲಿ 91, ಸೆಪ್ಟೆಂಬರ್‌ನಲ್ಲಿ 78, ಅಕ್ಟೋಬರ್(ಅ.10ರ ಈವರೆಗೆ)-24 ಡೆಂಗ್ಯೂ ಪ್ರಕರಣಗಳು ದಾಖಲಾಗಿವೆ.

ಆತಂಕಪಡುವ ಅಗತ್ಯವಿಲ್ಲ: ಜಿಲ್ಲಾ ರೋಗವಾಹಕ ಆಶ್ರಿತ ರೋಗಗಳ ನಿಯಂತ್ರಣಾಧಿಕಾರಿ ಡಾ.ಎಸ್. ಚಿದಂಬರ ಮಾತನಾಡಿ, ಮೈಸೂರು ಜಿಲ್ಲೆಯಲ್ಲಿ ಕಳೆದ ಮೂರು ತಿಂಗಳಿಗೆ ಹೋಲಿಸಿದರೆ, ಈಗ ಡೆಂಗ್ಯೂ ಪ್ರಕರಣ ಇಳಿಮುಖವಾಗಿದೆ. ಮುಂದಿನ ದಿನಗಳಲ್ಲಿ ಮಳೆ ಹೆಚ್ಚಾದರೆ, ಡೆಂಗ್ಯೂ ಪ್ರಕರಣ ಹೆಚ್ಚಾಗಬಹುದು ಎಂದು ಭಾವಿಸುವುದು ಸರಿಯಲ್ಲ. ಈ ಖಾಯಿಲೆ ಒಮ್ಮೆ ನಿಯಂತ್ರಣಕ್ಕೆ ಬಂದರೆ, ಅದು ಮುಂದಿನ ದಿನಗಳಲ್ಲಿ ಇಳಿಮುಖವಾಗುತ್ತಲೇ ಹೋಗುತ್ತದೆ. ಜಿಲ್ಲೆಯ ಜನತೆ ಡೆಂಗ್ಯೂಗೆ ಆತಂಕಪಡುವ ಅಗತ್ಯವಿಲ್ಲ ಎಂದರು.

ಮಳೆ ನೀರು ನಿಂತಿರಾ: ಮಳೆ ನೀರು ಒಂದೆಡೆ ಬಹಳ ದಿನ ನಿಂತಿದ್ದಾಗ ಈಡಿಸ್ ಸೊಳ್ಳೆ ಉತ್ಪಾದನೆಯಾಗುತ್ತದೆ. ಈ ಸೊಳ್ಳೆಗಳು ಹಗಲಿನ ವೇಳೆ ಮನುಷ್ಯರನ್ನು ಕಚ್ಚುತ್ತವೆ. ರೋಗ ನಿರೋಧಕ ಶಕ್ತಿ ಕಡಿಮೆ ಇರುವ ಸಣ್ಣ ಮಕ್ಕಳು, ಹಿರಿಯ ನಾಗರಿಕರು, ವಿವಿಧ ಅನಾರೋಗ್ಯ ಸಮಸ್ಯೆಯಿಂದ ಬಳಲುತ್ತಿರುವವರು ಹಾಗೂ ಹಗಲಿನ ವೇಳೆ ಹೆಚ್ಚಾಗಿ ಮಲಗುವಂತಹ ವ್ಯಕ್ತಿಗಳಿಗೆ ಡೆಂಗ್ಯೂ ಹರಡುತ್ತದೆ. ಜನರು ತಮ್ಮ ಮನೆಯಲ್ಲಿ ನೀರಿನ ತೊಟ್ಟಿಗಳನ್ನು ಶುದ್ಧೀಕರಿಸಲು ಕ್ರಮ ಕೈಗೊಳ್ಳಬೇಕು ಎಂದು ಸಲಹೆ ನೀಡಿದರು.

ಇಳಿಮುಖ: 2017ರಲ್ಲಿ ಜಿಲ್ಲೆಯಲ್ಲಿ 843 ಪ್ರಕರಣ ಪತ್ತೆಯಾಗಿತ್ತು. ಇದನ್ನು ಹೊರತುಪಡಿಸಿದರೆ ಕಳೆದ 9 ವರ್ಷದಲ್ಲಿ ಗಣನೀಯ ಪ್ರಮಾಣದಲ್ಲಿ ಇಳಿಮುಖ ಕಂಡಿದೆ. ಈ ವರ್ಷ 638 ಮಂದಿಯಲ್ಲಿ ಡೆಂಗ್ಯೂ ಪತ್ತೆಯಾಗಿದೆ. ಆರೋಗ್ಯ ಇಲಾಖೆ ಕಟ್ಟುನಿಟ್ಟಿನ ಮುಂಜಾಗೃತಾ ಕ್ರಮಗಳನ್ನು ಕೈಗೊಂಡಿದೆ.

ನಾಳೆ ಮೈಸೂರಿನ ಕೃಷಿ ಇಲಾಖೆ ಜಂಟಿ ನಿರ್ದೇಶಕರ ಕಚೇರಿ ಮುಂದೆ ರೈತರ ಪ್ರತಿಭಟನೆ



ಮೈಸೂರು, ಅ.18(ಎಸ್‌ಪಿಎನ್)- ಹೆಚ್ಚಿನ ಬೆಲೆಗೆ ಯೂರಿಯಾ ಗೊಬ್ಬರ ಮಾರಾಟ ಮಾಡುವುದನ್ನು ಪ್ರಶ್ನಿಸಿದ ರೈತ ಸಂಘದ ಜಿಲ್ಲಾಧ್ಯಕ್ಷ ಹೊಸೂರು ಕುಮಾರ್ ಅವರಿಗೆ ಅವಾಚ್ಯ ಶಬ್ಧಗಳಿಂದ ನಿಂಧಿಸಿ, ದೌರ್ಜನ್ಯ ಎಸಗಿರುವ ಮಾಲೀಕನ ವಿರುದ್ಧ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ಮೈಸೂರಿನ ಕೃಷಿ ಇಲಾಖೆ ಜಂಟಿ ನಿರ್ದೇಶಕರ ಕಚೇರಿ ಮುಂದೆ ಅ.20ರಂದು ಬೆಳಗ್ಗೆ 11 ಗಂಟೆಗೆ ಪ್ರತಿಭಟನೆ ಹಮ್ಮಿಕೊಳ್ಳಲು ಜಿಲ್ಲಾ ರೈತ ಸಂಘ ತಿರ್ಮಾನಿಸಿದೆ.

ಮೈಸೂರಿನ ಜಲದರ್ಶಿನಿ ಅತಿಥಿ ಗೃಹದಲ್ಲಿ ಸೋಮವಾರ ಸಭೆ ನಡೆಸಿದ ಜಿಲ್ಲಾ ರೈತ ಸಂಘದ ಕಾರ್ಯಕರ್ತರು, ಹುಣಸೂರು ತಾಲೂಕಿನ ರಾಮಕೃಷ್ಣ ಮೇಘ ಟ್ರೇಡರ್ಸ್‌ನ ಮಾಲೀಕರು ಯೂರಿಯಾ ಗೊಬ್ಬರನ್ನು ನಿಗಧಿತ ಬೆಲೆಗಿಂತ ಹೆಚ್ಚಿನ ದರಕ್ಕೆ ರೈತರಿಗೆ ಮಾರಾಟ ಮಾಡುತ್ತಿದ್ದುದ್ದನ್ನು ಜಿಲ್ಲಾಧ್ಯಕ್ಷ ಹೊಸೂರು ಕುಮಾರ್ ಪ್ರಶ್ನೆ ಮಾಡಿದ್ದಕ್ಕೆ ಅವರಿಗೆ ಅವಾಚ್ಯ ಶಬ್ದಗಳಿಂದ ನಿಂದಿಸಿ, ಹಲ್ಲೆಗೆ ಮಾಲೀಕ ಮುಂದಾಗಿದ್ದರು. ಇದರ ವಿರುದ್ದ ಕ್ರಮ ಕೈಗೊಳ್ಳುವಂತೆ ಒತ್ತಾಯಿಸಿ ತಾಲೂಕು ಕೃಷಿ ಇಲಾಖೆ ಅಧಿಕಾರಿಗಳು ಮತ್ತು ಪೊಲೀಸರಿಗೆ ದೂರು ನೀಡಿದರೂ ಪ್ರಯೋಜನವಾಗಿಲ್ಲ. ಮಾಲೀಕರಿಂದ ರೈತರಿಗೆ ಆಗುತ್ತಿರುವ ಅನ್ಯಾಯವನ್ನು ಖಂಡಿಸಿ ಅ.20ರಂದು ಬೆಳಗ್ಗೆ ಕೃಷಿ ಇಲಾಖೆ ಪ್ರತಿಭಟನೆ ನಡೆಸಿ, ನಂತರ ಜಿಲ್ಲಾಧಿಕಾರಿಗಳಿಗೆ ಮನವಿ ಸಲ್ಲಿಸಲಾಗುವುದು ಎಂದು ರೈತಸಂಘದ ಮರಂಕಯ್ಯ ಮಾಧ್ಯಮಗಳಿಗೆ ತಿಳಿಸಿದರು.

ಸಭೆಯಲ್ಲಿ ರೈತ ಸಂಘದ ಮಹಿಳಾ ಘಟಕದ ಅಧ್ಯಕ್ಷೆ ನೇತ್ರಾವತಿ, ಪ್ರಸನ್ನ ಎನ್.ಗೌಡ, ಪಿ.ಮರಂಕಯ್ಯ, ಆನಂದೂರು ಪ್ರಭಾಕರ್, ಮಹಾದೇವ ನಾಯಕ, ಕರೋಟಿ ಕುಮಾರಸ್ವಾಮಿ, ಶೇಖರ್, ಮಲ್ಲೇಶ್, ಬಸವರಾಜುಗೌಡ, ಮಹಾದೇವ, ಹೆಜ್ಜಿಗೆ ಪ್ರಕಾಶ್, ಅತ್ತಳ್ಳಿ ಶಿವನಂಜು, ಚಂದ್ರಶೇಖರ್, ರಾಘವೇಂದ್ರ, ಭಾಗವಹಿಸಿದ್ದರು.

ಚಿತ್ರಕಲೆ, ಕರಕುಶಲ, ಕಸೂತಿ ಕಲಾ ಕೃತಿಗಳ ಪ್ರದರ್ಶನ ಮಳಿಗೆ ಆರಂಭ



ಮೈಸೂರು, ಅ.18 (ಎಸ್‌ಪಿಎನ್)-ವಸ್ತು ಪ್ರದರ್ಶನ ಪ್ರಾಧಿಕಾರ ಆವರಣದಲ್ಲಿ ಮಹಿಳಾ ಮತ್ತು ಮಕ್ಕಳ ವಿಭಾಗದ ವತಿಯಿಂದ ನಿರ್ಮಿಸಿರುವ ಚಿತ್ರಕಲೆ, ಕರಕುಶಲ, ಕಸುತಿ ಕಲಾಕೃತಿಗಳ ಪ್ರದರ್ಶನ ಮಳಿಗೆ ಇಂದಿ(ಮಂಗಳವಾರ)ನಿಂದ ಸಾರ್ವಜನಿಕರ ವೀಕ್ಷಣೆಗೆ ಲಭ್ಯವಿದೆ.

ಈ ಪ್ರದರ್ಶನದಲ್ಲಿ ಸುತ್ತೂರಿನ ಪ್ರೌಢಶಾಲೆ ವಿದ್ಯಾರ್ಥಿಗಳು ಪೆನ್ಸಿಲ್‌ನಲ್ಲಿ ಬಿಡಿಸಿದ 20 ಚಿತ್ರಗಳನ್ನು ಪ್ರದರ್ಶನಕ್ಕಿಡಲಾಗಿದೆ. ಮುಸುಕಿನಕೊಪ್ಪಲು ಸರ್ಕಾರಿ ಶಾಲೆಯ ವಿದ್ಯಾರ್ಥಿ ಬಿಡಿಸಿದ 150ಕ್ಕೂ ಚಿತ್ರಗಳನ್ನು ಪ್ರದರ್ಶನಕ್ಕಿಡಲಾಗಿದೆ. ಉದಯಗಿರಿಯ ಕಲಾವಿದರಾದ ಪ್ರಿಯಾವರ್ಷಿನಿ ಮತ್ತು ವಿ.ಸವಿತಾ ಸ್ವದೇಶಿ ನೋಟ್ ಹಳೆಯ ಒಂದು ರೂನಿಂದ ಸಾವಿರ ರೂಪಾಯಿಗಳ ನೋಟ್ ಮತ್ತು ನಾಣ್ಯಗಳ ಜೋಡಣೆ ಕಲಾಕೃತಿ ಪ್ರದರ್ಶನದಲ್ಲಿ ಕಾಣಬಹುದು. ಕಲಾವಿದೆ ಬಬಿತಾ ಅವರ ಕೈಚಳಕದಿಂದ ಮೂಡಿಬಂದಿರುವ ಮುತ್ತಿನಿಂದ ಪೋಣಿಸಿರುವ ಮಂಟಪ, ಮನೆ, ರಥ ಕಲಾಕೃತಿಗಳು ಎಲ್ಲರನ್ನು ಕೈಬಿಸಿ ಕರೆಯುತ್ತಿದ್ದವು. ರಾಮಕೃಷ್ಣ ನಗರದ ಸುಧಾ ಹಿರೇಮಠ್, ಕುವೆಂಪು ನಗರದ ಭಾಗ್ಯಸದಾಶಿವ, ಗೋಕುಲಂನ ಗೀತಾ, ಶಾರದಾ ತಿಮ್ಮಯ್ಯ ಅವರ ಕೈಚಳಕದಿಂದ ಮೂಡಿಬಂದಿರುವ ವಿವಿಧ ಕಲಾಕೃತಿಯ ಪ್ರದರ್ಶನ ಸಾರ್ವಜನಿಕರ ಮನಸೂರೆಗೊಳ್ಳುತ್ತವೆ.

ಪ್ರದರ್ಶನ ಮಳಿಗೆಯ ಮೇಲ್ವಾರಿಕೆ ಅನುಸೂಯ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿ, ಈ ಮಳಿಗೆಯಲ್ಲಿ 100ಕ್ಕೂ ಹೆಚ್ಚು ಕಲಾವಿದರ ಚಿತ್ರಕಲೆ, ಕುಕುಶಲ ಕಲೆ, ಸಾಂಪ್ರಾದಯಿಕ ಕಲೆ, ಪೇಟಿಂಗ್, ಕಸುತಿ ಕಲೆಗಳ 450ಕ್ಕೂ ಚಿತ್ರಗಳು ಮನ ಮೋಹಕವಾಗಿವೆ. ವಸ್ತು ಪ್ರದರ್ಶನ ಆವರಣಕ್ಕೆ ಬರುವ ವಿದ್ಯಾರ್ಥಿಗಳು ಮತ್ತು ಪೋಷಕರು ಒಮ್ಮೆ ಮಹಿಳಾ ಮತ್ತು ಮಕ್ಕಳ ವಿಭಾಗದ ಮಳಿಗೆ ಭೇಟಿ ನೀಡಿ, ಕಲಾವಿದರನ್ನು ಪ್ರೋತ್ಸಾಹಿಸುವಂತೆ ಮನವಿ ಮಾಡಿದರು.

ಭಾರತಕ್ಕೆ ದಾವೂದ್ ಇಬ್ರಾಹಿಂ ಹಸ್ತಾಂತರ ಪ್ರಶ್ನೆಗೆ 'ಶ್' ಅಂದ ಪಾಕ್



ನವದೆಹಲಿ, ಅ.18- ಭೂಗತ ಪಾತಕಿ ದಾವೂದ್ ಇಬ್ರಾಹಿಂ ಮತ್ತು 2008ರ ನವೆಂಬರ್ 26ರಂದು ನಡೆದ ಮುಂಬೈ ದಾಳಿಯ ಮಾಸ್ಟರ್ ಮೈಂಡ್ ಹಫೀಜ್ ಸಯೀದ್, ಭಾರತೀಯ ಭದ್ರತಾ ಏಜೆನ್ಸಿಗಳಿಗೆ ಬೇಕಾದ ವಾಟೆಂಡ್ ಕ್ರಿಮಿನಲ್ಸ್‌ಗಳಾಗಿದ್ದು, ಈ ಇಬ್ಬರು ಭಯೋತ್ಪದಕರು ಪಾಕಿಸ್ತಾನದಲ್ಲಿ ವಾಸಿಸುತ್ತಿದ್ದಾರೆ ಎನ್ನಲಾಗಿದೆ. ಇವರ ಬಗ್ಗೆ ಕೇಳಿದ ಪ್ರಶ್ನೆಗಳಿಗೆ ಉತ್ತರಿಸದೇ ಪಾಕಿಸ್ತಾನದ ಉನ್ನತ ತನಿಖಾ ಸಂಸ್ಥೆಯ ಮುಖ್ಯಸ್ಥರು ನುಣುಚಿಕೊಂಡಿದ್ದಾರೆ.

ಇಂಟರ್‌ಪೋಲ್ ಜನರಲ್ ಅಸೆಂಬ್ಲಿಗಾಗಿ ದೆಹಲಿಗೆ ಇಸ್ಲಾಮಾಬಾದ್‌ನಿಂದ ಇಬ್ಬರು ಸದಸ್ಯರ ನಿಯೋಗದ ಭಾಗವಾಗಿರುವ ಫೆಡರಲ್ ಇನ್ವೆಸ್ಟಿಗೇಷನ್ ಏಜೆನ್ಸಿಯ (ಎಫ್‌ಐಎ) ಮಹಾನಿರ್ದೇಶಕ ಮೊಹ್ಸಿನ್ ಬಟ್ ಆಗಮಿಸಿದ್ದರು. ಈ ವೇಳೆ ದಾವೂದ್ ಇಬ್ರಾಹಿಂ ಮತ್ತು ಲಷ್ಕರ್-ಎ-ತೊಯ್ಬಾ ಮುಖ್ಯಸ್ಥ ಹಫೀಜ್ ಸಯೀದ್‌ನನ್ನು ಪಾಕಿಸ್ತಾನವು ಭಾರತಕ್ಕೆ ಹಸ್ತಾಂತರಿಸುತ್ತದೆಯೇ ಎಂದು ಮಾಧ್ಯಮದವರು ಕೇಳಿದ ಪ್ರಶ್ನೆಗಳಿಗೆ ಪ್ರತಿಕ್ರಿಯೆ ನೀಡಲು ನಿರಾಕರಿಸಿದ್ದಾರೆ.

ಇಸ್ಲಾಮಾಬಾದ್ ಮತ್ತು ನವದೆಹಲಿ ನಡುವೆ ಗಡಿಯಾಚೆಗಿನ ಭಯೋತ್ಪಾದನೆ ಮತ್ತು ಕಾಶ್ಮೀರದ ವಿವಾದ, ಇತ್ತೀಚೆಗೆ ಮುಕ್ತಾಯಗೊಂಡ ಯುಎನ್ ಜನರಲ್ ಅಸೆಂಬ್ಲಿ ಸೇರಿದಂತೆ ಹಲವಾರು ಜಾಗತಿಕ ಸಮಸ್ಯೆಗಳ ಬಗ್ಗೆ ಚರ್ಚಿಸಲು ಪಾಕಿಸ್ತಾನಿ ನಿಯೋಗ ಭಾರತಕ್ಕೆ ಆಗಮಿಸಿತ್ತು. ಸಾಮಾನ್ಯ ಸಭೆಯು ಇಂಟರ್‌ಪೋಲ್‌ನ ಸರ್ವೋಚ್ಚ ಆಡಳಿತ ಮಂಡಳಿಯಾಗಿದೆ. ಅದರ ಕಾರ್ಯನಿರ್ವಹಣೆಗೆ ಸಂಬಂಧಿಸಿದ ಪ್ರಮುಖ ನಿರ್ಧಾರಗಳನ್ನು ತೆಗೆದುಕೊಳ್ಳಲು ವರ್ಷಕ್ಕೊಮ್ಮೆ ಸಭೆ ಸೇರಲಾಗುತ್ತದೆ.

ಇಂಟರ್‌ಪೋಲ್ ಅಸೆಂಬ್ಲಿಯನ್ನು ಉದ್ದೇಶಿಸಿ ಇಂದು ಬೆಳಗ್ಗೆ ಪ್ರಧಾನಿ ಮೋದಿ ಅವರು ಮಾತನಾಡಿದ್ದರು. ನಾಲ್ಕು ದಿನಗಳ ಕಾಲ ನಡೆಯುವ ಈ ಕಾರ್ಯಕ್ರಮ ಶುಕ್ರವಾರದವರೆಗೂ ನಡೆಯುತ್ತದೆ. ಮಂತ್ರಿಗಳು, ದೇಶಗಳ ಪೊಲೀಸ್ ಮುಖ್ಯಸ್ಥರು, ರಾಷ್ಟ್ರೀಯ ಕೇಂದ್ರ ಬ್ಯೂರೋಗಳ ಮುಖ್ಯಸ್ಥರು ಮತ್ತು ಹಿರಿಯ ಲೀಸ್ ಅಧಿಕಾರಿಗಳು ಸೇರಿದಂತೆ 195 ಇಂಟರ್‌ಪೋಲ್ ಸದಸ್ಯ ರಾಷ್ಟ್ರಗಳ ನಿಯೋಗಗಳು ಈ ಈವೆಂಟ್‌ನಲ್ಲಿ ಭಾಗವಹಿಸುತ್ತಿವೆ. 1997ರಲ್ಲಿ ನಡೆದಿದ್ದ ಇಂಟರ್‌ಪೋಲ್ ಜನರಲ್ ಅಸೆಂಬ್ಲಿ ಸಭೆ ಸುಮಾರು 25 ವರ್ಷಗಳ ನಂತರ ಭಾರತದಲ್ಲಿ ನಡೆಯುತ್ತಿದೆ.

ಮೀಸಲಾತಿ ಹೋರಾಟಕ್ಕೆ ಎಲ್ಲರೂ ಸಿದ್ಧರಾಗಿ



ಕೋಲಾರ: ಒಕ್ಕಲಿಗ ಸಮುದಾಯಕ್ಕೆ ಶೇ.4 ಮೀಸಲಾತಿ ಸಾಕಾಗುವುದಿಲ್ಲ, ಶೇ.8 ಮೀಸಲಾತಿ ಹೆಚ್ಚಳ ಮಾಡಬೇಕು. ಇದಕ್ಕಾಗಿ ಹೋರಾಟ ರೂಪಿಸಲಾಗುತ್ತಿದೆ. ಎಲ್ಲರೂ ಸಿದ್ಧರಾಗಿ ಎಂದು ಹೇಳುವ ಮೂಲಕ ನಿರ್ಮಲಾನಂದನಾಥ ಸ್ವಾಮೀಜಿ ಅವರು ಮೀಸಲಾತಿ ಹೋರಾಟದ ಕಿಡಿ ಹೊತ್ತಿಸಿದ್ದಾರೆ. ಕೋಲಾರದಲ್ಲಿ ಒಕ್ಕಲಿಗರ ಸಮುದಾಯದ ವತಿಯಿಂದ ನಡೆದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಒಕ್ಕಲಿಗರ ಸಮುದಾಯಕ್ಕೆ ಮೀಸಲಾತಿ ಹೆಚ್ಚಳ ಮಾಡಬೇಕೆಂದು ಆಗ್ರಹಿಸಿದ್ದಾರೆ.

ಒಕ್ಕಲಿಗ ಸಮುದಾಯಕ್ಕೆ ಶೇ.12 ಮೀಸಲಾತಿ ನೀಡಬೇಕು. ನಮ್ಮ ಸಮುದಾಯಕ್ಕೆ ಶೇ.4 ಮೀಸಲಾತಿ ಸಾಲೋದಿಲ್ಲ ಎಂಬ ಕೂಗು ಹಿಂದಿನಿಂದಲೂ ಇದೆ. ಆದರೆ ಸಂವಿಧಾನಕ್ಕೆ ವ್ಯತಿರಿಕ್ತವಾಗಿ ಮಾತನಾಡುವುದು ಬೇಡ ಎಂದು ಸುಮ್ಮನಿದ್ದೆವು. ಈಗ ಸಂವಿಧಾನದ ಚೌಕಟ್ಟಿನಲ್ಲಿ ಸರ್ಕಾರ ಮೀಸಲಾತಿ ಹೆಚ್ಚಿಸುವುದಾದರೇ ನಮಗೂ ಶೇ.8 ಮೀಸಲಾತಿ ಹೆಚ್ಚಿಸಬೇಕು. ಕಾನೂನು ಸಮ್ಮತವಾಗಿ ನಮ್ಮ ಬೇಡಿಕೆ ಈಡೇರದಿದ್ದರೇ, ಹಂತ-ಹಂತವಾಗಿ ಹೋರಾಟ ರೂಪಿಸಲಾಗುತ್ತದೆ ಎಂದು ಎಚ್ಚರಿಸಿದ್ದಾರೆ.

ಅಲ್ಲದೇ ಒಕ್ಕಲಿಗರು ರಾಜಕೀಯವಾಗಿ ಮಾತ್ರ ಬೆಳೆದರೆ ಸಾಲದು ಆ ಮೂಲಕ ಸಮುದಾಯದ ಏಳಿಗೆಗೆ ಶ್ರಮಿಸಬೇಕು. ಮುಂದೆ ಹೋರಾಟದ ಸನ್ನಿವೇಶ ಒದಗಿಬಂದ್ರೆ ಎಲ್ಲರೂ ಒಗ್ಗಟ್ಟಿನಿಂದ ಹೋರಾಟ ಮಾಡೋಣ ಎಂದು ಕರೆ ನೀಡಿದ್ದಾರೆ.

ಕಿದ್ವಾಯಿ ನಿರ್ದೇಶಕರಾಗಿ ಡಾ.ವಿ.ಲೋಕೇಶ್ ನೇಮಕ



ಬೆಂಗಳೂರು: ಕಿದ್ವಾಯಿ ಸ್ಮಾರಕ ಗಂಥಿ ಸಂಸ್ಥೆಯ ನಿರ್ದೇಶಕರಾಗಿ ಡಾ.ವಿ.ಲೋಕೇಶ್ ನೇಮಕಗೊಂಡಿದ್ದಾರೆ. ಹಾಲಿ ನಿರ್ದೇಶಕ ಡಾ.ಸಿ. ರಾಮಚಂದ್ರ ಅವರ ಅಧಿಕಾರಾವಧಿ ಆಗಸ್ಟ್‌ನಲ್ಲಿ ಅಂತ್ಯಗೊಂಡಿತ್ತು. ಡಾ.ವಿ. ಲೋಕೇಶ್ ಅವರು ಸಂಸ್ಥೆಯ ರೇಡಿಯೇಷನ್ ಆಂಕಾಲಜಿ ವಿಭಾಗದ ಮುಖ್ಯಸ್ಥರಾಗಿ ಕಾರ್ಯನಿರ್ವಹಿಸುತ್ತಿದ್ದರು. 28 ವರ್ಷಗಳಿಂದ ಸಂಸ್ಥೆಯ ವಿವಿಧ ವೃಂದದಲ್ಲಿ ಕಾರ್ಯನಿರ್ವಹಿಸಿದ ಅನುಭವ ಹೊಂದಿದ್ದಾರೆ.

ಸಿದ್ಧಾಪುರದಲ್ಲಿ ಭೂ ಡಿನೋಟಿಫಿಕೇಷನ್

ಬಿಜೆಪಿ ಆರೋಪ ಸಂಪೂರ್ಣ ಸುಳ್ಳು, ದುರುದ್ದೇಶಪೂರಿತ



ಬೆಂಗಳೂರು, ಅ.18- ಲಾಲ್‌ಬಾಗ್ ಸಿದ್ಧಾಪುರ ಗ್ರಾಮದಲ್ಲಿ 2 ಎಕರೆ 39.5 ಗುಂಟೆ ಜಮೀನನ್ನು ಡಿನೋಟಿಫಿಕೇಷನ್/ರೀಡೂ ಮಾಡಿದ್ದೇನೆ ಎಂಬ ಬಿಜೆಪಿ ಆರೋಪ ಸಂಪೂರ್ಣ ಸುಳ್ಳು ಮತ್ತು ದುರುದ್ದೇಶಪೂರಿತವಾಗಿದೆ ಎಂದು ವಿಪಕ್ಷ ನಾಯಕ ಸಿದ್ದರಾಮಯ್ಯ ಹೇಳಿದ್ದಾರೆ.

ಈ ಕುರಿತು ಸರಣಿ ಟ್ವೀಟ್ ಮಾಡಿರುವ ಸಿದ್ದರಾಮಯ್ಯ, ಲಾಲ್‌ಬಾಗ್ ಸಿದ್ಧಾಪುರದ ಜಮೀನುಗಳ ಕುರಿತ ಸುಳ್ಳಿನ ಕಂತೆಗಳ ಮೂಲಕ ತನ್ನ ಚಾರಿತ್ರ್ಯಹನನ ಮಾಡಲು ಪ್ರಯತ್ನಿಸುತ್ತಿರುವ ಬಿಜೆಪಿಯ ಮರಿನಾಯಕನ ವಿರುದ್ಧ ತಕ್ಷಣ ಕ್ರಿಮಿನಲ್ ಪ್ರಕರಣ ದಾಖಲಿಸಬೇಕೆಂದು ರಾಜ್ಯ ಸರ್ಕಾರವನ್ನು ಒತ್ತಾಯಿಸಿದ್ದಾರೆ.

ಭೂ ಹಗರಣಗಳನ್ನು ಬಯಲಿಗೆಳೆಯುವ ಪ್ರಾಮಾಣಿಕವಾದ ಉದ್ದೇಶವನ್ನು ರಾಜ್ಯ ಸರ್ಕಾರ ಹೊಂದಿದ್ದರೆ 2008ರಿಂದ ಇದುವರೆಗೆ ಬೆಂಗಳೂರು ಮತ್ತು ರಾಜ್ಯದ ಬೇರೆ ನಗರಗಳಲ್ಲಿನ ಜಮೀನು ಉಪಯೋಗ ಬದಲಾವಣೆಯ ಪ್ರತಿ ಪ್ರಕರಣದ ಮಾಹಿತಿಯನ್ನೂ ಬಿಡುಗಡೆ ಮಾಡಬೇಕು ಎಂದು ಆಗ್ರಹಿಸಿದ್ದಾರೆ.

ಬಿಜೆಪಿ ಸರ್ಕಾರ ಅಧಿಕಾರಕ್ಕೆ ಬಂದು 3 ವರ್ಷ 3 ತಿಂಗಳಾಯಿತು. ಆದರೆ ಇದುವರೆಗೂ ಕೂಡ ಸಿ.ಡಿ.ಪಿ ಗೆ ಅನುಮೋದನೆ ನೀಡಿಲ್ಲ. ಸಿ.ಡಿ.ಪಿ ಯನ್ನು ಅಂತಿಮಗೊಳಿಸದ ಕಾರಣ ನಗರದ ಬೆಳವಣಿಗೆ ಅಡ್ಡಾದಿಡ್ಡಿಯಾಗಿದೆ. ಆದ್ದರಿಂದ ಕೂಡಲೆ ಸಿ.ಡಿ.ಪಿಯನ್ನು ಅಂತಿಮಗೊಳಿಸಿ ಗೆಜೆಟ್ ಹೊರಡಿಸಬೇಕು ಎಂದು ಮಾಜಿ ಸಿಎಂ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ.

ಭಯೋತ್ಪಾದನೆ ನಿಗ್ರಹಿಸಲು ಜಗತ್ತು ಕ್ಷಿಪ್ರ ಸ್ಪಂದಿಸಲಿ




ನವದೆಹಲಿ: ಭ್ರಷ್ಟಾಚಾರ, ಭಯೋತ್ಪಾದನೆ, ಮಾದಕ ವಸ್ತು ಕಳ್ಳಸಾಗಣೆ, ಕಳ್ಳ ಬೇಟೆ ಹಾಗೂ ಸಂಘಟಿತ ಅಪರಾಧಗಳಿಗೆ ಯಾವುದೇ ಸುರಕ್ಷಿತ ನೆಲೆ ಇರಬಾರದು. ಈ ಅಪಾಯಗಳ ನಿಗ್ರಹಕ್ಕೆ ಜಾಗತಿಕ ಸ್ಪಂದನೆ ಅಗತ್ಯ ಎಂದು ಪ್ರಧಾನಿ ಮೋದಿ ಕರೆ ನೀಡಿದರು.

ಪ್ರಗತಿ ಮೈದಾನದಲ್ಲಿ ನಡೆದ ಇಂಟರ್‌ಪೋಲ್‌ನ 90ನೇ ಸಾಮಾನ್ಯ ಸಭೆ ಉದ್ಘಾಟಿಸಿ ಮಾತನಾಡಿದ ಅವರು, ಇಂತಹ ಅಪರಾಧಗಳು ವಿಶ್ವಸಮುದಾಯ ಎದುರಿಸುತ್ತಿರುವ ಜಾಗತಿಕ ಬೆದರಿಕೆಗಳಾಗಿವೆ. ಇದರ ನಿರ್ಮೂಲನೆಗೆ ಜಾಗತಿಕ ಸಮುದಾಯ ಕ್ಷಿಪ್ರಗತಿಯಲ್ಲಿ ಕ್ರಮಕೈಗೊಂಡರೆ, ತನಿಖಾ ಸಂಸ್ಥೆಗಳು ಉತ್ತಮ ಸಹಕಾರ ನೀಡಿದರೆ, ಅಪರಾಧ ಹಿನ್ನೆಲೆಯ ಶಕ್ತಿಗಳು ನಿಷ್ಕ್ರಿಯವಾಗಲಿವೆ ಎಂದರು. ಈ ಅಪಾಯಗಳ ವೇಗವು ಮೊದಲಿಗಿಂತ ಈಗ ವೇಗವಾಗಿ ಬದಲಾಗಿದೆ. ಬೆದರಿಕೆಗಳು ಜಾಗತಿಕವಾಗಿದ್ದಾಗ, ಪ್ರತಿಕ್ರಿಯೆ ಕೇವಲ ಸ್ಥಳೀಯವಾಗಿರಲು ಸಾಧ್ಯವಿಲ್ಲ. ಭಯೋತ್ಪಾದನೆ ಸೈಬರ್ ದಾಳಿಗೂ ವಿಸ್ತರಿಸಿದೆ. ಈ ಬೆದರಿಕೆಗಳನ್ನು ಮಣಿಸಲು ಜಗತ್ತು ಒಟ್ಟುಗೂಡುವ ಸಮಯವಿದು. ಜಗತ್ತಿನ ಸುರಕ್ಷತೆ ಮತ್ತು ಭದ್ರತೆ ಜಾಗತಿಕ ಸಮುದಾಯದ ಸಮಾನ ಜವಾಬ್ದಾರಿ ಎಂದು ಮೋದಿ ಪ್ರತಿಪಾದಿಸಿದರು.

ಭಾರತವು ಹಲವು ದಶಕಗಳಿಂದ ವಿದೇಶಿ ಪ್ರಾಯೋಜಿತ ಭಯೋತ್ಪಾದನೆಯನ್ನು ಎದುರಿಸುತ್ತಿದೆ. ಜಗತ್ತು ಇದರತ್ತ ಎಚ್ಚೆತ್ತುಕೊಳ್ಳುವ ಮೊದಲೇ, ಸುರಕ್ಷತೆ ಮತ್ತು ಭದ್ರತೆಯ ಮಹತ್ವ ನಮಗೆ ತಿಳಿದಿತ್ತು. ಭಯೋತ್ಪಾದನೆಯ ವಿರುದ್ಧದ ಹೋರಾಟದಲ್ಲಿ ನಮ್ಮ ಸಾವಿರಾರು ಜನರು ಪ್ರಾಣ ತ್ಯಾಗ ಮಾಡಿದ್ದಾರೆ ಎಂದರು. 90ನೇ ಸಾಮಾನ್ಯ ಸಭೆಯ ನೆನಪಿನಾರ್ಥ ವಿಶೇಷ ಅಂಚೆ ಚೀಟಿ ಮತ್ತು 100 ನಾಣ್ಯವನ್ನು ಮೋದಿ ಬಿಡುಗಡೆ ಮಾಡಿದರು. ಗೃಹ ಸಚಿವ ಅಮಿತ್ ಶಾ, ಇಂಟರ್‌ಪೋಲ್ ಅಧ್ಯಕ್ಷ ಅಹ್ಮದ್ ನಾಸಿರ್ ಅಲ್ ರೈಸಿ, ಪ್ರಧಾನಕಾರ್ಯದರ್ಶಿ ಜರ್ಗೆನ್ ಸ್ಟಾಕ್ ಇದ್ದರು. ಪಾಕಿಸ್ತಾನದ ಫೆಡರಲ್ ಇನ್ವೆಸ್ಟಿಗೇಷನ್ ಏಜೆನ್ಸಿ (ಎಫ್‌ಐಎ) ಮಹಾನಿರ್ದೇಶಕ ಮೊಹ್ಸಿನ್ ಭಟ್ ಸೇರಿ 195 ದೇಶಗಳ ಪ್ರತಿನಿಧಿಗಳು ಈ ಸಮಾವೇಶದಲ್ಲಿ ಭಾಗವಹಿಸಿದ್ದರು.

ಕಾಂಗ್ರೆಸ್‌ನಿಂದ 'ಪೇಸಿಎಂ' ಬಳಿಕ 'ಸೇಸಿಎಂ' ಅಭಿಯಾನ ಆರಂಭ



ಬೆಂಗಳೂರು: ರಾಜ್ಯ ಬಿಜೆಪಿ ಸರ್ಕಾರದ ವಿರುದ್ಧ ಭ್ರಷ್ಟಾಚಾರ ಆರೋಪ ಮಾಡಿ 'ಪೇಸಿಎಂ' ಅಭಿಯಾನ ಆರಂಭಿಸಿದ್ದ ಕಾಂಗ್ರೆಸ್, ಪ್ರಶ್ನೆಗಳನ್ನು ಮುಂದಿಟ್ಟು 'ಸೇಸಿಎಂ' ಅಭಿಯಾನ ಶುರು ಮಾಡಿದೆ. ಅಲ್ಲದೆ, ಈ ಪ್ರಶ್ನೆಗಳಿಗೆ ಉತ್ತರಿಸಲು ಕೂಡಾ 'ಪೇಸಿಎಂ' ಬೇಕೆ ಎಂದೂ ಪ್ರಶ್ನಿಸಿದೆ.

ಈ ಬಗ್ಗೆ ಟ್ವೀಟ್ ಮಾಡಿರುವ ಕಾಂಗ್ರೆಸ್, "ಬಿಜೆಪಿ ನಿಮ್ಮ ಹತ್ತಿರ ಇದೆಯಾ ಉತ್ತರ" ಎಂಬ ಅಭಿಯಾನದ ಮೂಲಕ ರಾಜ್ಯ ಬಿಜೆಪಿ ಸರ್ಕಾರಕ್ಕೆ 50 ಪ್ರಶ್ನೆಗಳನ್ನು ಕೇಳಲಾಗಿದೆ. ಆದರೆ, ಈವರೆಗೂ ಒಂದು ಪ್ರಶ್ನೆಗೂ ಉತ್ತರಿಸಿಲ್ಲ ಎಂದು ಹೇಳಿದೆ. ಬಿಜೆಪಿ ತನ್ನ ಚುನಾವಣಾ ಪ್ರಣಾಳಿಕೆಯಲ್ಲಿ 550 ಭರವಸೆಗಳನ್ನು ನೀಡಿತ್ತು. ಈ ಭರವಸೆಗಳ ಬಗ್ಗೆ ಇದುವರೆಗೂ ನಾವು 50 ಪ್ರಶ್ನೆಗಳನ್ನು ಕೇಳಿದ್ದೇವೆ. 50 ಪ್ರಶ್ನೆಗಳಿಗೆ ಉತ್ತರಿಸಲಾಗದ ನಿಮಗೆ, 550 ಪ್ರಶ್ನೆಗಳಿಗೆ ಉತ್ತರಿಸುವ ತಾಕತ್ತಿದೆಯಾ ಎಂದು ಪ್ರಶ್ನಿಸಿರುವ ಕಾಂಗ್ರೆಸ್, ಜನರ ಪರವಾಗಿ ಕೇಳಿದ ಪ್ರಶ್ನೆಗಳಿಗೆ ಅವರು ಉತ್ತರಿಸದಿದ್ದರೆ ಪೇಸಿಎಂ ಜೊತೆಗೆ ಸೇಸಿಎಂ ಅಭಿಯಾನ ಮಾಡಬೇಕಾಗುತ್ತದೆ ಎಂದಿದೆ. ಈ ಬಗ್ಗೆ ಪ್ರತಿಕ್ರಿಯಿಸಿರುವ ಕೆಪಿಸಿಸಿ ಸಂವಹನ ವಿಭಾಗದ ಮುಖ್ಯಸ್ಥ ಪ್ರಿಯಾಂಕ್ ಖರ್ಗೆ, ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಗಳಲ್ಲಿ ಶೇ.10ರಷ್ಟನ್ನೂ ಬಿಜೆಪಿ ಈಡೇರಿಸಿಲ್ಲ. ಹೀಗಾಗಿ, ನಾವು ಪೇಸಿಎಂ ಅಭಿಯಾನದ ಜತೆಗೆ 'ಸೇಸಿಎಂ' ಮೂಲಕ 50 ಪ್ರಶ್ನೆ ಕೇಳಿದ್ದೇವೆ. ಸರ್ಕಾರ ಮೂಕ ಬಸವನ ರೀತಿ ಕುಳಿತರೆ ಆಗುವುದಿಲ್ಲ. ಪ್ರಣಾಳಿಕೆ ತೋರಿಸಿ ಜನರಿಂದ ಮತ ಹಾಕಿಸಿಕೊಂಡಿರುವ ಬಿಜೆಪಿ ಉತ್ತರಿಸಬೇಕು ಎಂದರು.

ಎಲ್ಲ ಪಿಐಎಲ್ ವಜಾಗೊಳಿಸಲು ಸುಪ್ರೀಂಕೋರ್ಟ್‌ಗೆ ಕೇಂದ್ರ ಸರ್ಕಾರ ಮನವಿ

ನವದೆಹಲಿ: ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆಯನ್ನು (ಯುಸಿಸಿ) ಜಾರಿಗೊಳಿಸುವಂತೆ ಕೋರಿ ಸಲ್ಲಿಕೆಯಾಗಿರುವ ಎಲ್ಲ ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು (ಪಿಐಎಲ್) ವಜಾಗೊಳಿಸುವಂತೆ ಕೇಂದ್ರ ಸರ್ಕಾರ ಸುಪ್ರೀಂಕೋರ್ಟ್‌ಗೆ ತಿಳಿಸಿದೆ.

ಈ ಕುರಿತು ಸುಪ್ರೀಂಕೋರ್ಟ್‌ಗೆ ಲಿಖಿತ ಉತ್ತರ ನೀಡಿರುವ ಕೇಂದ್ರ ಸರ್ಕಾರ, ದೇಶದಲ್ಲಿ ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೊಳಿಸಬೇಕೇ, ಬೇಡವೇ ಎಂಬುದು ನೀತಿ ನಿರೂಪಣೆಗೆ ಸಂಬಂಧಿಸಿದ್ದು. ಈ ವಿಷಯದಲ್ಲಿ ಸಂಸತ್‌ಗೆ ಕೋರ್ಟ್ ಯಾವುದೇ ನಿರ್ದೇಶನ ನೀಡುವಂತಿಲ್ಲ ಎಂದು ತಿಳಿಸಿದೆ. ನಾಗರಿಕರು ಬೇರೆ ಬೇರೆ ಕಾನೂನುಗಳನ್ನು ಪಾಲನೆ ಮಾಡುವುದು, ದೇಶದ ಏಕತೆಗೆ ಅಗೌರವ ತೋರಿದಂತೆ ಎಂದೂ ಕೇಂದ್ರ ಹೇಳಿದೆ

ಕಾನೂನು ರಚಿಸುವುದು ಸಂಸತ್‌ನ ಪರಮಾಧಿಕಾರ. ಈ ಅಂಶವನ್ನು ಸುಪ್ರೀಂ ಕೋರ್ಟ್ ನೀಡಿರುವ ಹಲವಾರು ತೀರ್ಪುಗಳಲ್ಲಿ ಉಲ್ಲೇಖಿಸಲಾಗಿದೆ.

ಬಿಲ್ಕಿಸ್ ಬಾನೋ ಕೇಸು: 11 ಅಪರಾಧಿಗಳ ಬಿಡುಗಡೆ ಪ್ರಶ್ನಿಸಿ ಸುಪ್ರೀಂಕೋರ್ಟ್‌ಗೆ ಸಲ್ಲಿಸಿದ್ದ ಅರ್ಜಿ ವಿಚಾರಣೆ ನ.29ಕ್ಕೆ



ನವದೆಹಲಿ: 2002ರ ಬಿಲ್ಕಿಸ್ ಬಾನೋ ಸಾಮೂಹಿಕ ಅತ್ಯಾಚಾರ ಪ್ರಕರಣ ಮತ್ತು ಗುಜರಾತ್ ಗಲಭೆಯಲ್ಲಿ ಸಂತ್ರಸ್ತೆಯ ಕುಟುಂಬದ ಏಳು ಸದಸ್ಯರನ್ನು ಹತ್ಯೆಗೈದ ಪ್ರಕರಣದಲ್ಲಿ 11 ಅಪರಾಧಿಗಳ ಬಿಡುಗಡೆಯನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳನ್ನು ನವೆಂಬರ್ 29 ರಂದು ವಿಚಾರಣೆ ನಡೆಸುವುದಾಗಿ ಸುಪ್ರೀಂಕೋರ್ಟ್ ಹೇಳಿದೆ.

ನ್ಯಾಯಮೂರ್ತಿಗಳಾದ ಅಜಯ್ ರಸ್ತೋಗಿ ಮತ್ತು ಸಿ.ಟಿ. ರವಿಕುಮಾರ್ ಅವರಿದ್ದ ನ್ಯಾಯಪೀಠವು ಗುಜರಾತ್ ಸರ್ಕಾರ ಸಲ್ಲಿಸಿದ ಅಫಿಡವಿಟ್ಟನ್ನು ಎಲ್ಲರಿಗೂ ಸಿಗುವಂತೆ ಆದೇಶ ನೀಡಿದರು. ಗುಜರಾತ್ ಸರ್ಕಾರ ಸಲ್ಲಿಸಿರುವ ಅಫಿಡವಿಟ್‌ಗೆ ಉತ್ತರ ನೀಡಲು ಅರ್ಜಿದಾರರಿಗೆ ಕಾಲಾವಕಾಶ ನೀಡಲಾಗಿದೆ.

ಬಿಲ್ಕಿಸ್ ಬಾನೊ ಪ್ರಕರಣದಲ್ಲಿ ಗುಜರಾತ್ ಸರ್ಕಾರ ಪ್ರತಿಅರ್ಜಿ ಸಲ್ಲಿಸಿದೆ. ಸರ್ಕಾರದ ಅಫಿಡವಿಟ್ಟು ಎಲ್ಲಾ ಸಂಬಂಧಪಟ್ಟವರಿಗೆ ಸಿಗುವಂತೆ ನ್ಯಾಯಾಲಯ ಆದೇಶ ನೀಡಿದೆ. ಪ್ರಕರಣದ ತನಿಖೆಯನ್ನು ಸಿಬಿಐ ನಡೆಸಿದ್ದರಿಂದ, ಅಪರಾಧಿಗಳ ಕ್ಷಮಾಪಣೆಗಾಗಿ ಕೇಂದ್ರದಿಂದ ಸೂಕ್ತ ಆದೇಶಗಳನ್ನು ಪಡೆದುಕೊಂಡಿದೆ ಎಂದು ಅದು ಹೇಳಿದೆ.

2002ರಲ್ಲಿ ಗೋಧ್ರಾ ರೈಲು ದಹನ ಘಟನೆಯ ನಂತರ ಭುಗಿಲೆದ್ದ ಗಲಭೆ ಹಿಂಸಾಚಾರದಲ್ಲಿ ತಪ್ಪಿಸಿಕೊಂಡು ಓಡಿಹೋಗುವಾಗ ಬಿಲ್ಕಿಸ್ ಬಾನೋಗೆ 21 ವರ್ಷ ಗಳಾಗಿದ್ದು ಐದು ತಿಂಗಳ ಗರ್ಭಿಣಿಯಾಗಿದ್ದರು. ಗಲಭೆ ಯಲ್ಲಿ ಕೊಲೆಯಾದ ಏಳು ಕುಟುಂಬ ಸದಸ್ಯರಲ್ಲಿ ಆಕೆಯ ಮೂರು ವರ್ಷದ ಮಗಳೂ ಸೇರಿದ್ದಳು.

ಗುಜರಾತ್ ಸರ್ಕಾರವು ತನ್ನ ನೀತಿಯಡಿಯಲ್ಲಿ ಅಪರಾಧಿಗಳನ್ನು ಬಿಡುಗಡೆ ಮಾಡಲು ಅನುಮತಿ ನೀಡಿದ ನಂತರ ಪ್ರಕರಣದಲ್ಲಿ ಶಿಕ್ಷೆಗೊಳಗಾಗಿದ್ದ 11 ಮಂದಿ ಈ ವರ್ಷ ಆಗಸ್ಟ್ 15ರಂದು ಗೋಧ್ರಾ ಉಪ-ಜೈಲಿನಿಂದ ಹೊರಗೆ ಬಂದಿದ್ದರು. ಅವರು 15 ವರ್ಷಗಳಿಗೂ ಹೆಚ್ಚು ಕಾಲ ಜೈಲು ವಾಸವನ್ನು ಪೂರ್ಣಗೊಳಿಸಿದ್ದರು.

ಅಮಿತ್ ಶಾ ರಾಜೀನಾಮೆಗೆ ಸಿದ್ದರಾಮಯ್ಯ ಆಗ್ರಹ: 2002ರ ಬಿಲ್ಕಿಸ್ ಬಾನೋ ಸಾಮೂಹಿಕ ಅತ್ಯಾಚಾರ ಪ್ರಕರಣದ ಅಪರಾಧಿಗಳನ್ನು ಬಿಡುಗಡೆ ಮಾಡಲು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರ ಕಚೇರಿಯೇ ಆದೇಶ ನೀಡಿದ್ದು, ಅವರು ರಾಜೀನಾಮೆ ಸಲ್ಲಿಸಬೇಕು ಎಂದು ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯ ಒತ್ತಾಯಿಸಿದ್ದಾರೆ. ಈ ಕುರಿತು ಸರಣಿ ಟ್ವೀಟ್ ಮಾಡಿರುವ ಅವರು, ಬಿಲ್ಕಿಸ್ ಬಾನೋ ಪ್ರಕರಣದ ಅಪರಾಧಿಗಳನ್ನು ಬಿಡುಗಡೆ ಮಾಡಲು ಗೃಹ ಸಚಿವಾಲಯ ನೀಡಿರುವ ಆದೇಶವು ಬಿಜೆಪಿ ನಾಯಕರ ಕ್ರೂರ ಮನಸ್ಥಿತಿಯನ್ನು ತೋರಿಸುತ್ತದೆ. ಈ ಅಮಾನವೀಯ ರಣಹದ್ದುಗಳಿಗೆ ಕ್ಷಮಾದಾನ ನೀಡುವ ಮೂಲಕ ಇಡೀ ದೇಶಕ್ಕೆ ಅವಮಾನ ಮಾಡಿದ್ದಾರೆ. ಅಮಿತ್ ಶಾ ರಾಜೀನಾಮೆ ನೀಡ ಬೇಕು ಮತ್ತು ಇಡೀ ರಾಷ್ಟ್ರದ ಕ್ಷಮೆಯಾಚಿಸಬೇಕು ಎಂದಿದ್ದಾರೆ.

ಕಾನೂನು ಪ್ರಕಾರ ನಿರ್ಧಾರ ಕೈಗೊಳ್ಳಲಾಗಿದೆ ಅಪರಾಧಿಗಳ ಬಿಡುಗಡೆ ಕಾನೂನು ಪ್ರಕ್ರಿಯೆಯಾಗಿದ್ದು, ಇದರಲ್ಲಿ ತಪ್ಪಿದೆ ಎಂದೆನಿಸುತ್ತಿಲ್ಲ ಎಂದು ಕೇಂದ್ರ ಸಚಿವ ಪ್ರಹ್ಲಾದ್ ಜೋಶಿಯವರು ಹೇಳಿದ್ದಾರೆ.

ಖಾಸಗಿ ಸುದ್ದಿವಾಹಿನಿಯೊಂದಿಗೆ ಮಾತನಾಡಿರುವ ಅವರು, ಬಿಲ್ಕಿಸ್ ಬಾನೋ ಅಪರಾಧಿಗಳ ಬಿಡುಗಡೆ ಕ್ರಮವನ್ನು ಸಮರ್ಥಿಸಿಕೊಂಡಿದ್ದಾರೆ.

ಜೈಲುವಾಸ ಅನುಭವಿಸಿದ ಕೈದಿಗಳ ಬಿಡುಗಡೆಗೆ ಕೆಲವು ಪ್ರಕ್ರಿಯೆಗಳಿವೆ. ಪ್ರಸ್ತುತ ಬಿಡುಗಡೆಯಾಗಿರುವ ಅಪರಾಧಿಗಳು ಜೈಲಿನಲ್ಲಿ 14 ವರ್ಷ ಶಿಕ್ಷೆ ಅನುಭವಿಸಿದ್ದಾರೆ. ಅವರ ಉತ್ತಮ ನಡವಳಿಕೆ ಹಿನ್ನೆಲೆಯಲ್ಲಿ ಕೇಂದ್ರ ಸರ್ಕಾರ ಬಿಡುಗಡೆಗೆ ಒಪ್ಪಿಗೆ ನೀಡಿದೆ. ಎಲ್ಲವೂ ಕಾನೂನು ಪ್ರಕಾರವೇ ನಡೆದಿದೆ. ಇದರಲ್ಲಿ ತಪ್ಪಾಗಿದೆ ಎಂದೆನಿಸುತ್ತಿಲ್ಲ ಎಂದು ಹೇಳಿದ್ದಾರೆ.

ಸ್ತ್ರೀಯರಲ್ಲಿ ಬಂಜೆತನ ಮತ್ತು ಪಿ.ಸಿ.ಓ.ಸಿಂಡ್ರೋಮ್



ಡಾ. ದೇವಿಕಾ ಗುಣಶೀಲ

ದೈಹಿಕವಾಗಿ ಏನೋ ಹಿಂಸೆ. ಪ್ರಯತ್ನಪಟ್ಟರೂ ಗರ್ಭ ಧರಿಸುತ್ತಿಲ್ಲ. ವೈದ್ಯರನ್ನು ಕೇಳಿದರೆ ಹಾರ್ಮೋನ್ ಏರುಪೇರು ಅಂತಾರೆ. ದೇಹದಲ್ಲಾಗಿ ರೋಗಕ್ಕೆ ಈ ಸಮಸ್ಯೆ ಉಂಟಾಗಿರಬಹುದಾ ? ಎಂದು ಅನೇಕ ಮಹಿಳೆಯರು ಸಂತಾನ ಬಯಸಿ ವೈದ್ಯರನ್ನು ಕೇಳುತ್ತಿರುತ್ತಾರೆ. ಹಾರ್ಮೋನಿನ ಅಸಮತೋಲನದಿಂದ ಉಂಟಾಗುವ ಪಿ.ಸಿ.ಓ.ಎಸ್ ಮಹಿಳೆಯರಲ್ಲಿ ಹಲವು ತೆರನಾದ ಲಕ್ಷಣಗಳ ಮೂಲಕ ಗೋಚರಿಸಬಹುದು. ಪಿ.ಸಿ.ಓ.ಎಸ್ ಇರುವ ಹೆಚ್ಚಿನ ಮಹಿಳೆಯರ ಅಂಡಾಶಯದಲ್ಲಿ ನೀರಿನ ಗುಳ್ಳೆಗಳು (ಸಿಸ್ಟ್) ಇರುತ್ತವೆ. ಆದರೆ, ಈ ಗುಳ್ಳೆಗಳು ಬೇರೆ ಕಾರಣದಿಂದಲೂ ಉಂಟಾಗಿರಬಹುದು. 10% ಮಹಿಳೆಯರಲ್ಲಿ ಕಂಡುಬರುವ ಈ ಪಿ.ಸಿ.ಓ.ಎಸ್‌ನ ತೊಂದರೆಯು ಮಹಿಳೆಯರಲ್ಲಿ ಬಂಜೆತನದ ಸಾಮಾನ್ಯ ಕಾರಣವಾಗಿದೆ. ಪಿ.ಸಿ.ಓ.ಎಸ್‌ನ ಲಕ್ಷಣವು ಹದಿಹರೆಯದಲ್ಲಿಯೇ ಅನಿಯಮಿತ ಋತುಚಕ್ರ ಕಾಣಿಸಿಕೊಳ್ಳುವುದು. ಇನ್ನಿತರೆ ಲಕ್ಷಣ ಅಥವಾ ಸೂಚನೆಗಳೆಂದರೆ; ಮೊಡವೆ ಮತ್ತು ತೂಕದ ಹೆಚ್ಚಳ, ಇನ್ಸುಲಿನ್‌ನ ಮಟ್ಟ ಹೆಚ್ಚಾಗುವುದು ಮತ್ತು ಇನ್ಸುಲಿನ್ ಪ್ರತಿರೋಧಕತೆ, ಹೊಟ್ಟೆ, ಬಂಜೆತನ, ಅತಿಯಾದ ಕೊಲೆಸ್ಟ್ರಾಲ್ ಮಟ್ಟ, ಅತಿಯಾದ ರಕ್ತದೊತ್ತಡ. ಪಿ.ಸಿ.ಓ.ಎಸ್‌ನಿಂದ ಬಳಲುತ್ತಿರುವ ಮಹಿಳೆಯರು ಹಲವು ತೆರನಾದ ರೋಗಗಳಿಗೆ ಒಳಗಾಗುವ ಅಪಾಯವಿರುತ್ತದೆ. ಉದಾಹರಣೆಗೆ ಅತಿಯಾದ ರಕ್ತದೊತ್ತಡ, ಮಧುಮೇಹ, ಹೃದಯದ ತೊಂದರೆ ಮತ್ತು ಗರ್ಭಾಶಯದ ಕ್ಯಾನ್ಸರ್. ಋತುಚಕ್ರ ಮತ್ತು ಹಾರ್ಮೋನಿನ ಏರುಪೇರಿನಿಂದಾಗಿ ಪಿ.ಸಿ.ಓ.ಎಸ್ ಹೊಂದಿರುವ ಮಹಿಳೆಯರು ಬಂಜೆತನಕ್ಕೆ ಒಳಗಾಗುವುದು ಸಾಮಾನ್ಯವಾಗಿದೆ.

ಚಿಕಿತ್ಸೆ: ಗರ್ಭ ಧರಿಸಲು ಬಯಸುವ ಮಹಿಳೆಯರಿಗಾಗಿ ಅಂಡಾಣು ಬಿಡುಗಡೆಯನ್ನುಂಟು ಮಾಡುವ ಔಷಧಗಳನ್ನು ನೀಡಬಹುದು. ತೂಕವನ್ನು ಇಳಿಸಿಕೊಳ್ಳುವುದರಿಂದ ಋತು ಚಕ್ರ ನಿಯಮಿತಗೊಂಡು ಪಿ.ಸಿ.ಓ.ಎಸ್ ಇರುವ ಮಹಿಳೆಯರಲ್ಲಿ ಗರ್ಭಧಾರಣೆಯ ಸಂಭವನೀಯತೆ ಹೆಚ್ಚಿಸಬಹುದು. ಹೆಚ್ಚಿನ ಚಿಕಿತ್ಸೆಗಳಾದ ಹಾರ್ಮೋನಿನ ಇಂಜೆಕ್ಷನ್ ಮತ್ತು ಅಸಿಸ್ಟೆಡ್ ರಿಪ್ರೊಡಕ್ಟಿವ್ ಟೆಕ್ನಾಲಜಿ (ಐ.ವಿ.ಎಫ್ ಚಿಕಿತ್ಸೆಗಳು) ಗಳನ್ನು ಕೂಡ ಬಳಸಬೇಕಾಗುತ್ತದೆ. ಪಿ.ಸಿ.ಓ.ಎಸ್ ನ ಕಾರಣದಿಂದ ಉಂಟಾಗುವ ಬೊಜ್ಜಿಗೆ ಕೂಡ ಸರಿಯಾದ ಚಿಕಿತ್ಸೆ ತೆಗೆದು ಕೊಳ್ಳುವ ಅಗತ್ಯವಿದೆ. ಪಿ.ಸಿ.ಓ.ಎಸ್ ಇರುವಾಗಿನ ಬೊಜ್ಜಿನ ನಿರ್ವಹಣೆಯನ್ನು ಸಾಮಾನ್ಯ ಬೊಜ್ಜಿನ ನಿರ್ವಹಣೆಯಂತೆಯೇ ಮಾಡಬಹುದು. ತೂಕದ ಇಳಿಕೆಯು ಪಿ.ಸಿ.ಓ.ಎಸ್‌ನಿಂದ ಉಂಟಾಗುವ ಹಲವು ತೊಂದರೆಗಳು ಉದಾಹರಣೆಗೆ ಟೈಪ್ 2 ಡಯಾಬಿಟಿಸ್ ಮತ್ತು ಹೃದಯದ ಖಾಯಿಲೆಗಳ ಸಂಭವನೀಯತೆಯನ್ನು ಕಡಿಮೆ ಮಾಡುತ್ತದೆ. ಮಕ್ಕಳಿಲ್ಲದ ದಂಪತಿಗಳು ನಿರಾಶರಾಗದೇ, ಚಿಕಿತ್ಸೆಗಳ ಬಗ್ಗೆ ಮಾಹಿತಿ ಪಡೆಯಲು ಸಂಪರ್ಕಿಸಿ: ಗುಣಶೀಲ ಫರ್ಟಿಲಿಟಿ ಸೆಂಟರ್, ಬಸವನಗುಡಿ, ಬೆಂಗಳೂರು-560004. ದೂರವಾಣಿ: 080-46462600 ಅಥವಾ ಕಾವೇರಿ ಗುಣಶೀಲ ಐ.ವಿ.ಎಫ್ ಸೆಂಟರ್, ಮಳವಳ್ಳಿ-ಮೈಸೂರು ರಸ್ತೆ, ಸಿದ್ಧಾರ್ಥ ಬಡಾವಣೆ, ಮೈಸೂರು, ದೂರವಾಣಿ: 0821-2343585, ಮೊಬೈಲ್: 9108444527.

ಟ್ಯೂಷನ್ ಶಿಕ್ಷಕನಿಂದ ಮಳವಳ್ಳಿ ಬಾಲಕಿ ಮೇಲೆ ಅತ್ಯಾಚಾರ, ಕೊಲೆ ಪ್ರಕರಣ

ಅನಧಿಕೃತವಾಗಿ ಟ್ಯೂಷನ್ ನಡೆಸಿದರೆ ಕೇಸು ದಾಖಲು: ಡಿಡಿಪಿಐ ಎಚ್ಚರಿಕೆ

ಮಂಡ್ಯ, ಅ.18– ಮಂಡ್ಯ ಜಿಲ್ಲೆಯಲ್ಲಿ ಅನುಮತಿ ಪಡೆಯದೇ ಅನಧಿಕೃತವಾಗಿ ಟ್ಯೂಷನ್‌ಗಳನ್ನು ಶಿಕ್ಷಕರು ನಡೆಸಿದರೆ ಅಂತಹವರ ಮೇಲೆ ಕೇಸು ದಾಖಲಿಸಿ, ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳುವುದಾಗಿ ಡಿಡಿಪಿಐ ಜವರೇಗೌಡ ಎಚ್ಚರಿಸಿದ್ದಾರೆ.

ಜಿಲ್ಲೆಯಲ್ಲಿ ಅಕ್ರಮವಾಗಿ ಟ್ಯೂಷನ್ ಸೆಂಟರ್ ಪತ್ತೆಗೆ ಸುತ್ತೋಲೆ ಹೊರಡಿಸಿರುವ ಡಿಡಿಪಿಐ, ಅನಧಿಕೃತ ಟ್ಯೂಷನ್ ಕಂಡು ಬಂದರೆ ತಕ್ಷಣವೇ ಕ್ರಮ ಕೈಗೊಳ್ಳಿ. ಸರ್ಕಾರಿ, ಅನುದಾನಿತ, ಅನುದಾನ ರಹಿತ ಶಿಕ್ಷಕರು ಟ್ಯೂಷನ್ ನಡೆಸಿದರೂ ಶಿಸ್ತು ಕ್ರಮ ಕೈಗೊಳ್ಳುವುದಾಗಿ ಎಚ್ಚರಿಸಿದ್ದಾರೆ. ಜೊತೆಗೆ ಮಳವಳ್ಳಿಯಲ್ಲಿ ನಡೆದ ಪ್ರಕರಣದ ರೀತಿ ಮತ್ಯಾವುದೇ ಪ್ರಕರಣ ಮರುಕಳಿಸದಂತೆ ಶಿಕ್ಷಣ ಇಲಾಖೆ ಎಚ್ಚರಿಕೆ ವಹಿಸಿದ್ದು, ಟ್ಯೂಷನ್ ಹಾಗೂ ಮಕ್ಕಳನ್ನು ಹೊರ ಕಳುಹಿಸುವಾಗ ಎಚ್ಚರಿಕೆ ವಹಿಸುವಂತೆ ಪೋಷಕರಲ್ಲಿ ಡಿಡಿಪಿಐ ಮನವಿ ಮಾಡಿದ್ದಾರೆ.

ಕಾಂತರಾಜು ಶಿಕ್ಷಕನೇ ಅಲ್ಲ: ಮಳವಳ್ಳಿ ಬಾಲಕಿ ಅತ್ಯಾಚಾರಿ ಆರೋಪಿ ಕಾಂತರಾಜು ಶಿಕ್ಷಕನೇ ಅಲ್ಲ ಎಂಬುದು ಬೆಳಕಿಗೆ ಬಂದಿದೆ. ಆತ ನಡೆಸುತ್ತಿದ್ದ ಟ್ಯೂಷನ್ ಸೆಂಟರ್ ಸಹ ಅಧಿಕೃತವಲ್ಲ ಎಂಬುದು ಮಳವಳ್ಳಿ ಬಿಇಓ ಡಿಡಿಪಿಐಗೆ ಸಲ್ಲಿಸಿದ ವರದಿಯ ಮಾಹಿತಿ ಬಹಿರಂಗಗೊಂಡಿದೆ.

ಮೊದಲು ಟ್ಯೂಷನ್ ಸೆಂಟರ್‌ವೊಂದರಲ್ಲಿ ಶಿಕ್ಷಕನಾಗಿ ಕಾರ್ಯ ನಿರ್ವಹಿಸುತ್ತಿದ್ದ. ಆತನ ವರ್ತನೆಗೆ ಬೇಸತ್ತು ಮಹಿಳಾ ಶಿಕ್ಷಕರು ಹೊರದಬ್ಬಿಸಿದ್ದರು. ಜೊತೆಗೆ ಆತನ ಕಿರುಕುಳ ತಾಳ ಲಾರದೇ ಪತ್ನಿ ಮಕ್ಕಳು ಸಹ ಆತನಿಂದ ದೂರ ಹೋಗಿದ್ದರು. ಬಳಿಕ ಆತನೇ ಅನಧಿಕೃತ ಟ್ಯೂಷನ್ ಸೆಂಟರ್ ತೆರೆದು ಮಕ್ಕಳಿಗೆ ಪಾಠ ಹೇಳುತ್ತಿದ್ದ. ಆದರೆ ಆತನ ಟ್ಯೂಷನ್ ಸೆಂಟರ್‌ಗೆ ಯಾವುದೇ ಅನುಮತಿ ಇರಲಿಲ್ಲ. ಎಲ್ಲಕ್ಕಿಂತ ಹೆಚ್ಚಾಗಿ ಕಾಂತರಾಜುವಿನ ಶಿಕ್ಷಣ ಕೇವಲ ಪಿಯುಸಿ ಎಂಬುದು ಬೆಳಕಿಗೆ ಬಂದಿದ್ದು, ಇದರಿಂದ ಎಚ್ಚೆತ್ತ ಡಿಡಿಪಿಐ ನಕಲಿ ಶಿಕ್ಷಕರ ಟ್ಯೂಷನ್ ಹಾವಳಿ ತಪ್ಪಿಸಲು ಅನಧಿಕೃತ ಟ್ಯೂಷನ್ ಸೆಂಟರ್ ಮೇಲೆ ದಾಳಿ ನಡೆಸಲು ಜಿಲ್ಲೆಯ ಎಲ್ಲಾ ಬಿಇಓಗಳಿಗೆ ಸೂಚಿಸಿದ್ದಾರೆ.

ಆರೋಪಿ ಬಂಧಿಸುವಲ್ಲಿ ಪೊಲೀಸರ ಕಾರ್ಯ ಶ್ಲಾಘನೀಯ

ಬಾಲಕಿ ಕುಟುಂಬಕ್ಕೆ ಅಲೋಕ್‌ಕುಮಾರ್ ಸಾಂತ್ವನ



ಮಳವಳ್ಳಿ, ಅ.18– 10 ವರ್ಷದ ಬಾಲಕಿ ದಿವ್ಯಾಳನ್ನು ಅಮಾನುಷವಾಗಿ ಹತ್ಯೆ ಮಾಡಿ ನೀರಿನ ತೊಟ್ಟಿಗೆ ಬಿಸಾಡಿದ್ದ ಆರೋಪಿಯನ್ನು ಶೀಘ್ರ ಬಂಧನ ಮಾಡಿದ ಕ್ರಮಕ್ಕೆ ಎಸ್ಪಿ ಎನ್.ಸತೀಶ್, ಅಪರ ಎಸ್ಪಿ ವೇಣುಗೋಪಾಲ್, ಡಿವೈಎಸ್ಪಿ ನವೀನ್ ಕುಮಾರ್‌ರವರ ಮಾರ್ಗದರ್ಶನದಲ್ಲಿ ಪಿಐ ರಾಜೇಶ್ ಮತ್ತು ತಂಡದವರನ್ನು ಅಪರ ಪೊಲೀಸ್ ಮಹಾ ನಿರ್ದೇಶಕ (ಕಾನೂನು ಮತ್ತು ಸುವ್ಯವಸ್ಥೆ) ಅಲೋಕ್ ಕುಮಾರ್ ಪ್ರಶಂಸೆ ವ್ಯಕ್ತಪಡಿಸಿದರು.

ಹತ್ಯೆಗೀಡಾದ ಬಾಲಕಿ ದಿವ್ಯಾಳ ಮನೆಗೆ ಭೇಟಿ ಕೊಟ್ಟು ಕುಟುಂಬದ ಸದಸ್ಯರನ್ನು ಸಂತೈಸಿ, ಠಾಣೆಯಲ್ಲಿ ಆರೋಪಿಯನ್ನು ಖುದ್ದು ವಿಚಾರಣೆ ನಡೆಸಿ, ನಂತರ ಪೊಲೀಸ್ ಇಲಾಖೆ ಆಯೋಜಿಸಿದ್ದ ಸಾರ್ವಜನಿಕ ಸಂಪರ್ಕ ಸಭೆ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಇಂತಹ ಪೈಶಾಚಿಕ ಕೃತ್ಯಗಳು ದೇಶದಲ್ಲಿ ನಡೆಯುತ್ತಿರುವುದು ದುರದೃಷ್ಟಕರ ಎಂದರು.

ಯಾವುದೇ ಘಟನೆ ಸಂಭವಿಸಿದ ಸಂದರ್ಭದಲ್ಲಿ ನಾಗರಿಕರು ಇಲಾಖೆಯೊಂದಿಗೆ ಕೈಜೋಡಿಸಿ, ತಪ್ಪಿತಸ್ಥರಿಗೆ ಶಿಕ್ಷೆಯಾಗುವಂತೆ ನೋಡಿಕೊಳ್ಳುವ ಜವಾಬ್ದಾರಿ ನಮ್ಮ ನಿಮ್ಮೆಲ್ಲರ ಮೇಲಿದೆ, ಆ ನಿಟ್ಟಿನಲ್ಲಿ ತನಿಖಾ ಅಧಿಕಾರಿಗಳಿಗೆ ತಾವು ಸಹಕರಿಸಬೇಕೆಂದು ಕೋರಿದ ಅವರು, ಬಾಲಕಿ ಕೊಲೆ ಪ್ರಕರಣವನ್ನು ಸರ್ಕಾರ ಮತ್ತು ಇಲಾಖೆ ಗಂಭೀರವಾಗಿ ಪರಿಗಣಿಸಿದೆ. ಆರೋಪಿಗೆ ಕಠಿಣ ಶಿಕ್ಷೆಗೆ ಗುರಿಪಡಿಸುವಂತ ಕ್ರಮವನ್ನು ಕೈಗೊಳ್ಳಲಾಗುವುದು ಎಂದು ಹೇಳಿದರು.

ಪಟ್ಟಣದಲ್ಲಿ ಅಪರಾಧ ಪ್ರಕರಣಗಳು ಕಂಡು ಬಂದಲ್ಲಿ ಕೂಡಲೇ ಎಸ್ಪಿ ಅಥವಾ ಡಿವೈಎಸ್ಪಿ ಗಮನಕ್ಕೆ ತಂದರೆ ಕೂಡಲೇ ಅಪರಾಧ ಎಸಗಿದ ಆರೋಪಿಗಳನ್ನು ಬಂಧಿಸಿ, ಕ್ರಮವಹಿಸಲಾಗುವುದು, ಸಾರ್ವಜನಿಕರ ಸಹಕಾರ ಅತ್ಯಗತ್ಯ, ತಾವು ಇಂತಹ ಕಠಿಣ ಸಂದರ್ಭದಲ್ಲಿ ಇಲಾಖೆಗೆ ಮಾಹಿತಿಯನ್ನು ತಿಳಿಸಬೇಕೆಂದರು.

ಈ ವೇಳೆ ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಪ್ರಮೀಳಾ ನಾಯ್ಡು, ಮೈಸೂರು ದಕ್ಷಿಣ ವಲಯ ವಿಭಾಗದ ಡಿಐಜಿ ಪ್ರವೀಣ್ ಪವಾರ್ ಮಧುಕರ್, ಎಸ್ಪಿ ಎನ್.ಯತೀಶ್, ಅಪರ ಎಸ್ಪಿ ವೇಣುಗೋಪಾಲ್, ಡಿವೈಎಸ್ಪಿ ನವೀನ್ ಕುಮಾರ್, ಪಿಐ ರಾಜೇಶ್, ಸಿಪಿಐ ಜಗದೀಶ್, ಸಿಪಿಐ ಶ್ರೀಧರ್ ಸೇರಿದಂತೆ ಪೊಲೀಸ್ ಅಧಿಕಾರಿಗಳು ಹಾಗೂ ಜಿಲ್ಲಾ ಮಹಿಳಾ ಹೋರಾಟಗಾರ್ತಿ ರಜನಿರಾಜ್ ಮತ್ತು ತಾಲೂಕಿನ ಮುಖಂಡರುಗಳು ಭಾಗವಹಿಸಿದ್ದರು.

ಆರೋಪಿಗೆ ಕಠಿಣ ಶಿಕ್ಷೆಗೆ ಆಗ್ರಹ

ಮಳವಳ್ಳಿ, ಅ.18– ಪಟ್ಟಣದಲ್ಲಿ ಇತ್ತೀಚೆಗೆ ನಾಗರಿಕರನ್ನು ತಲೆತಗ್ಗಿಸುವಂತೆ ಪೈಶಾಚಿಕ ಕೃತ್ಯ ನಡೆಸಿದ ಪಾಪಿಗೆ ಕಠಿಣ ಶಿಕ್ಷೆಗೆ ಒಳಪಡಿಸುವಂತ ಕ್ರಮವನ್ನು ಸರ್ಕಾರ ಕೈಗೊಳ್ಳುವಂತೆ ಮಹಿಳಾ ಆಯೋಗ ಮತ್ತು ಪೊಲೀಸ್ ಇಲಾಖೆಯ ಮೂಲಕ ಆಗ್ರಹ ಪಡಿಸಲಾಗುವುದೆಂದು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷೆ ಪ್ರಮೀಳಾ ನಾಯ್ಡು ತಿಳಿಸಿದರು.

ಮಳವಳ್ಳಿಗೆ ಆಗಮಿಸಿ, ಮೃತ ಬಾಲಕಿ ದಿವ್ಯಾಳ ಮನೆಗೆ ಭೇಟಿ ನೀಡಿ ಕುಟುಂಬದ ಸದಸ್ಯರಿಗೆ ಸಾಂತ್ವನ ತಿಳಿಸಿ, ಪಟ್ಟಣದ ಪ್ರವಾಸಿ ಮಂದಿರದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಅವರು, ರಾಜ್ಯ ಬೆಚ್ಚಿ ಬೀಳಿಸುವಂತ ಘಟನೆ ಇದಾಗಿದ್ದು, ಅಮಾಯಕ ಬಾಲಕಿಯನ್ನು ಅಮಾನುಷವಾಗಿ ಕೊಲೆ ಮಾಡಿದ ವ್ಯಕ್ತಿಗೆ ಯಾವುದೇ ಕಠಿಣ ಶಿಕ್ಷೆ ನೀಡಿದರೂ ಸಾಲದು, ಆದರೂ ಆಕೆಯ ಕುಟುಂಬದವರ ಅಪೇಕ್ಷೆಗಳು ಶಿಕ್ಷೆಗೆ ಒಳಪಡಿಸಬೇಕೆಂದು ಕೋರಿಕೆಯಾಗಿದೆ ಎಂದರು. ಆಯೋಗ ಸಂತ್ರಸ್ತೆಯ ಕುಟುಂಬದ ಜೊತೆಗಿದ್ದು, ನ್ಯಾಯಾಲಯದಲ್ಲಿ ಬಲವಾದ ಸಾಕ್ಷಿಗಳನ್ನು ಸಾದರಪಡಿಸಿ, ವಿಶೇಷ ನ್ಯಾಯಾಲಯದಲ್ಲಿ ಈ ಪ್ರಕರಣ ಮುಕ್ತಾಯಗೊಳಿಸಿ ಆರೋಪಿಗೆ ಕಠಿಣ ಶಿಕ್ಷೆಗೆ ಒಳಪಡಿಸುವಂತೆ ಕೋರಲಾಗುವುದು. ಇದಕ್ಕೆ ಪೂರಕವಾದ ಎಲ್ಲಾ ರೀತಿಯ ಕ್ರಮ ಕೈಗೊಳ್ಳಲಾಗುವುದು ಎಂದು ಹೇಳಿದರು. ಸುದ್ದಿಗೋಷ್ಠಿಯಲ್ಲಿ, ಮಂಡ್ಯ ಮಹಿಳಾ ಹೋರಾಟಗಾರ್ತಿ ರಜನಿರಾಜ್, ಆಶಾ, ಜಿಲ್ಲಾ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಡಿ.ಡಿ.ನಾಗರಾಜು, ಸಿಡಿಪಿಓ ಕುಮಾರ್ ಉಪಸ್ಥಿತರಿದ್ದರು.

ರಸ್ತೆ ಗುಂಡಿಗೆ ಬೈಕ್ ಬಿದ್ದು ಗೃಹಿಣಿ ಸಾವು



ಶ್ರೀರಂಗಪಟ್ಟಣ, ಅ.18– ರಸ್ತೆ ಗುಂಡಿಗೆ ಬೈಕ್ ಬಿದ್ದು ಗೃಹಿಣಿಯೋರ್ವರು ಮೃತಪಟ್ಟಿರುವ ಘಟನೆ ತಾಲೂಕಿನ ತರೀಪುರ ಗ್ರಾಮದ ಬಳಿ ಸಂಭವಿಸಿದೆ.

ತಾಲೂಕಿನ ಮಹದೇವಪುರದ ಕಾರ್ತಿಕ ಎಂಬುವರ ಪತ್ನಿ ಛಾಯಾದೇವಿ (21) ಮೃತಪಟ್ಟವರು. ಛಾಯಾದೇವಿ ಪತಿ ಕಾರ್ತಿಕರೊಂದಿಗೆ ಸೋಮವಾರ ಮೈಸೂರಿಗೆ ಬೈಕ್‌ನಲ್ಲಿ ತೆರಳಿದ್ದರು. ಗ್ರಾಮಕ್ಕೆ ಹಿಂದಿರುಗುವಾಗ ತರೀಪುರ ಬಳಿ ರಸ್ತೆ ಗುಂಡಿಮಯವಾಗಿದ್ದು, ಆಯತಪ್ಪಿ ಬಿದ್ದರೆನ್ನಲಾಗಿದೆ. ಪತಿ ಕಾರ್ತಿಕ್‌ಗೆ ಸಣ್ಣಪುಟ್ಟ ಗಾಯಗಳಾಗಿದ್ದು, ಛಾಯಾದೇವಿ ತಲೆಗೆ ತೀವ್ರ ಪೆಟ್ಟಾಗಿತ್ತು. ತಕ್ಷಣ ಆಕೆಯನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲಿಸಲಾಗಿತ್ತು. ಆದರೆ ಇಂದು ಚಿಕಿತ್ಸೆ ಫಲಕಾರಿಯಾಗದೆ ಮೃತಪಟ್ಟರೆನ್ನಲಾಗಿದೆ. ಈ ಬಗ್ಗೆ ಅರಕೆರೆ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ರಸ್ತೆ ದುರಸ್ತಿಗೆ ಗ್ರಾಮಸ್ಥರ ಆಗ್ರಹ: ತರೀಪುರ, ಮಹದೇವಪುರ ಸುತ್ತಮುತ್ತಲಿನ ರಸ್ತೆಗಳು ಗುಂಡಿಮಯವಾಗಿದೆ. ಇತ್ತೀಚೆಗೆ ಬೀಳುತ್ತಿರುವ ಮಳೆಯಿಂದ ಮತ್ತಷ್ಟು ಹಾಳಾಗಿದ್ದು, ಇದರಿಂದ ಈ ದುರ್ಘಟನೆ ನಡೆದಿದೆ. ಶೀಘ್ರವೇ ದುರಸ್ತಿಗೆ ಕ್ರಮ ಕೈಗೊಳ್ಳುವಂತೆ ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಕೈತೊಳೆಯಲು ಹೋದ ವ್ಯಕ್ತಿಯೋರ್ವ ನೀರು ಪಾಲು

ಭಾರತೀನಗರ, ಅ.18– ಕೈತೊಳೆಯಲು ಹೋದ ವ್ಯಕ್ತಿಯೋರ್ವ ನೀರು ಪಾಲಾಗಿರುವ ಘಟನೆ ಚಿಕ್ಕರಸಿನಕೆರೆ ಹೆಬ್ಬಾಳ ಚನ್ನಯ್ಯ ನಾಲೆಯಲ್ಲಿ ನಡೆದಿದೆ.



ಚಿಕ್ಕರಸಿನಕೆರೆ ಗ್ರಾಮದ 36 ವರ್ಷದ ಸಿ.ಕೆ.ಆನಂದ ನೀರಿನಲ್ಲಿ ಕೊಚ್ಚಿಹೋದ ವ್ಯಕ್ತಿ. ತಮ್ಮ ಜಮೀನಿನಲ್ಲಿ ಕೆಲಸ ಮುಗಿಸಿಕೊಂಡು ಹೆಬ್ಬಾಳ ನಾಲೆಯ ಅಂಚಿನಲ್ಲಿ ಕೈತೊಳೆಯಲು ಹೋದ ಸಂದರ್ಭದಲ್ಲಿ ಆಯತಪ್ಪಿ ನಾಲೆಗೆ ಬಿದ್ದಿದ್ದಾನೆಂದು ಜಮೀನಿನಲ್ಲಿದ್ದ ಕುಟುಂಬಸ್ಥರು ಪೊಲೀಸ್ ಠಾಣೆಗೆ ವಿಷಯ ತಿಳಿಸಿದ್ದಾರೆ.

ಈ ಸಂಬಂಧ ಕೆ.ಎಂ.ದೊಡ್ಡಿ ಪೊಲೀಸರು ಮತ್ತು ಅಗ್ನಿಶಾಮಕ ದಳ ಸ್ಥಳಕ್ಕೆ ಧಾವಿಸಿ ಮೃತದೇಹದ ಪತ್ತೆಗಾಗಿ ತೀವ್ರ ಕಾರ್ಯಾಚರಣೆ ನಡೆಸುತ್ತಿದ್ದಾರೆ. ಸಂಜೆಯಾದರು ಮೃತದೇಹ ಪತ್ತೆಯಾಗದ ಕಾರಣ ನಾಳೆ ಶೋಧ ಕಾರ್ಯ ಮುಂದುವರಿಸಲಿದ್ದಾರೆ. ಈ ಸಂಬಂಧ ಕೆ.ಎಂ.ದೊಡ್ಡಿ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ನಿರಂತರ ಸುರಿದ ಮಳೆಗೆ ಉಕ್ಕಿ ಹರಿದ ರಾಜಕಾಲುವೆ



ಕಿಕ್ಕೇರಿ, ಅ.18– ನಿರಂತರ ಸುರಿದ ಮಳೆಗೆ ಅಮಾನಿಕೆರೆಯ ರಾಜಕಾಲುವೆ ನೀರು ರಾಜ್ಯ ಹೆದ್ದಾರಿ ರಸ್ತೆಯ ಮೇಲೆ ಹರಿದು ವಾಹನ ಸವಾರರು ಹರಸಾಹಸಪಡುವಂತಾಗಿದೆ.

ತಿಂಗಳಿನಿಂದ ಬಿಡುವು ನೀಡಲಾಗಿದ್ದ ಮಳೆ ವಾರದಿಂದ ಸುರಿಯುತ್ತಿದ್ದು, ಜನ, ಜಾನುವಾರು ತತ್ತರಿಸುವಂತಾಗಿದೆ. ಕಳೆದೆರಡು ತಿಂಗಳ ಹಿಂದೆ ಅಮಾನಿಕೆರೆಯ ಕೋಡಿ ಹಾಗೂ ರಾಜಕಾಲುವೆ ನೀರು ಉಕ್ಕಿ ಹರಿದು ಕೆಳಗಿನ ಜಮೀನುಗಳು ಜಲಾವೃತಗೊಂಡು ಅಪಾರ ಹಾನಿಯಾಗಿತ್ತು. ಭೂಮಿಯ ಮಣ್ಣುಕೊಚ್ಚಿಕೊಂಡು ಕೊರಕಲಾಗಿತ್ತು. ಭತ್ತ, ಜಾನುವಾರು ಮೇವಿನ ಹುಲ್ಲು, ತೆಂಗು, ಬಾಳೆ, ಅಡಿಕೆ ನೀರಿನಲ್ಲಿ ತೇಲಿ ಹೋಗಿತ್ತು ಜಲ ವಿಕೋಪ ಮರೆಯುವ ಮುನ್ನವೇ ರಾಜಕಾಲುವೆ ನೀರು ರಾಜ್ಯ ಹೆದ್ದಾರಿಯಲ್ಲಿ ಭಾರೀ ಪ್ರಮಾಣದಲ್ಲಿ ಹರಿಯುತ್ತಿದೆ. ಸಂಜೆ, ರಾತ್ರಿ ನಿತ್ಯ ಬಿಡದೆ ಸುರಿಯುತ್ತಿರುವ ಮಳೆಗೆ ಜನತೆ ಕಂಗೆಡುವಂತಾಗಿದೆ. ನಿತ್ಯ ಸಂಜೆ ನೀರಿನ ಹರಿವು ಹೆಚ್ಚಾಗಿ ಬೆಳಗಿನ ವೇಳೆ ಕಡಿಮೆಯಾಗುವುದು. ನಂತರ ಸಂಜೆ ಹೆಚ್ಚಾಗುವುದು ಮಾಮೂಲಿ ಎನ್ನುವಂತಾಗಿದೆ.

ಪರಿಣಾಮ ರೈತಾಪಿ ಜನತೆ ಹೊಲಗದ್ದೆಯಿಂದ ಮನೆಗೆ ತೆರಳಲು ಪರಿತಪಿಸುವಂತಾಗಿದೆ. ಶಾಲಾ–ಕಾಲೇಜು ಮಕ್ಕಳಿಗೆ ತ್ರಾಸಕರವಾಗುವಂತಾಗಿದೆ. ರಸ್ತೆ ತುಂಬಾ ಗುಂಡಿ ಬಿದ್ದಿದ್ದು, ಗುಂಡಿಗಳಲ್ಲಿ ಮಳೆಯ ನೀರು ತುಂಬಿರುವುದರಿಂದ ದ್ವಿಚಕ್ರ ವಾಹನ ಸವಾರರು ಬೀಳುವಂತಾಗಿದೆ.

ಶ್ರೀ ಮಾಯಮ್ಮ, ದೇವಮ್ಮ, ಸಿದ್ದೇಶ್ವರರಿಗೆ ವಿಶೇಷ ಪೂಜೆ



ಭಾರತೀನಗರ, ಅ.18– ಅಂಬರಹಳ್ಳಿ ಗ್ರಾಮ ಸಮೀಪವಿರುವ ಕಾಗೆಹಳ್ಳದದೊಡ್ಡಿ, ಜವನೇಗೌಡನದೊಡ್ಡಿ ಗ್ರಾಮದ ಮಧ್ಯೆ ಸ್ಥಾಪಿಸಿರುವ ಶ್ರೀ ಮಾಯಮ್ಮ, ದೇವಮ್ಮ, ಸಿದ್ದೇಶ್ವರ ದೇವರುಗಳ ಪೂಜೆ ಕಾರ್ಯಕ್ರಮ ವಿಜೃಂಭಣೆಯಿಂದ ಜರುಗಿತು.

ಬೆಳಗ್ಗೆಯಿಂದ ಪ್ರಾರಂಭವಾದ ಪೂಜೆಯಲ್ಲಿ ಹೋಮಗಳು ಸೇರಿದಂತೆ ವಿವಿಧ ಪೂಜಾ ಕೈಂಕರ್ಯಗಳು ಜರುಗಿತು. ದೇವರ ಮೂರ್ತಿಗಳಿಗೆ ಹೂವಿನಿಂದ ವಿಶೇಷವಾಗಿ ಅಲಂಕರಿಸಲಾಗಿತ್ತು. ನೂರಾರು ಭಕ್ತಾದಿಗಳು ಭಾಗವಹಿಸಿದ್ದರು. ಇದೇ ವೇಳೆ ಭಕ್ತಾದಿಗಳಿಗೆ ಅನ್ನಸಂತರ್ಪಣಾ ಕಾರ್ಯಕ್ರಮ ಜರುಗಿತು.

ದೇವಲಾಪುರ ವ್ಯಾಪ್ತಿಯಲ್ಲಿ ಬೃಹತ್ ಆರೋಗ್ಯ ಶಿಬಿರ

ನಾಗಮಂಗಲ, ಅ.18– ತಾಲೂಕಿನ ದೇವಲಾಪುರ ಹೋಬಳಿ ವ್ಯಾಪ್ತಿಯಲ್ಲಿ ಬೃಹತ್ ಉಚಿತ ಆರೋಗ್ಯ ತಪಾಸಣಾ ಹಾಗೂ ರಕ್ತದಾನ ಶಿಬಿರವನ್ನು ನಾಗಮಂಗಲ ವಿಧಾನಸಭಾ ಕ್ಷೇತ್ರದ ಸಮಾಜ ಸೇವಕ ಮಲ್ಲಿಕಾರ್ಜುನ್ ನೇತೃತ್ವದಲ್ಲಿ ಅ.23ರಂದು ಆಯೋಜಿಸಲಾಗಿದೆ.



ಕರ್ನಾಟಕ ಪಬ್ಲಿಕ್ ಶಾಲಾ ಆವರಣದಲ್ಲಿ ಅಂದು ಬೆಳಗ್ಗೆ 9 ಗಂಟೆಯಿಂದ ಸಂಜೆ 4 ಗಂಟೆಯವರೆಗೂ ಆದಿಚುಂಚನಗಿರಿ ವೈದ್ಯಕೀಯ ಮಹಾವಿದ್ಯಾಲಯ ಆಸ್ಪತ್ರೆ ಸಂಶೋಧನಾ ಕೇಂದ್ರ ಹಾಗೂ ಸಮಾಜ ಸೇವಕ ಮಲ್ಲಿಕಾರ್ಜುನ ಫೈಟರ್ ರವಿ ಸಹಯೋಗದೊಂದಿಗೆ ಉಚಿತ ಆರೋಗ್ಯ ತಪಾಸಣೆ, ನೇತ್ರ ತಪಾಸಣೆ ಮತ್ತು ರಕ್ತದಾನ ಶಿಬಿರವನ್ನು ಏರ್ಪಡಿಸಿದ್ದು, ಈ ಶಿಬಿರದಲ್ಲಿ ವಿವಿಧ ಬಗೆಯ ಆರೋಗ್ಯ ಸಮಸ್ಯೆ ಎದುರಿಸುತ್ತಿರುವವರು ಪಾಲ್ಗೊಳ್ಳುವಂತೆ ಫೈಟರ್ ರವಿ ತಿಳಿಸಿದರು.

ಶಿಬಿರದಲ್ಲಿ ಹೃದಯ ಸಂಬಂಧಿ, ನರರೋಗ, ದಂತ, ಗರ್ಭಿಣಿ ಹಾಗೂ ಸ್ತ್ರೀರೋಗ, ಬಿಳಿ ಸೆರಗು, ಬಂಜೆತನ, ಗರ್ಭಕೋಶದ ತೊಂದರೆ, ಕೀಲು ಮೂಳೆ, ಕಿವಿ ಮೂಗು, ಗಂಟಲು, ಮಧುಮೇಹ, ಪಿತ್ತಜನಕಾಂಗ, ಕ್ಯಾನ್ಸರ್, ಚರ್ಮರೋಗ ಹಾಗೂ ಮಕ್ಕಳಿಗೆ ಸಂಬಂಧಿಸಿದ ಇತರ ಕಾಯಿಲೆಗಳಿಗೆ ಉಚಿತವಾಗಿ ಔಷಧಿಗಳನ್ನು ನೀಡಲಾಗುವುದು. ಈ ಸಂದರ್ಭದಲ್ಲಿ ಅರ್ಜುನ್, ಪವನ್, ದರ್ಶನ್ ಹೇಮಂತ್, ಚೇತನ್ ಮುಂತಾದವರು ಉಪಸ್ಥಿತರಿದ್ದರು.

ಕನ್ನಡ ಬಳಕೆ ಕಡ್ಡಾಯಕ್ಕೆ ರಾಷ್ಟ್ರೀಕೃತ, ಖಾಸಗಿ ಬ್ಯಾಂಕ್ ವ್ಯವಸ್ಥಾಪಕರ ಸಭೆ

ಮೈಸೂರು ನಗರ ಪಾಲಿಕೆ ಕನ್ನಡ ಜಾಗೃತಿ ಸಮಿತಿ ನಿರ್ಧಾರ



ಮೈಸೂರು, ಅ.18(ಎಸ್‌ಬಿಡಿ)– ಕನ್ನಡಕ್ಕೆ ಪ್ರಾಧಾನ್ಯತೆ ನೀಡುವ ಸಂಬಂಧ ಮೈಸೂರಿನಲ್ಲಿರುವ ರಾಷ್ಟ್ರೀಕೃತ ಹಾಗೂ ಖಾಸಗಿ ಬ್ಯಾಂಕ್‌ಗಳ ವ್ಯವಸ್ಥಾಪಕರ ಸಭೆ ನಡೆಸಲು ಮೈಸೂರು ಮಹಾನಗರ ಪಾಲಿಕೆ ಕನ್ನಡ ಜಾಗೃತಿ ಸಮಿತಿ ನಿರ್ಧರಿಸಿದೆ.

ನಗರಪಾಲಿಕೆಯ ಜಯಚಾಮರಾಜೇಂದ್ರ ಒಡೆಯರ್ ಸಭಾಂಗಣದಲ್ಲಿ ಮಂಗಳವಾರ ನಡೆದ ಜಿಲ್ಲಾ ಕನ್ನಡ ಜಾಗೃತಿ ಸಮಿತಿ ಸಭೆಯಲ್ಲಿ ಕನ್ನಡ ಅನುಷ್ಠಾನ ಸಂಬಂಧ ಚರ್ಚೆ ನಡೆಸಿ, ಕರ್ನಾಟಕದಲ್ಲಿ ಕನ್ನಡಕ್ಕೇ ಪ್ರಾಧಾನ್ಯತೆ ನೀಡಬೇಕು. ಆದರೆ ರಾಷ್ಟ್ರೀಕೃತ ಹಾಗೂ ಖಾಸಗಿ ಬ್ಯಾಂಕ್‌ಗಳಲ್ಲಿ ಸಮರ್ಪಕವಾಗಿ ಕನ್ನಡ ಬಳಕೆ ಮಾಡುತ್ತಿಲ್ಲ ಎಂಬ ಆಕ್ಷೇಪ ಸಾರ್ವಜನಿಕ ವಲಯದಲ್ಲಿದೆ. ಹಾಗಾಗಿ ಶೀಘ್ರ ಬ್ಯಾಂಕುಗಳ ವ್ಯವಸ್ಥಾಪಕರ ಸಭೆ ನಡೆಸಿ ಬ್ಯಾಂಕ್ ವ್ಯವಹಾರದಲ್ಲಿ ಕನ್ನಡಕ್ಕೆ ಪ್ರಾಧಾನ್ಯತೆ ನೀಡುವಂತೆ ಸೂಚನೆ ನೀಡಲು ನಿರ್ಧರಿಸಲಾಯಿತು.

ನಗರ ಪಾಲಿಕೆಯ ಎಲ್ಲಾ 9 ವಲಯ ಕಚೇರಿಗಳಲ್ಲಿ 'ಕನ್ನಡವೇ ಸತ್ಯ ಕನ್ನಡವೇ ನಿತ್ಯ' ನಾಮಫಲಕ ಅಳವಡಿಸಬೇಕು. ಉದ್ದಿಮೆ ಮಳಿಗೆಗಳು ಹಾಗೂ ಮಾಲ್‌ಗಳಲ್ಲಿ ಅಳವಡಿಸಿರುವ ನಾಮಫಲಕಗಳ ಶೇ.75 ಭಾಗದಲ್ಲಿ ದೊಡ್ಡದಾಗಿ ಕನ್ನಡ ಬಳಕೆ ಮಾಡಿರಬೇಕು. ಇದನ್ನು ಉಲ್ಲಂಘಿಸಿದವರಿಗೆ ತಿಳುವಳಿಕೆ ಪತ್ರ ಜಾರಿ ಮಾಡಿ, 30 ದಿನಗಳಲ್ಲಿ ನಾಮಫಲಕ ಬದಲಿಸದಿದ್ದರೆ ಉದ್ದಿಮೆ ಪರವಾನಗಿಯನ್ನು ರದ್ದುಪಡಿಸಬೇಕು ಎಂದು ಸಮಿತಿಯು ಪಾಲಿಕೆ ಅಧಿಕಾರಿಗಳಿಗೆ ತಿಳಿಸಿದರು.

ಸಭೆಯಲ್ಲಿ ಸಮಿತಿ ಸದಸ್ಯರಾದ ಅರವಿಂದ ಶರ್ಮಾ, ಸೌಗಂಧಿಕಾ ಜೋಯಿಸ್, ಎ.ಎಸ್.ನಾಗರಾಜು, ಸಾತನೂರು ದೇವರಾಜ್, ಡಾ.ಮುಳ್ಳೂರು ನಂಜುಂಡಸ್ವಾಮಿ, ಎನ್.ಜಿ.ಗಿರೀಶ್, ನಗರ ಪಾಲಿಕೆ ಹೆಚ್ಚುವರಿ ಆಯುಕ್ತೆ ಎನ್.ಜಿ.ರೂಪ, ಉಪಾಯುಕ್ತರಾದ ಎಂ.ಕೆ.ಸವಿತಾ(ಆಡಳಿತ) ಹಾಗೂ ದಾಸೇಗೌಡ(ಕಂದಾಯ), ಕೌನ್ಸಿಲ್ ಕಾರ್ಯದರ್ಶಿ ಆರ್.ರಂಗಸ್ವಾಮಿ, ಲೆಕ್ಕಾಧಿಕಾರಿ ಡಿ.ಬಿ.ಕವಿತಾ, ಎಲ್ಲಾ ವಲಯ ಕಚೇರಿ ಆಯುಕ್ತರು, ಆರೋಗ್ಯಾಧಿಕಾರಿಗಳು ಇನ್ನಿತರ ಅಧಿಕಾರಿಗಳು ಉಪಸ್ಥಿತರಿದ್ದರು.

ಅ.22ರಂದು ಫೈರ್ ಅಂಡ್ ಸೇಫ್ಟಿ ಸಂಬಂಧ ವಿದ್ಯಾರ್ಥಿಗಳಿಗೆ ವಿಶೇಷ ಸೆಮಿನಾರ್

ಮಂಡ್ಯ, ಅ.18– ಮಂಗಳೂರು ಇನ್ಸ್‌ಸ್ಟಿಟ್ಯೂಟ್ ಆಫ್ ಫೈರ್ ಅಂಡ್ ಸೇಫ್ಟಿ ಇಂಜಿನಿಯರಿಂಗ್ ಸಂಸ್ಥೆ ವತಿಯಿಂದ ಮಂಡ್ಯದ ಹರ್ಡೀಕರ್ ಭವನದಲ್ಲಿ ಅ.22ರಂದು ಬೆಳಗ್ಗೆ 10ಕ್ಕೆ ಫೈರ್ ಅಂಡ್ ಸೇಫ್ಟಿ ಕ್ಷೇತ್ರದಲ್ಲಿನ ವಿವಿಧ ಕೋರ್ಸ್‌ಗಳು ಮತ್ತು ಉದ್ಯೋಗಾವಕಾಶಗಳ ಬಗ್ಗೆ ವಿದ್ಯಾರ್ಥಿಗಳಿಗೆ ವಿಶೇಷ ಸೆಮಿನಾರ್ ಏರ್ಪಡಿಸಲಾಗಿದೆ.

ಮಂಡ್ಯದ ಪೀಪಲ್ ಎಜುಕೇಷನ್ ಟ್ರಸ್ಟ್ ಅಧ್ಯಕ್ಷ ಕೆ.ಎಸ್.ವಿಜಯ್ ಆನಂದ್ ಸೆಮಿನಾರ್ ಉದ್ಘಾಟಿಸಲಿದ್ದು ಕರ್ನಾಟಕ ರಾಜ್ಯ ಮುಕ್ತ ವಿವಿ ನಿರ್ವಹಣಾ ಅಧ್ಯಯನ ವಿಭಾಗದ ಮುಖ್ಯಸ್ಥರಾಗಿದ್ದ ಪ್ರೊ.ಜಗದೀಶ ಮತ್ತಿತರರು ಅತಿಥಿಗಳಾಗಿ ಭಾಗವಹಿಸಲಿದ್ದಾರೆ.

ಕೋರ್ಸ್‌ಗಳು ಹಾಗೂ ಉದ್ಯೋಗಾವಕಾಶಗಳ ಬಗ್ಗೆ ಅನುಭವಿ ಪ್ರಾಧ್ಯಾಪಕರು ಮಾಹಿತಿ ಹಾಗೂ ಮಾರ್ಗದರ್ಶನ ನೀಡಲಿದ್ದಾರೆ. ಅಲ್ಲದೆ ಪ್ರತ್ಯೇಕ ಕೌನ್ಸಿಲಿಂಗ್ ಮೂಲಕ ಸ್ಥಳದಲ್ಲೇ ಕೋರ್ಸ್‌ಗೆ ದಾಖಲಾಗಬಹುದು. ಮುಂದಿನ ಕಲಿಕೆ ಬಗ್ಗೆ ಗೊಂದಲದಲ್ಲಿರುವ ವಿದ್ಯಾರ್ಥಿಗಳಿಗೆ ಈ ಸೆಮಿನಾರ್ ಉಪಯುಕ್ತವಾಗಿದೆ. ಇನ್ಸ್‌ಸ್ಟಿಟ್ಯೂಟ್ ಆಫ್ ಫೈರ್ ಅಂಡ್ ಸೇಫ್ಟಿ ಇಂಜಿನಿಯರಿಂಗ್ ಸಂಸ್ಥೆಯು ಕಳೆದ 15 ವರ್ಷಗಳಿಂದ ಫೈರ್ ಅಂಡ್ ಸೇಫ್ಟಿ, ಹೆಲ್ತ್ ಅಂಡ್ ಸೇಫ್ಟಿ ಡಿಪ್ಲೊಮಾ, ಪಿಜಿ ಡಿಪ್ಲೊಮಾ, ಬಿಬಿಎ, ಎಂಬಿಎ ಕೋರ್ಸ್ ನೀಡುತ್ತಿದ್ದು, ರಾಜ್ಯದಲ್ಲಿ 10 ಶಾಖೆಗಳನ್ನು ಒಳಗೊಂಡಿದೆ. ಸೆಮಿನಾರ್‌ನಲ್ಲಿ ಭಾಗವಹಿಸಲಿಚ್ಛಿಸುವ ಮಂಡ್ಯ ನಗರ ಹಾಗೂ ಸುತ್ತಮುತ್ತಲ ಪ್ರದೇಶದ ವಿದ್ಯಾರ್ಥಿಗಳು ಮೊ.ಸಂ.9008717027 ಸಂಪರ್ಕಿಸಿ ಮುಂಗಡವಾಗಿ ನೋಂದಣಿ ಮಾಡಿಕೊಳ್ಳಬೇಕೆಂದು ಸಂಸ್ಥೆ ಅಧ್ಯಕ್ಷ ಕೆ.ಜೆ.ವಿನೋದ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

2023ರ ಏಷ್ಯಾ ಕಪ್‌ಗಾಗಿ ಭಾರತ ಪಾಕಿಸ್ತಾನ ಪ್ರವಾಸ ಕೈಗೊಳ್ಳುವುದಿಲ್ಲ: ಜಯ್ ಶಾ ಸ್ಪಷ್ಟನೆ

ಮುಂಬೈ, ಅ.18– 2023ರ ಏಷ್ಯಾಕಪ್‌ಗಾಗಿ ಭಾರತ ಪಾಕಿಸ್ತಾನ ಪ್ರವಾಸ ಕೈಗೊಳ್ಳುವುದಿಲ್ಲ ಎಂದು ಏಷ್ಯನ್ ಕ್ರಿಕೆಟ್ ಕೌನ್ಸಿಲ್ ಮುಖ್ಯಸ್ಥ ಜಯ್ ಶಾ ಮಂಗಳವಾರ ಸ್ಪಷ್ಟಪಡಿಸಿದ್ದಾರೆ.

ಮುಂಬೈನಲ್ಲಿ ನಡೆದ 91ನೇ ಬಿಸಿಸಿಐ ವಾರ್ಷಿಕ ಸಾಮಾನ್ಯ ಸಭೆಯ ಬಳಿಕ ಮಾತನಾಡಿದ ಅವರು, ಮುಂದಿನ ಏಷ್ಯಾಕಪ್‌ಗಾಗಿ ಭಾರತ ತಂಡವು ಪಾಕಿಸ್ತಾನ ಪ್ರವಾಸ ಕೈಗೊಳ್ಳುವುದಿಲ್ಲ ಎಂದು ಹೇಳಿದರು.

2023ರ ಏಷ್ಯಾ ಕಪ್ ಟೂರ್ನಿಯನ್ನು ಪಾಕಿಸ್ತಾನವು ಆಯೋಜಿಸಲಿದೆ. ಏಷ್ಯಾಕಪ್ ಪಂದ್ಯಾವಳಿಯನ್ನು ಪಾಕಿಸ್ತಾನದಲ್ಲಿ ಆಯೋಜಿಸಿದರೆ ಭಾರತ ತಂಡವು ಟೂರ್ನಿಯಲ್ಲಿ ಪಾಲ್ಗೊಳ್ಳುವುದಿಲ್ಲ. ಬದಲಾಗಿ ಪಾಕ್ ಕ್ರಿಕೆಟ್ ಮಂಡಳಿ ಬೇರೆ ದೇಶದಲ್ಲಿ ಟೂರ್ನಿಯನ್ನು ಆಯೋಜಿಸಿದರೆ ಮಾತ್ರ ಟೀಂ ಇಂಡಿಯಾ ಭಾಗವಹಿಸಲಿದೆ ಎಂದು ತಿಳಿಸಿದರು.

ಈ ಬಗ್ಗೆ ಪಾಕಿಸ್ತಾನ ಕ್ರಿಕೆಟ್ ಮಂಡಳಿ ಇನ್ನೂ ಯಾವುದೇ ಪ್ರತಿಕ್ರಿಯೆ ನೀಡಿಲ್ಲ. ಈ ಸಂಬಂಧ ಏಷ್ಯನ್ ಕ್ರಿಕೆಟ್ ಕೌನ್ಸಿಲ್‌ನಲ್ಲಿ ಸಭೆ ನಡೆಯುವ ಸಾಧ್ಯತೆಯಿದೆ ಎಂದು ಹೇಳಲಾಗುತ್ತಿದೆ. ಭಾರತ ಕೊನೆಯದಾಗಿ 2005–06ರಲ್ಲಿ ರಾಹುಲ್ ದ್ರಾವಿಡ್ ನಾಯಕತ್ವದಲ್ಲಿ ದ್ವಿಪಕ್ಷೀಯ ಸರಣಿಗಾಗಿ ಪಾಕಿಸ್ತಾನಕ್ಕೆ ಪ್ರವಾಸ ಕೈಗೊಂಡಿತ್ತು. ಇನ್ನು ಪಾಕಿಸ್ತಾನ ತಂಡವು 2012–13ರಲ್ಲಿ ಕೊನೆಯ ಬಾರಿ ಭಾರತದಲ್ಲಿ ಸರಣಿ ಆಡಿತ್ತು. ಇದಾದ ಬಳಿಕ ಉಭಯ ದೇಶಗಳು ದ್ವಿಪಕ್ಷೀಯ ಕ್ರಿಕೆಟ್ ಸರಣಿಯನ್ನು ಆಡಿಲ್ಲ.

ಜಯಲಲಿತಾ ಸಾವು ಪ್ರಕರಣ

ಶಶಿಕಲಾ, ಇತರ ಮೂವರ ವಿರುದ್ಧ ತನಿಖೆಗೆ ಆರ್ಮುಗಸ್ವಾಮಿ ಆಯೋಗ ವರದಿ ಶಿಫಾರಸು



ಚೆನ್ನೈ, ಅ.18– ತಮಿಳುನಾಡು ಮಾಜಿ ಸಿಎಂ ಜೆ.ಜಯಲಲಿತಾ ಸಾವು ಪ್ರಕರಣದಲ್ಲಿ ಶಶಿಕಲಾ ಹಾಗೂ ವೈದ್ಯಕೀಯ ಸಿಬ್ಬಂದಿ ತನಿಖೆಗೆ ನ್ಯಾ. ಆರ್ಮುಗಸ್ವಾಮಿ ವಿಚಾರಣಾ ಸಮಿತಿ ಆದೇಶಿಸಿದೆ. ಇಂದು ಸಮಿತಿಯ ವರದಿ ಮಂಡನೆಯಾಗಿದ್ದು, ತಮಿಳುನಾಡು ವಿಧಾನಸಭೆಯಲ್ಲಿ ವರದಿಯನ್ನು ಮಂಡನೆ ಮಾಡಲಾಯಿತು.

ಪ್ರಕರಣದ ಸಂಬಂಧ ಜಯಲಲಿತಾ ಆಪ್ತೆ ಶಶಿಕಲಾ ನಟರಾಜನ್, ಮಾಜಿ ಆರೋಗ್ಯ ಕಾರ್ಯದರ್ಶಿ ರಾಧಾಕೃಷ್ಣನ್, ವೈದ್ಯ ಶಿವಕುಮಾರ್, ಮಾಜಿ ಆರೋಗ್ಯ ಸಚಿವ ವಿಜಯಭಾಸ್ಕರ್ ವಿರುದ್ಧ ತನಿಖೆ ನಡೆಸಲು ಆದೇಶಿಸಲಾಗಿದೆ.

2016ರ ಡಿಸೆಂಬರ್‌ನಲ್ಲಿ ಮುಖ್ಯಮಂತ್ರಿಯಾಗಿದ್ದ ಜಯಲಲಿತಾ ಆಸ್ಪತ್ರೆಯಲ್ಲಿ ದೀರ್ಘಾವಧಿ ಅನಾರೋಗ್ಯದಿಂದ ಮೃತಪಟ್ಟಿ ದ್ದರು. ಈ ಪ್ರಕರಣದ ತನಿಖೆಗೆ ರಾಜ್ಯ ಸರ್ಕಾರ ಈ ಸಮಿತಿಯನ್ನು ರಚಿಸಿತ್ತು.

ಸಮಿತಿ ಉಲ್ಲೇಖಿಸಿರುವ ವ್ಯಕ್ತಿಗಳ ವಿರುದ್ಧ ಸರ್ಕಾರಿ ತನಿಖೆ ಕುರಿತು ಕಾನೂನು ತಜ್ಞರ ಅಭಿಪ್ರಾಯವನ್ನು ತೆಗೆದುಕೊಂಡು ಸೂಕ್ತ ಕ್ರಮ ಕೈಗೊಳ್ಳಲು ಸಂಪುಟ ನಿರ್ಧರಿಸಿದೆ ಎಂದು ತಿಳಿದುಬಂದಿದೆ "ಎಲ್ಲಾ ಅಂಶಗಳನ್ನೂ ಪರಿಶೀಲಿಸಿದ ನಂತರ ವಿಕೆ ಶಶಿಕಲಾ, ಕೆಎಸ್ ಶಿವಕುಮಾರ್, ಡಾ. ಸಿ ವಿಜಯ ಭಾಸ್ಕರ್, ಜೆ ರಾಧಾಕೃಷ್ಣನ್ ಅವರಿಂದ ತಪ್ಪಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿದ್ದು, ಅವರ ವಿರುದ್ಧ ತನಿಖೆಗೆ ಆದೇಶಿಸಬೇಕೆಂಬ ನಿರ್ಧಾರಕ್ಕೆ ಸಮಿತಿ ಬಂದಿರುತ್ತದೆ" ಎಂದು ಸಮಿತಿ ತನ್ನ ವರದಿಯಲ್ಲಿ ತಿಳಿಸಿದೆ.

ಜಯಲಲಿತಾ ಅವರಿಗೆ ಚಿಕಿತ್ಸೆ ನೀಡುತ್ತಿದ್ದ ಡಾ. ವೈವಿಸಿ ರೆಡ್ಡಿ ಹಾಗೂ ಡಾ. ಬಾಬು ಅಬ್ರಾಹಮ್ ಅವರು ಅಪೋಲೋ ಆಸ್ಪತ್ರೆಯ ಸ್ವಂತ ವೈದ್ಯರನ್ನು ಹೊರತುಪಡಿಸಿ ಮುಂಬೈ, ಬ್ರಿಟನ್, ಅಮೇರಿಕಾಗಳಿಂದ ವೈದ್ಯರನ್ನು ಆಹ್ವಾನಿಸಿ ಆಂಜಿಯೋ/ ಶಸ್ತ್ರಚಿಕಿತ್ಸೆ ಬಗ್ಗೆ ಅವರ ಅಭಿಪ್ರಾಯ ಕೇಳುತ್ತಿದ್ದರು, ಒತ್ತಡಕ್ಕೆ ಒಳಗಾಗಿ ತಮ್ಮ ಉದ್ದೇಶವನ್ನು ಈಡೇರಿಸಿಕೊಳ್ಳಲು ಶಸ್ತ್ರಚಿಕಿತ್ಸೆಯನ್ನು ಮುಂದೂಡುವ ನೆಪದಲ್ಲಿ ಅಪಾಯದ ಕೆಲಸಕ್ಕೆ ಕೈಹಾಕಿದ್ದರು ಎಂಬ ಅರ್ಥ ಬರುವ ರೀತಿಯಲ್ಲಿ ಸಮಿತಿ ವರದಿ ವೈದ್ಯರ ಬಗ್ಗೆ ಉಲ್ಲೇಖಿಸಿದ್ದು, ಈ ಕಾರಣದಿಂದಾಗಿ ತನಿಖೆ ನಡೆಯಬೇಕೆಂದು ಆಯೋಗ ಹೇಳಿದೆ. ಆಯೋಗ ಆಗಿನ ಮುಖ್ಯ ಕಾರ್ಯದರ್ಶಿ ರಾಮಮೋಹನ್ ರಾವ್ ವಿರುದ್ಧದ ಆರೋಪವನ್ನೂ ಪರಿಗಣಿಸಿದ್ದು, ಅವರ ವಿರುದ್ಧವೂ ತನಿಖೆ ನಡೆಯಬೇಕೆಂದು ಹೇಳಿದೆ.

ಜೋಡೋ ಯಾತ್ರೆ ಆಂಧ್ರಪ್ರದೇಶಕ್ಕೆ ಪ್ರವೇಶ

ಕರ್ನೂಲ್, ಅ.18– ಕಾಂಗ್ರೆಸ್ ಪಕ್ಷದ ಭಾರತ್ ಜೋಡೋ ಯಾತ್ರೆ ಯಶಸ್ವಿಯಾಗಿ ಮುನ್ನುಗ್ಗುತ್ತಿದ್ದು, ಬಳ್ಳಾರಿ ಪ್ರವೇಶಿಸಿ 1000 ಕಿ.ಮೀ. ಪೂರೈಸಿದ ಬಳಿಕ ಯಾತ್ರೆಯು ಮಂಗಳವಾರ ಆಂಧ್ರಪ್ರದೇಶ ತಲುಪಿದೆ. ಕೇರಳ ಮತ್ತು ಕರ್ನಾಟಕದಲ್ಲಿ ಉತ್ತಮ ಸ್ಪಂದನೆ ಪಡೆದಿರುವ ಯಾತ್ರೆಯು ಇದೀಗ ಆಂಧ್ರಪ್ರದೇಶ ತಲುಪಿದ್ದು, ಆಂಧ್ರಪ್ರದೇಶದಲ್ಲಿ ಯಾವ ರೀತಿ ಸದ್ದು ಮಾಡಲಿದೆ ಎಂಬುದನ್ನು ಕಾದು ನೋಡಬೇಕಿದೆ. ಬಳ್ಳಾರಿಯ ಸಂಗನಕಲ್‌ನಿಂದ ರಾಹುಲ್ ಗಾಂಧಿ ಅವರು ಪಾದಯಾತ್ರೆ ಪ್ರಾರಂಭಿಸಿದ್ದು, ಆಂಧ್ರಪ್ರದೇಶ ತಲುಪಿದ್ದಾರೆ. ಸಂಗನಕಲ್‌ನಿಂದ 20 ಕಿ.ಮೀ. ದೂರದಲ್ಲಿರುವ ಆಂಧ್ರದ ಗಡಿವರೆಗೆ ರಾಹುಲ್ ಗಾಂಧಿ ವಾಹನದಲ್ಲಿ ಪ್ರಯಾಣಿಸಿದ್ದು ಆಂಧ್ರದ ಗಡಿ ಆರಂಭದಿಂದ ಪಾದಯಾತ್ರೆ ಆರಂಭಿಸಿದ್ದಾರೆ.



ತ್ರಿವೇಣಿ ಸಂಗಮವನ್ನು ತೀರ್ಥ ಕ್ಷೇತ್ರವನ್ನಾಗಿಸುವ ಗುರಿ: ಕೆಸಿಎನ್

ಕೆ.ಆರ್.ಪೇಟೆ, ಅ.18– ತಾಲೂಕಿನ ತ್ರಿವೇಣಿ ಸಂಗಮ ಕ್ಷೇತ್ರವನ್ನು ದೇಶದ ಪ್ರಮುಖ ತೀರ್ಥಕ್ಷೇತ್ರವನ್ನಾಗಿ ರೂಪಿಸುವ ಗುರಿಹೊಂದಿದ್ದು, ಮುಂದಿನ ದಿನಗಳಲ್ಲಿ ಅಗತ್ಯ ಸೌಲಭ್ಯವನ್ನು ಒದಗಿಸುವುದಾಗಿ ರಾಜ್ಯ ರೇಷ್ಮೆ, ಕ್ರೀಡೆ ಮತ್ತು ಸಬಲೀಕರಣ ಸಚಿವ ಕೆ.ಸಿ.ನಾರಾಯಣಗೌಡ ತಿಳಿಸಿದರು.



ಪಟ್ಟಣದ ಬಸವೇಶ್ವರನಗರದಲ್ಲಿರುವ ತಮ್ಮ ನಿವಾಸದಲ್ಲಿ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ತ್ರಿವೇಣಿ ಸಂಗಮದಲ್ಲಿ ನಡೆದ ಕುಂಭಮೇಳಕ್ಕೆ ಸಹಕರಿಸಿ ಶ್ರಮಿಸಿದವರಿಗೆ ಕೃತಜ್ಞತೆಗಳನ್ನು ಸಲ್ಲಿಸಿದರು.

ತ್ರಿವೇಣಿ ಸಂಗಮದಲ್ಲಿ ಕುಂಭಮೇಳ ಮುಗಿದಿದ್ದರೂ ಮುಂದಿನ 48 ದಿನಗಳ ಕಾಲ ಅಂದರೆ ಒಂದು ಮಂಡಲದವರೆಗೆ ಅಲ್ಲಿರುವ ಶ್ರೀ ಸಂಗಮೇಶ್ವರ ಮತ್ತು ಶ್ರೀ ಮಲೆ ಮಹದೇಶ್ವರರ ದೇವಾಲಯಗಳಲ್ಲಿ ನಿತ್ಯ ಪೂಜೆ ನಡೆಯುತ್ತವೆ. ಭಕ್ತಾಧಿಗಳು ಈಗಾಗಲೇ ನಿತ್ಯ ಪೂಜೆಗೆ ತಮ್ಮ ಹೆಸರುಗಳನ್ನು ನೊಂದಣಿ ಮಾಡಿದ್ದಾರೆ. ಕ್ಷೇತ್ರದ ಅಭಿವೃದ್ಧಿಯ ದೃಷ್ಟಿಯಿಂದ ಪ್ರತೀ ಹುಣ್ಣಿಮೆಯ ದಿನದಂದು ಮಲೆ ಮಹದೇಶ್ವರ ಬೆಟ್ಟದಲ್ಲಿರುವ ಸಾಲೂರು ಮಠದ ಶ್ರೀಗಳು ಇಲ್ಲಿಗೆ ಆಗಮಿಸಿ ವಿಶೇಷ ಪೂಜಾ ಕೈಂಕರ್ಯಗಳನ್ನು ನಡೆಸಲಿದ್ದಾರೆ ಎಂದರು.

ಪ್ರತಿ ವರ್ಷ ಕಾರ್ತೀಕ ಮಾಸದಲ್ಲಿ ಲಕ್ಷ ದೀಪೋತ್ಸವ ನಡೆಸಲು ಆಲೋಚಿಸಲಾಗುತ್ತಿದೆ ಎಂದು ತಿಳಿಸಿದ ಸಚಿವ ಕೆ.ಸಿ.ನಾರಾಯಣಗೌಡ, ಕ್ಷೇತ್ರದ ಅಭಿವೃದ್ಧಿಯ ದೃಷ್ಟಿಯಿಂದ ತ್ರಿವೇಣಿ ಸಂಗಮ ಕ್ಷೇತ್ರವನ್ನು ಮಲೆಮಹದೇಶ್ವರ ಅಭಿವೃದ್ಧಿ ಪ್ರಾಧಿಕಾರಕ್ಕೆ ವಹಿಸಲಾಗುವುದೆಂದರು. ಕ್ಷೇತ್ರಕ್ಕೆ ಬಂದು ಹೋಗುವವರಿಗೆ ರಸ್ತೆ ಸಮಸ್ಯೆಯಿದೆ. ಕಿರಿದಾದ ರಸ್ತೆಯ ಅಗಲೀಕರಣಕ್ಕೆ ಕ್ರಮವಹಿಸಲಾಗುವುದು. ರಸ್ತೆ ಪಕ್ಕದಲ್ಲಿ ಕಿರುನಾಲೆಯಿದ್ದು, ನಾಲೆಯ ಪೂರ್ವಭಾಗದ ಏರಿಯನ್ನು ಅಭಿವೃದ್ಧಿಪಡಿಸಿ ಜನ ಸಂಚಾರಕ್ಕೆ ಬಳಸಲಾಗುವುದು ಎಂದರು.

ಜಗತ್ತಿನ 62 ರಾಷ್ಟ್ರಗಳಲ್ಲಿ ಜನ ನಮ್ಮ ಕುಂಭಮೇಳವನ್ನು ವೀಕ್ಷಿಸಿದ್ದಾರೆ. ವಿದೇಶಗಳಿಂದ ಕರೆ ಮಾಡಿ ಭಕ್ತರು ಮಾಹಿತಿ ಕೋರುತ್ತಿದ್ದಾರೆ. ಇದಕ್ಕೆ ನಮ್ಮ ಮಾಧ್ಯಮ ಪ್ರತಿನಿಧಿಗಳು ಕಾರಣರಾಗಿದ್ದಾರೆ. ಕುಂಭಮೇಳದ ಅನ್ನ ದಾಸೋಹಕ್ಕೆ ಒಂದು ಸಾವಿರ ಕ್ವಿಂಟಾಲ್ ಅಕ್ಕಿ ಸಂಗ್ರಹವಾಗಿದೆ. ಮೂಡಬಿದರೆಯ ಮೋಹನ್ ಆಳ್ವಾ ಅವರು ತಮ್ಮ ಕಲಾ ತಂಡದೊಂದಿಗೆ ಆಗಮಿಸಿ ಕಲಾ ಪ್ರದರ್ಶನ ನೀಡಿದ್ದಾರೆ. ಆದಿ ಚುಂಚನಗಿರಿ ಮಠದ ನಿರ್ಮಲಾನಂದ ನಾಥ ಸ್ವಾಮೀಜಿಗಳು ಮತ್ತು ಸುತ್ತೂರು ಮಠದ ಶಿವರಾತ್ರಿ ದೇಶೀಕೇಂದ್ರ ಸ್ವಾಮೀಜಿಗಳು ಸೇರಿದಂತೆ ನಾಡಿನ ಬಹುತೇಕ ಸ್ವಾಮೀಜಿಗಳು ಕುಂಭಮೇಳದ ಯಶಸ್ವಿಗೆ ಸಹಕರಿಸಿ ಆಶೀರ್ವದಿಸಿದ್ದಾರೆ. ಮುಖ್ಯಮಂತ್ರಿ ಬಸರಾಜ ಬೊಮ್ಮಾಯಿ ಸೇರಿದಂತೆ ಸಚಿವ ಸಂಪುಟದ ಅನೇಕ ಸಹದ್ಯೋಗಿಗಳು ಕುಂಭಮೇಳದ ಧಾರ್ಮಿಕ ಕಾರ್ಯಗಳ ಯಶಸ್ಸಿಗೆ ಸಹಕರಿಸಿದ್ದಾರೆ. ಇವರೆಲ್ಲರಿಗೂ ನಮ್ಮ ತಾಲೂಕಿನ ಜನತೆಯ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸುತ್ತೇನೆಂದು ಸಚಿವ ಕೆ.ಸಿ.ನಾರಾಯಣಗೌಡ ತಿಳಿಸಿದರು.

ಇಂದು ಎಐಸಿಸಿ ಅಧ್ಯಕ್ಷರ ಚುನಾವಣಾ ಫಲಿತಾಂಶ

ಬೆಂಗಳೂರು, ಅ.18– ಎಐಸಿಸಿ ಅಧ್ಯಕ್ಷ ಸ್ಥಾನದ ಚುನಾವಣೆ ಫಲಿತಾಂಶ ನಾಳೆ(ಅ.19) ಪ್ರಕಟವಾಗಲಿದೆ.

ಅಧ್ಯಕ್ಷ ಸ್ಥಾನಕ್ಕೆ ಕರ್ನಾಟಕದ ಮಲ್ಲಿಕಾರ್ಜುನ ಖರ್ಗೆ ಮತ್ತು ಕೇರಳದ ಶಶಿ ತರೂರ್ ಸ್ಪರ್ಧಿಸಿದ್ದು, ದೇಶದಾದ್ಯಂತ ಒಟ್ಟು 65 ಕೇಂದ್ರಗಳಲ್ಲಿ ಸೋಮವಾರ ನಡೆದ ಚುನಾವಣೆಯಲ್ಲಿ ಶೇ.96ರಷ್ಟು ಮತದಾನವಾಗಿತ್ತು. ಒಟ್ಟು 9,915 ಮತದಾರರ ಪೈಕಿ 9,497 ಮಂದಿ ಮತ ಚಲಾಯಿಸಿದ್ದಾರೆ. ಎಐಸಿಸಿ ಕೇಂದ್ರ ಕಚೇರಿಯಲ್ಲಿ ಬುಧವಾರ ಮತ ಎಣಿಕೆ ನಡೆಯಲಿದೆ. 137 ವರ್ಷಗಳ ಇತಿಹಾಸ ಹೊಂದಿರುವ ಕಾಂಗ್ರೆಸ್ ಪಕ್ಷದಲ್ಲಿ 23 ವರ್ಷಗಳ ಬಳಿಕ ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆದಿದ್ದು ವಿಶೇಷ.

ರಷ್ಯಾದ ಜೆಟ್ ಪತನ; 13 ಮಂದಿ ಸಾವು

ಮಾಸ್ಕೊ, ಅ.18– ರಷ್ಯಾದ ಸೇನಾ ವಿಮಾನವೊಂದು ಉಕ್ರೇನ್ ಗಡಿಯ ಸಮೀಪವಿರುವ ನೈರುತ್ಯ ರಷ್ಯಾದ ಪಟ್ಟಣವಾದ ಯೆಸ್ಕ್‌ನ ವಸತಿ ಪ್ರದೇಶದಲ್ಲಿ ಪತನಗೊಂಡಿದ್ದು, ಪರಿಣಾಮವಾಗಿ ಮೂವರು ಮಕ್ಕಳು ಸೇರಿದಂತೆ ಕನಿಷ್ಠ 13 ಜನರು ಮೃತಪಟ್ಟಿದ್ದಾರೆ ಎಂದು ಮಾಸ್ಕೊದ ಅಧಿಕಾರಿಗಳು ಮಂಗಳವಾರ ತಿಳಿಸಿದ್ದಾರೆ.

ರಕ್ಷಣಾ ಪಡೆಯು ಪತನಗೊಂಡ ವಿಮಾನದ ಅವಶೇಷಗಳಡಿ ಹುಡುಕಾಟ ಪೂರ್ಣ ಗೊಳಿಸಿದ್ದು, 'ಇನ್ನೂ 10 ಮೃತದೇಹಗಳನ್ನು' ಪತ್ತೆ ಮಾಡಲಾಗಿದೆ. ಈ ಮೊದಲು ಮೂವರು ಸಾವಿಗೀಡಾಗಿರುವ ಕುರಿತು ಮಾಹಿತಿ ಲಭ್ಯವಾಗಿತ್ತು ಎಂದು ತುರ್ತು ಪರಿಸ್ಥಿತಿಗಳ ಸಚಿವಾಲಯ ಹೇಳಿಕೆಯಲ್ಲಿ ತಿಳಿಸಿದೆ. 'ಘಟನೆಯಲ್ಲಿ ಒಟ್ಟು ಮೂವರು ಮಕ್ಕಳು ಸೇರಿದಂತೆ 13 ಜನರು ಮೃತಪಟ್ಟಿದ್ದಾರೆ ಮತ್ತು 19 ಜನರು ಗಾಯಗೊಂಡಿದ್ದಾರೆ' ಎಂದು ಸಚಿವಾಲಯ ತಿಳಿಸಿರುವುದಾಗಿ ರಷ್ಯಾದ ಸುದ್ದಿ ಸಂಸ್ಥೆಗಳು ವರದಿ ಮಾಡಿವೆ. ಸುಖೋಯ್ ಸು–34 ಸೋಮವಾರ ಸಂಜೆ ಅಪಘಾತಕ್ಕೀಡಾಗಿದ್ದು, ಸುಮಾರು 600 ಜನರು ವಾಸಿಸುತ್ತಿದ್ದ ಒಂಬತ್ತು ಅಂತಸ್ತಿನ ಕಟ್ಟಡಕ್ಕೆ ಬೆಂಕಿ ಆವರಿಸಲು ಕಾರಣವಾಯಿತು. ವಿಮಾನದಲ್ಲಿದ್ದ ಇಂಧನಕ್ಕೆ ಬೆಂಕಿ ಹೊತ್ತಿಕೊಂಡಿದೆ ಎಂದು ರಕ್ಷಣಾ ಸಚಿವಾಲಯ ತಿಳಿಸಿದೆ.

ಮೈಸೂರು ಮಿತ್ರ ಬುಧವಾರ 19 ಅಕ್ಟೋಬರ್ 2022

ಕಡವೆ ಬೇಟೆಯಾಡಿ ಮಾಂಸ ಸಿದ್ಧಪಡಿಸುತ್ತಿದ್ದ ಇಬ್ಬರ ಸೆರೆ

100 ಕೆಜಿ ಮಾಂಸ, ಕತ್ತಿ, ಟಾರ್ಪಲ್ ವಶ



ಮಡಿಕೇರಿ, ಅ.18– ದಬ್ಬಡ್ಕ ಅರಣ್ಯದಲ್ಲಿ ಕಡವೆ ಬೇಟೆಯಾಡಿ ಮಾಂಸ ಸಿದ್ಧಪಡಿಸುತ್ತಿದ್ದ ಇಬ್ಬರು ಆರೋಪಿಗಳನ್ನು, ಸಂಪಾಜೆ ವಲಯ ಅರಣ್ಯ ಇಲಾಖೆ ಅಧಿಕಾರಿಗಳು ಹಾಗೂ ಸಿಬ್ಬಂದಿಗಳು ಮಾಲು ಸಮೇತ ಬಂಧಿಸಿದ್ದಾರೆ. ದಬ್ಬಡ್ಕ ಗ್ರಾಮ ನಿವಾಸಿಗಳಾದ ಕೃಷ್ಣಪ್ಪ(47) ಹಾಗೂ ಪುರುಷೋತ್ತಮ ಕೆ.ಎಸ್(48) ಬಂಧಿತ ಆರೋಪಿಗಳು.

ಬಂಧಿತರಿಂದ 100 ಕೆ.ಜಿ ಕಡವೆ ಮಾಂಸ, ಕತ್ತಿ, ಟಾರ್ಪಲ್ ಸೇರಿದಂತೆ ಮತ್ತಿತರ ವಸ್ತುಗಳನ್ನು ವಶಕ್ಕೆ ಪಡೆಯಲಾಗಿದೆ. ಬಂಧಿತ ಇಬ್ಬರು ಆರೋಪಿಗಳ ವಿರುದ್ಧ ವನ್ಯಜೀವಿ ಸಂರಕ್ಷಣಾ ಕಾಯಿದೆ ಅಡಿ ಪ್ರಕರಣ ದಾಖಲಿಸಲಾಗಿದ್ದು, ನ್ಯಾಯಾಂಗ ವಶಕ್ಕೆ ಒಪ್ಪಿಸಲಾಗಿದೆ.

ಮಡಿಕೇರಿ ವಿಭಾಗದ ಉಪ ಅರಣ್ಯ ಸಂರಕ್ಷಣಾಧಿಕಾರಿ ಎ.ಟಿ. ಪೂವಯ್ಯ ಹಾಗೂ ಸಂಪಾಜೆ ವಲಯ ಅರಣ್ಯಾಧಿಕಾರಿ ಮಧುಸೂದನ್ ಎಂ.ಕೆ. ಮಾರ್ಗದರ್ಶನದಲ್ಲಿ ಅರಣ್ಯ ರಕ್ಷಕರಾದ ಕಾರ್ತಿಕ್, ವೀಕ್ಷಕರಾದ ಕೂಸಪ್ಪ, ಮನೋಜ್ ಕುಮಾರ್, ಕಾರ್ಯಾಚರಣೆ ನಡೆಸಿದ್ದಾರೆ.

ದೇವಟ್ ಪರಂಬುವಿನಲ್ಲಿ ಹಿರಿಯರ ಸ್ಮರಣೆ

ಕೊಡವ ಲ್ಯಾಂಡ್ ಭೂ-ರಾಜಕೀಯ ಸ್ವಾಯತ್ತತೆ ಸೇರಿ ವಿವಿಧ ಬೇಡಿಕೆಗಳ ಈಡೇರಿಕೆಗೆ ಸಿಎನ್‌ಸಿ ಆಗ್ರಹ



ಮಡಿಕೇರಿ, ಅ.18– ತಲಕಾವೇರಿಯಲ್ಲಿ ಪವಿತ್ರ ಕಾವೇರಿ ತೀರ್ಥೋದ್ಭವವಾದ ಮರುದಿನ ಕೊಡವ ನ್ಯಾಷನಲ್ ಕೌನ್ಸಿಲ್ ಸಂಘಟನೆ ವತಿಯಿಂದ ದೇವಟ್ ಪರಂಬುವಿನಲ್ಲಿ ಹಿರಿಯರ ಸ್ಮರಣೆ ಕಾರ್ಯಕ್ರಮ ನಡೆಯಿತು.

ಸಿಎನ್‌ಸಿ ಅಧ್ಯಕ್ಷ ಎನ್.ಯು.ನಾಚಪ್ಪ ಅವರ ನೇತೃತ್ವದಲ್ಲಿ ದೇವಟ್ ಪರಂಬುವಿಗೆ ತೆರಳಿದ ಪ್ರಮುಖರು ಹಿರಿಯರಿಗೆ ಪುಷ್ಪನಮನ ಸಲ್ಲಿಸಿದರು. ಕಾವೇರಿ ತುಲಾ ಸಂಕ್ರಮಣದ ಸಂಪ್ರದಾಯದಂತೆ ಕಾವೇರಿ ತೀರ್ಥ, ದೋಸೆ ಮತ್ತು ಪುಟ್ಟ್ ಎಂಬ ಭಕ್ಷ್ಯವನ್ನು ಹಾಗೂ ಗಿಡಮೂಲಿಕೆಯಾದ ಬೊತ್ ಬಳ್ಳಿಯನ್ನು ಇಡಲಾಯಿತು.

ನಂತರ ಪವಿತ್ರ ಕಾವೇರಿ ತೀರ್ಥೋದ್ಭವ ಮತ್ತು ಜನಪದೀಯ ಬುಡಕಟ್ಟು ಸಂಪ್ರದಾಯಗಳ ಕುರಿತು ನಾಚಪ್ಪ ವಿವರಿಸಿದರು. ಇದೇ ಸಂದರ್ಭ ಕೊಡವ ಲ್ಯಾಂಡ್ ಭೂ–ರಾಜಕೀಯ ಸ್ವಾಯತ್ತತೆ ಸೇರಿದಂತೆ ವಿವಿಧ ಬೇಡಿಕೆಗಳ ಹಕ್ಕೊತ್ತಾಯವನ್ನು ಅವರು ಮಂಡಿಸಿದರು.

ಕೊಡವ ಲ್ಯಾಂಡ್ ಭೂ–ರಾಜಕೀಯ ಸ್ವಾಯತ್ತತೆ ನೀಡಬೇಕು, ಕೊಡವ ಜನಾಂಗೀಯ ಬುಡಕಟ್ಟು ಜನಾಂಗಕ್ಕೆ ಎಸ್‌ಟಿ ಟ್ಯಾಗ್ ನೀಡಬೇಕು. ನಮ್ಮ ಭೂಮಿ, ಭಾಷೆ, ಸಾಂಸ್ಕೃತಿಕ ಪರಂಪರೆಯ ಆರ್ಥಿಕ ಮತ್ತು ರಾಜಕೀಯ ಸ್ವಾತಂತ್ರ್ಯಕ್ಕಾಗಿ ಸಾಂವಿಧಾನಿಕ ಭದ್ರತೆ ನೀಡಬೇಕು, ದೇವಟ್ ಪರಂಬುವಿನಲ್ಲಿ ನರಮೇಧದ ಸ್ಮರಣಾರ್ಥ ಅಂತರ ರಾಷ್ಟ್ರೀಯ ಸ್ಮಾರಕ ನಿರ್ಮಾಣ ಮಾಡಬೇಕು ಹಾಗೂ ಕೊಡವ ನರಮೇಧವನ್ನು ಯುಎನ್‌ಓ ಅಂತರರಾಷ್ಟ್ರೀಯ ಹತ್ಯಾಕಾಂಡದ ನೆನಪಿನ ಪಟ್ಟಿಯಲ್ಲಿ ಸೇರಿಸಬೇಕು ಎಂದು ನಾಚಪ್ಪ ಒತ್ತಾಯಿಸಿದರು.

ಸಿಎನ್‌ಸಿ ಸಂಘಟನೆಯ ಅಪ್ಪಚ್ಚಿರ ರಮ್ಮಿ ನಾಣಯ್ಯ, ಅಳಮಂಡ ಜೈ, ಅರೆಯಡ ಗಿರೀಶ್, ದಿನು ಬೇಪಡಿಯಂಡ, ಪಟ್ಟಮಾಡ ಕುಶ, ಮಂದಪಂಡ ಮನೋಜ್, ಕಾಟುಮಣಿಯಂಡ ಉಮೇಶ್, ಬೊಳ್ಳಾರಪಂಡ ಬೋಪಣ್ಣ, ಮಂದಪಂಡ ಸೂರಜ್, ಚೀಯಬೇರ ಸತೀಶ್, ಪಟ್ಟಮಾಡ ಕರಿಯಪ್ಪ ಪುಟ್ಟಿಚಂಡ ದೇವಯ್ಯ, ಮಣವಟ್ಟಿರ ಚಿಣ್ಣಪ್ಪ ಬೊಳ್ಳಾರಪಂಡ ಮಾಚಯ್ಯ ಮತ್ತಿತರರು ಉಪಸ್ಥಿತರಿದ್ದು ಪ್ರಾರ್ಥನೆ ಸಲ್ಲಿಸಿದರು.

ಸಿದ್ದಾಪುರದಲ್ಲಿ ಅ.29, 30 ರಂದು ಕೇರಂ ಪಂದ್ಯಾವಳಿ

ಸಿದ್ದಾಪುರ, ಅ.18– ಸಂಕಷ್ಟದ ಬದುಕಿನೊಂದಿಗೆ ಅನಾರೋಗ್ಯಕ್ಕೊಳಗಾಗಿ ಹಾಸಿಗೆ ಹಿಡಿದಿರುವ 3 ವರ್ಷ ಪ್ರಾಯದ ಬಾಲಕಿಯ ಚಿಕಿತ್ಸೆಯ ನೆರವಿಗಾಗಿ ಕೂರ್ಗ್ ಸ್ಟಾರ್ ವತಿಯಿಂದ ಅ.29, 30ರಂದು ಸಿದ್ದಾಪುರ ಎಸ್‌ಎನ್‌ಡಿಪಿ ಸಭಾಂಗಣದಲ್ಲಿ ಜಿಲ್ಲಾಮಟ್ಟದ ಮುಕ್ತ ಕೇರಂ ಪಂದ್ಯಾವಳಿ ಆಯೋಜಿಸಲಾಗಿದೆ ಎಂದು ಕೂರ್ಗ್ ಸ್ಟಾರ್ಸ್ ಯೂಟ್ಯೂಬ್ ಚಾನೆಲ್ ಪ್ರಮುಖ ಅಜಿತ್ ತಿಳಿಸಿದ್ದಾರೆ.

ಜಿಲ್ಲಾ ಮಟ್ಟದ ಮುಕ್ತ ಕೇರಂ ಪಂದ್ಯಾವಳಿಯಾಗಿದ್ದು, ಸಿಂಗಲ್ಸ್ ಪ್ರಥಮ ಬಹುಮಾನ 4999 ಮತ್ತು ಟ್ರೋಫಿ, ದ್ವಿತೀಯ ಬಹುಮಾನ 2499 ಮತ್ತು ಟ್ರೋಫಿ, ಡಬಲ್ಸ್ ಪ್ರಥಮ ಬಹುಮಾನ 9999 ಮತ್ತು ಟ್ರೋಫಿ, ದ್ವಿತೀಯ ಬಹುಮಾನ 4999 ಮತ್ತು ಟ್ರೋಫಿ ನೀಡಲಾಗುವುದು. ಆಸಕ್ತ ತಂಡಗಳು ಅ.23ರೊಳಗೆ ಹೆಸರುಗಳನ್ನು 7204577605ಗೆ ನೋಂದಾಯಿಸಿಕೊಳ್ಳಬಹುದಾಗಿದೆ.

ಮಡಿಕೇರಿ: ಕಾವೇರಿ ತೀರ್ಥ ವಿತರಣಾ ರಥಯಾತ್ರೆ

ಮಡಿಕೇರಿ, ಅ.18– ನಗರದ ಜನರಲ್ ತಿಮ್ಮಯ್ಯ ಜಿಲ್ಲಾ ಕ್ರೀಡಾಂಗಣದ ಬಳಿಯ ಶ್ರೀ ಕಾವೇರಿ ಭಕ್ತ ಮಂಡಳಿಯಿಂದ 68ನೇ ವರ್ಷದ ಕಾವೇರಿ ತೀರ್ಥ ವಿತರಣಾ ರಥಯಾತ್ರೆ ಮಂಗಳವಾರ ನಗರದಲ್ಲಿ ಶ್ರದ್ಧಾ ಭಕ್ತಿಗಳಿಂದ ನೆರವೇರಿತು.

ಶ್ರೀ ಕಾವೇರಿ ಭಕ್ತಮಂಡಳಿ ವರ್ಷಂಪ್ರತಿ ತಲಕಾವೇರಿಯ ತುಲಾ ಸಂಕ್ರಮಣದ ತೀರ್ಥೋದ್ಭವದ ಬಳಿಕ, ಜಿಲ್ಲಾ ಕೇಂದ್ರ ಮಡಿಕೇರಿಯಲ್ಲಿ ತೀರ್ಥ ವಿತರಣಾ ರಥಯಾತ್ರೆಯನ್ನು ನಡೆಸಿಕೊಂಡು ಬರುತ್ತಿದೆ. ಈ ಬಾರಿ ಕಾವೇರಿಯ ಅತ್ಯಾಕರ್ಷಕ ಮಂಟಪದಲ್ಲಿ ಕಾವೇರಿ ತೀರ್ಥ ಪ್ರಸಾದವನ್ನು ನಗರದ ವಿವಿಧ ಬಡಾವಣೆಗಳಿಗೆ ಮೆರವಣಿಗೆಯ ಮೂಲಕ ಕೊಂಡೊಯ್ದು ಭಕ್ತರಿಗೆ ವಿತರಿಸಲಾಯಿತು.

ತಲಕಾವೇರಿಯಲ್ಲಿ ಅ.17ರಂದು ರಾತ್ರಿ ತೀರ್ಥೋದ್ಭವವಾದ ಬಳಿಕ ಶ್ರೀ ಕಾವೇರಿ ಭಕ್ತ ಮಂಡಳಿಯ ಪದಾಧಿಕಾರಿಗಳು ಕಾವೇರಿ ತೀರ್ಥವನ್ನು ಸಂಗ್ರಹಿಸಿ ಮಡಿಕೇರಿಗೆ ತೆಗೆದುಕೊಂಡು ಬರಲಾಯಿತು. ಇಂದು ಬೆಳಗ್ಗೆ ಗಣಪತಿ ಹೋಮ, ಕಳಸ ಕಟ್ಟುವುದು, ಕಾವೇರಿಗೆ ವಿಶೇಷ ಪೂಜೆ ಸಲ್ಲಿಸಿ, ಮಧ್ಯಾಹ್ನ ಅನ್ನದಾನ ನೆರವೇರಿಸಿದ ಬಳಿಕ ಕಾವೇರಿ ತೀರ್ಥ ವಿತರಣೆಯ ಮಂಟಪದ ಮೆರವಣಿಗೆ ಶ್ರದ್ಧಾಭಕ್ತಿಗಳಿಂದ ಮಂಗಳವಾದ್ಯಗಳೊಂದಿಗೆ



ಆರಂಭಗೊಂಡಿತು. ಹಿರಿಯ ಕಲಾವಿದ ದಿವಂಗತ ಅಣ್ಣು ಅವರು ಆರಂಭಿಸಿದ ತೀರ್ಥ ವಿತರಣಾ ಕಾರ್ಯವನ್ನು ಪ್ರಸ್ತುತ ಅವರ ಮಕ್ಕಳಾದ ರವಿ, ಜಾಜಿ ಅವರನ್ನು ಒಳಗೊಂಡಂತೆ ಶ್ರೀ ಕಾವೇರಿ ಭಕ್ತ ಮಂಡಳಿ ನಿರಂತರವಾಗಿ ನಡೆಸಿಕೊಂಡು ಬರುತ್ತಿದೆ. ವಿಶೇಷವೆಂದರೆ ಕಳೆದ 68 ವರ್ಷಗಳಿಂದ ಮಂಟಪದಲ್ಲಿ ಮೆರವಣಿಗೆ ನಡೆಸುವ ಕಾವೇರಿಯ ಆಕರ್ಷಕ ಮೂರ್ತಿಯನ್ನು ಅಣ್ಣು ಅವರು, ಅವರ ಬಳಿಕ ಅವರ ಮಕ್ಕಳು ನಿರ್ಮಿಸಿಕೊಂಡು ಬರುತ್ತಿದ್ದಾರೆ.

ವಿ.ಪೇಟೆಯಲ್ಲೂ ತೀರ್ಥ ವಿತರಣೆ



ವಿರಾಜಪೇಟೆ, ಅ.18– ಕಳೆದ 26 ವರ್ಷಗಳಿಂದ ಕಾವೇರಿ ತೀರ್ಥವನ್ನು ವಿತರಿಸುತ್ತಿರುವ ಪಟ್ಟಣದ ಫ್ರೆಂಡ್ಸ್ ಅಸೋಸಿಯೇಶನ್ ಹಾಗೂ ಹಿಂದೂ ಅಗ್ನಿದಳ ಸಂಘಟನೆ ವತಿಯಿಂದ ವಾಹನಗಳ ಮೂಲಕ ಪಟ್ಟಣದ ಪ್ರಮುಖ ಬೀದಿ ಹಾಗೂ ಬಡಾವಣೆಗಳಲ್ಲಿ ಕಾವೇರಿ ತೀರ್ಥವನ್ನು ವಿತರಿಸಲಾಯಿತು.

ಗಡಿಯಾರ ಕಂಭದ ಬಳಿಯಿರುವ ಶ್ರೀ ಮಹಾಗಣಪತಿ ದೇವಸ್ಥಾನ, ಅಪ್ಪಯ್ಯ ಸ್ವಾಮಿ ರಸ್ತೆಯಲ್ಲಿರುವ ಶ್ರೀ ಬಾಲಾಂಜನೇಯ ಗಣಪತಿ ಸೇವಾ ಸಮಿತಿ ವತಿಯಿಂದ ಬಾಲಾಂಜನೇಯ ದೇವಸ್ಥಾನದಲ್ಲಿ ಮುಂಜಾನೆಯಿಂದಲೇ ಪವಿತ್ರ ಕಾವೇರಿ ತೀರ್ಥವನ್ನು ವಿತರಿಸಲಾಯಿತು. ಸಾರ್ವಜನಿಕರು ಸಂಘ–ಸಂಸ್ಥೆಗಳ ಮೂಲಕ ವಾಹನ ಹಾಗೂ ದೇವಾಲಯಕ್ಕೆ ಆಗಮಿಸಿ ಶ್ರದ್ಧಾಭಕ್ತಿಯಿಂದ ತೀರ್ಥವನ್ನು ಸ್ವೀಕರಿಸುತ್ತಿರುವುದು ಕಂಡು ಬಂತು.

ವಿದ್ಯಾರ್ಥಿನಿ ಮೇಲೆ ಬೀದಿನಾಯಿ ದಾಳಿ

ಮಡಿಕೇರಿ, ಅ.18– ವಿದ್ಯಾರ್ಥಿನಿಯ ಮೇಲೆ ಬೀದಿನಾಯಿ ದಾಳಿ ಮಾಡಿ ಗಾಯಗೊಳಿಸಿದ ಘಟನೆ ನಾಪೋಕ್ಲು ಪಟ್ಟಣದಲ್ಲಿ ನಡೆದಿದೆ.

ಪಟ್ಟಣದಲ್ಲಿರುವ ಹಿದಾಯತುಲ್ ಇಸ್ಲಾಂ ಅರಬಿಕ್ ಮದರಸಾದಲ್ಲಿ ವ್ಯಾಸಂಗ ಮಾಡುತ್ತಿರುವ 10 ವರ್ಷದ ಬಾಲಕಿ ಎಂದಿನಂತೆ ಮದರಸದಿಂದ ಹಿಂತಿರುಗಿ ಪಟ್ಟಣದಲ್ಲಿ ನಡೆದುಕೊಂಡು ಬರುವ ಸಂದರ್ಭ ಏಕಾಏಕಿ ಬಾಲಕಿ ಮೇಲೆ ದಾಳಿ ನಡೆಸಿದ ಬೀದಿನಾಯಿ, ಕಚ್ಚಿ ಗಾಯಗೊಳಿಸಿದೆ. ಕೂಡಲೇ ಗಾಯಗೊಂಡ ಬಾಲಕಿಯನ್ನು ಸಾರ್ವಜನಿಕರು ಸ್ಥಳೀಯ ಸಮುದಾಯ ಆರೋಗ್ಯ ಕೇಂದ್ರಕ್ಕೆ ದಾಖಲಿಸಿ ಚಿಕಿತ್ಸೆ ಕೊಡಿಸಿದ್ದಾರೆ.

ಕಳೆದ ಒಂದು ತಿಂಗಳ ಹಿಂದೆ ಬೀದಿ ನಾಯಿಗಳಿಗೆ ಹುಚ್ಚು ಹಿಡಿದು ಸಮೀಪದ ಬೇತು ಗ್ರಾಮದಲ್ಲಿ ಎರಡು ಹಸುಗಳ ಮೇಲೆ ದಾಳಿಮಾಡಿ ಕೊಂದು ಹಾಕಿದ ಘಟನೆ ಮಾಸುವ ಮುನ್ನವೇ ಪಟ್ಟಣದಲ್ಲಿ ಸಾರ್ವಜನಿಕರ ಎದುರಲ್ಲೇ ವಿದ್ಯಾರ್ಥಿನಿ ಮೇಲೆ ನಾಯಿ ದಾಳಿ ಮಾಡಿದ ಘಟನೆಯಿಂದ ಜನರು ಭಯಭೀತರಾಗಿದ್ದಾರೆ.

ಸ್ಥಳೀಯ ಗ್ರಾಪಂ ನಿರ್ಲಕ್ಷ್ಯದಿಂದ ಇಂತಹ ಘಟನೆ ನಡೆಯಲು ಕಾರಣವಾಗಿದೆ ಎಂದು ಮಾಹಿತಿ ಹಕ್ಕು ಕಾರ್ಯಕರ್ತರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಸಂಕಷ್ಟದಲ್ಲಿ ಸಣ್ಣ ಕಾಫಿ ಬೆಳೆಗಾರರು

ಸಾಲ, ಬಡ್ಡಿ ಮನ್ನಾ ಮಾಡುವಂತೆ ನಂದ ಸುಬ್ಬಯ್ಯ ಆಗ್ರಹ



ವಿರಾಜಪೇಟೆ, ಅ.18– ಕೊಡಗಿನಲ್ಲಿ ಕಾಫಿ ಬೆಳೆಗಾರರು ಎದುರಿಸುತ್ತಿರುವ ಬೆಲೆಯ ಅಸ್ಥಿರತೆ, ವನ್ಯಮೃಗಗಳ ಹಾವಳಿ ಹಾಗೂ ಕಾರ್ಮಿಕರ ಸಮಸ್ಯೆಗಳಿಂದ ಸರಕಾರ ಸಣ್ಣ ಬೆಳೆಗಾರರ ಸಾಲ ಮತ್ತು ಬಡ್ಡಿಯನ್ನು ಮನ್ನಾ ಮಾಡಿ ಬೆಳೆ ವಿಮಾ ಯೋಜನೆಯನ್ನು ಸಮರ್ಪಕವಾಗಿ ಜಾರಿಗೆ ತರುವಂತಾಗಬೇಕು ಎಂದು ಕೊಡಗು ಸಣ್ಣ ಬೆಳೆಗಾರರ ಸಂಘದ ಕಾರ್ಯದರ್ಶಿ ಮತ್ತು ರೈತ ಚಳವಳಿ ಮುಖಂಡರೂ ಆದ ಸಿ.ಎ.ನಂದ ಸುಬ್ಬಯ್ಯ ಆಗ್ರಹಿಸಿದ್ದಾರೆ.

ವಿರಾಜಪೇಟೆ ನಗರದಲ್ಲಿರುವ ಕೊಡಗು ಉಪಾಧ್ಯಾಯರ ಸಹಕಾರ ಸಂಘದ ಸಭಾಂಗಣದಲ್ಲಿ ನಡೆದ ಕಾಫಿ ಫಾರ್ಮರ್ಸ್ ಫೆಡರೇಶನ್ ಕೊಡಗು ಘಟಕದ ಸಮಾವೇಶದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿ ಮಾತನಾಡಿ ಸರಕಾರಿ ಕಚೇರಿಗಳಲ್ಲಿ ಮಧ್ಯವರ್ತಿಗಳ ಲಂಚದ ಹಾವಳಿಯನ್ನು ಮಟ್ಟ ಹಾಕಬೇಕು, ರೈತರ ಭೂಮಿಯಲ್ಲಿ ಬೆಳೆದ ಮರದ ಹಕ್ಕನ್ನು ಕೊಡಬೇಕು, ರೈತರಿಗೆ 10 ಹೆಚ್.ಪಿ.ಮೋಟರ್‌ಗೆ ಉಚಿತ ವಿದ್ಯುತ್ ಸಂಪರ್ಕ ನೀಡುವಂತಾಗಬೇಕು ಎಂದು ಒತ್ತಾಯಿಸಿದರು.

ಪರಿಶಿಷ್ಟ ಪಂಗಡದ ಹಾಡಿಗಳಲ್ಲಿರುವ ಕೃಷಿ ಭೂಮಿಗೆ ದಾಖಲಾತಿಗಳನ್ನು ಅಧಿಕಾರಿಗಳು ಒದಗಿಸಿಕೊಡುವಂತಾಗಬೇಕು, ರಾಜ್ಯ ಸರಕಾರ ಕಾಡಾನೆ ಮತ್ತು ಹುಲಿಗಳನ್ನು ಹಿಡಿಯಲು ಕೂಡಲೇ ಕಾರ್ಯಪ್ರವೃತ್ತರಾಗಬೇಕು. ಕಾಫಿ ಬೋರ್ಡ್ ಪ್ರಜಾಸತ್ತಾತ್ಮಕವಾಗಿ ಸಣ್ಣ ಬೆಳೆಗಾರರ ಪ್ರಾತಿನಿಧ್ಯವನ್ನು ಹೆಚ್ಚಿಸುವ ಮೂಲಕ ಭಾರತವನ್ನು ಅಕ್ರಮವಾಗಿ ಪ್ರವೇಶಿಸುತ್ತಿರುವ ಕರಿಮೆಣಸನ್ನು ತಡೆಯಬೇಕೆಂದು ನಂದ ಸುಬ್ಬಯ್ಯ ಒತ್ತಾಯಿಸಿದ್ದಾರೆ.

ಸಮಾವೇಶದ ಮುಖ್ಯ ಅತಿಥಿಯಾಗಿ ಅಖಿಲ ಭಾರತ ಕಿಸಾನ್ ಸಭಾದ ಖಜಾಂಚಿ ಕೇರಳದ ಕೃಷ್ಣ ಪ್ರಸಾದ್ ಅವರು ಮಾತನಾಡಿ, ಕಾಫಿ ಬೆಳೆ ದೇಶದಲ್ಲಿ ಪ್ರಮುಖ ಬೆಳೆಗಳಲ್ಲಿ ಒಂದಾಗಿದ್ದು ಲಕ್ಷಾಂತರ ಬೆಳೆಗಾರರು ಮತ್ತು ಕಾರ್ಮಿಕರ ಬದುಕಿಗೆ ಆಶ್ರಯವಾಗಿದೆ. ಅಲ್ಲದೆ ಕೇಂದ್ರ ಮತ್ತು ರಾಜ್ಯ ಸರಕಾರಗಳ ಬೊಕ್ಕಸಕ್ಕೆ ಗಣನೀಯ ಮೊತ್ತವನ್ನು ತಂದುಕೊಡುತ್ತಿದೆ. ಇದರಲ್ಲಿ ಬೆನ್ನೆಲುಭಾಗಿರುವ ಬಹುತೇಕ ಮಂದಿ ಸಣ್ಣ ಬೆಳೆಗಾರರು ಪ್ರಕೃತಿ ವೈಪರೀತ್ಯ, ವನ್ಯ ಪ್ರಾಣಿಗಳ ಹಾವಳಿ ಮತ್ತು ಬೆಳೆಗಳಿಗೆ ನ್ಯಾಯವಾದ ಬೆಲೆ ಸಿಗದಿರುವ ಮೂಲಕ ಹಲವಾರು ಸಮಸ್ಯೆಗಳಿಂದ ಬಳಲುತ್ತಿದ್ದಾರೆ. ಈ ಕಾರಣದಿಂದ ಸಣ್ಣ ರೈತರುಗಳು ಸಂಘಟಿತರಾಗಿ ಸಮಸ್ಯೆಗಳ ಪರಿಹಾರಕ್ಕಾಗಿ ಹೋರಾಟ ನಡೆಸಬೇಕಾಗಿದೆ ಎಂದರು.

ಕಾಫಿ ಫಾರ್ಮರ್ಸ್ ಫೆಡರೇಶನ್ ಕೊಡಗು ಘಟಕದ ಸಮಾವೇಶದ ಅಧ್ಯಕ್ಷತೆಯನ್ನು ಸೋಮವಾರಪೇಟೆಯ ಲಕ್ಷ್ಮಣ ಅವರು ವಹಿಸಿ ಮಾತನಾಡಿದರು. ಸಮಾವೇಶದಲ್ಲಿ ಮಾರ್ಗದರ್ಶಕರಾಗಿ ಎ.ಐ.ಕೆ.ಎಸ್.ನ ರಾಜ್ಯ ಮುಖಂಡರಾದ ನವೀನ್ ಭಾಗವಹಿಸಿ ಸಣ್ಣ ರೈತರ ಸಮಸ್ಯೆಗಳು ಹಾಗೂ ಅನೇಕ ವಿಚಾರಗಳ ಬಗ್ಗೆ ಸಭೆಗೆ ತಿಳಿಸಿದರು. ವೇದಿಕೆಯಲ್ಲಿ ಡಾ, ದುರ್ಗಾಪ್ರಸಾದ್, ಮಹ್ಮದ್ ಹನೀಫ್, ನಿವೃತ್ತ ಶಿಕ್ಷಕ ಲತೀಫ್ ಸಭೆಯನ್ನುದ್ದೇಶಿಸಿ ಮಾತನಾಡಿದರು. ಸಮಾವೇಶದಲ್ಲಿ ಹಲವು ಸಣ್ಣ ರೈತರುಗಳು ಭಾಗವಹಿಸಿ ಮುಂದಿನ ನಡೆಯ ಬಗ್ಗೆ ಚರ್ಚಿಸಲಾಯಿತು.

ಚಾ.ನಗರ ಜಿಲ್ಲೆಯಲ್ಲಿ ಮೂವರು ಅನ್ನದಾತರ ದುರಂತ ಸಾವು

ಚಾಮರಾಜನಗರ, ಅ.18–ಪ್ರತ್ಯೇಕ ಪ್ರಕರಣಗಳಲ್ಲಿ ಜಿಲ್ಲೆಯ ಮೂವರು ಅನ್ನದಾತರು ಸಾವನ್ನಪ್ಪಿರುವ ದುರ್ಘಟನೆ ಮಂಗಳವಾರ ನಡೆದಿದೆ.

ಖಾಸಗಿ ಫೈನಾನ್ಸ್ ಕಿರುಕುಳ ತಾಳಲಾರದೆ ವಿಷ ಸೇವಿಸಿ ಗುಂಡ್ಲುಪೇಟೆ ತಾಲೂಕಿನ ನೇನೆಕಟ್ಟೆಯ ಕೃಷ್ಣಯ್ಯ(65), ಉಳುಮೆ ಮಾಡುವಾಗ ಟ್ರಾಕ್ಟರ್ ಮಗುಚಿ ಚಾಮರಾಜನಗರ ತಾಲೂಕಿನ ಕೊತ್ತಲವಾಡಿಯ ಶಿವಕುಮಾರ್(30), ವಿದ್ಯುತ್ ತಂತಿ ತುಳಿದು ಅದೇ ತಾಲೂಕಿನ ಚಂದಕವಾಡಿ ಗ್ರಾಮದ ನಾಗರಾಜು (55) ಮೃತಪಟ್ಟ ರೈತರು.



ಕೃಷ್ಣಯ್ಯ



ಶಿವಕುಮಾರ್



ನಾಗರಾಜು

ಗುಂಡ್ಲುಪೇಟೆ ವರದಿ: ತಾಲೂಕಿನ ನೇನೆಕಟ್ಟೆ ಗ್ರಾಮದ ರೈತ ಕೃಷ್ಣಯ್ಯ 5 ವರ್ಷಗಳ ಹಿಂದೆ ಟ್ರಾಕ್ಟರ್ ಖರೀದಿಸಲು ಗುಂಡ್ಲುಪೇಟೆ ಪಟ್ಟಣದ ಖಾಸಗಿ ಫೈನಾನ್ಸ್‌ನಲ್ಲಿ 7 ಲಕ್ಷ ರೂ. ಸಾಲ ಪಡೆದಿದ್ದರು. ಕೊರೊನಾ ಪರಿಣಾಮ ಸಾಲದ ಕಂತು ವಿಳಂಬವಾದ ಹಿನ್ನೆಲೆಯಲ್ಲಿ ಫೈನಾನ್ಸ್‌ನವರು 6 ತಿಂಗಳ ಹಿಂದೆ ಟ್ರಾಕ್ಟರ್ ಜಪ್ತಿ ಮಾಡಿದ್ದರು. ಅಲ್ಲದೆ ಬಾಕಿ ಉಳಿದ ಹಣಕ್ಕೆ ಚೆಕ್ ಪಡೆದು ಬ್ಯಾಂಕ್‌ಗೆ ಹಾಕಿದ್ದರು. ಖಾತೆಯಲ್ಲಿ ಹಣವಿಲ್ಲದೆ ಚೆಕ್ ಬೌನ್ಸ್ ಆಗಿತ್ತು. ಈ ಅಪಮಾನದಿಂದ ಮನನೊಂದ ಕೃಷ್ಣಯ್ಯ ವಿಷ ಸೇವಿಸಿ ಆತ್ಮಹತ್ಯೆಗೆ ಶರಣಾಗಿದ್ದಾರೆ. ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಚಾಮರಾಜನಗರ ವರದಿ: ತಾಲೂಕಿನ ಕೊತ್ತಲವಾಡಿ ಗ್ರಾಮದಲ್ಲಿ ಉಳುಮೆ ಮಾಡುವಾಗ ಯುವ ರೈತ ಶಿವಕುಮಾರ್ ಮೃತಪಟ್ಟಿದ್ದಾರೆ. ಇಂದು ತಮ್ಮ ಜಮೀನಿನಲ್ಲಿ ಉಳುಮೆ ಮಾಡುತ್ತಿದ್ದ ವೇಳೆ ದುರ್ಘಟನೆ ಸಂಭವಿಸಿದೆ. ಉಳುಮೆ ವೇಳೆ ತಿರುವು ತೆಗೆದುಕೊಳ್ಳುವಾಗ ನಿಯಂತ್ರಣ ತಪ್ಪಿದ ಟ್ರಾಕ್ಟರ್ ಹೊಲದ ಏರಿಯಿಂದ ಪಕ್ಕದ ಜಮೀನಿಗೆ ಪಲ್ಟಿಯಾಗಿದೆ. ಪರಿಣಾಮ ಶಿವಕುಮಾರ್ ತೀವ್ರವಾಗಿ ಗಾಯಗೊಂಡರು. ಚಿಕಿತ್ಸೆಗಾಗಿ ತೆರಕಣಾಂಬಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಕರೆದೊಯ್ಯುವಾಗ ಮಾರ್ಗ ಮಧ್ಯದಲ್ಲೇ ಶಿವಕುಮಾರ್ ಕೊನೆಯುಸಿರೆಳೆದಿದ್ದಾರೆ. ಮೃತರಿಗೆ 6 ತಿಂಗಳ ಮಗು ಇದ್ದು, ಕುಟುಂಬಸ್ಥರ ಆಕ್ರಂದನ ಮುಗಿಲು ಮುಟ್ಟಿದೆ. ಈ ಘಟನೆ ಕುರಿತು ಯಾವುದೇ ಪ್ರಕರಣ ದಾಖಲಾಗಿಲ್ಲ.

ವಿದ್ಯುತ್ ತಂತಿ ತುಳಿದು ಸಾವು: ಚಾಮರಾಜನಗರ ತಾಲೂಕಿನ ಚಂದಕವಾಡಿ ಗ್ರಾಮದ ತಮ್ಮ ಜಮೀನಲ್ಲಿ ತುಂಡಾಗಿ ಬಿದ್ದಿದ್ದ ವಿದ್ಯುತ್ ತಂತಿ ತುಳಿದು ರೈತ ನಾಗರಾಜು ಅಸುನೀಗಿದ್ದಾರೆ.

ಸೋಮವಾರ ಸಂಜೆ ನಾಗರಾಜು ತಮ್ಮ ಜಮೀನಿಗೆ ತೆರಳುತ್ತಿದ್ದರು. ಈ ವೇಳೆ ಜಮೀನಿನ ಮೇಲೆ ಹಾದುಹೋಗಿದ್ದ ವಿದ್ಯುತ್ ತಂತಿ ತುಂಡಾಗಿ ಬಿದ್ದಿತ್ತು ಎನ್ನಲಾಗಿದೆ. ಇದನ್ನು ಗಮನಿಸದೆ ನಾಗರಾಜು ತುಳಿದ ಪರಿಣಾಮ ವಿದ್ಯುತ್ ಪ್ರವಹಿಸಿ ಅಸ್ವಸ್ಥಗೊಂಡರಲ್ಲದೆ, ಸ್ಥಳದಲ್ಲೇ ಕೊನೆಯುಸಿರೆಳೆದಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

ವಿಷಯ ತಿಳಿದು ಸೆಸ್ಕ್‌ನ ಸಂತೇಮರಳ್ಳಿ ಉಪವಿಭಾಗದ ಎಇಇ ಶಶಿಧರ್, ಜೆಇ ಮರಿಸ್ವಾಮಿ ಹಾಗೂ ಪೊಲೀಸರು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿ, ಸೆಸ್ಕ್‌ನಿಂದ ಸೂಕ್ತ ಪರಿಹಾರ ನೀಡುವ ಭರವಸೆ ನೀಡಿದರು.

ನಗರದ ಸಿಮ್ಸ್ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ದೇಹ ಹಸ್ತಾಂತರಿಸಲಾಯಿತು. ಸಂಜೆ ಚಂದಕವಾಡಿಯಲ್ಲಿ ಅಂತ್ಯಕ್ರಿಯೆ ನೆರವೇರಿತು. ಈ ಸಂಬಂಧ ರಾಮಸಮುದ್ರ ಪೊಲೀಸ್ ಠಾಣೆಯಲ್ಲಿ ದೂರು ದಾಖಲಾಗಿದೆ.

ಮೃತ ರೈತನ ಕುಟುಂಬಕ್ಕೆ ಪರಿಹಾರಕ್ಕೆ ಆಗ್ರಹಿಸಿ ಪ್ರತಿಭಟನೆ

ಶವಪರೀಕ್ಷೆಗೆ ಅವಕಾಶ ನೀಡದ ರೈತರು



ಚಾಮರಾಜನಗರ, ಅ.18–ಖಾಸಗಿ ಫೈನಾನ್ಸ್ ಕಿರುಕುಳದಿಂದ ಬೇಸತ್ತು ವಿಷ ಸೇವಿಸಿ ಆತ್ಮಹತ್ಯೆ ಮಾಡಿಕೊಂಡಿರುವ ಗುಂಡ್ಲುಪೇಟೆ ತಾಲೂಕಿನ ನೇನೆಕಟ್ಟೆ ರೈತ ಕೃಷ್ಣಯ್ಯ ಅವರ ಕುಟುಂಬಕ್ಕೆ ಸೂಕ್ತ ಪರಿಹಾರ ನೀಡುವಂತೆ ಆಗ್ರಹಿಸಿ ರೈತ ಸಂಘದ ಕಾರ್ಯಕರ್ತರು ಹಾಗೂ ಗ್ರಾಮಸ್ಥರು ನಗರದ ಸಿಮ್ಸ್ ಆಸ್ಪತ್ರೆ ಮುಂಭಾಗದ ಮುಖ್ಯರಸ್ತೆ ತಡೆದು ಪ್ರತಿಭಟಿಸಿದರು.

ಸಿಮ್ಸ್ ಆಸ್ಪತ್ರೆ ಮುಂದೆ ಜಮಾಯಿಸಿದ ರೈತ ಸಂಘದ ಕಾರ್ಯಕರ್ತರು, ಕುಟುಂಬಸ್ಥರು ಹಾಗೂ ಗ್ರಾಮಸ್ಥರು, ಸೂಕ್ತ ಪರಿಹಾರ ನೀಡುವ ತನಕ ಮರಣೋತ್ತರ ಪರೀಕ್ಷೆಗೆ ಅವಕಾಶ ನೀಡದೇ ಆಕ್ರೋಶ ವ್ಯಕ್ತಪಡಿಸಿದರು. ಮೃತ ರೈತನಿಗೆ ಸಾಲ ನೀಡಿದ್ದ ಫೈನಾನ್ಸ್ ಕಂಪನಿ, ಜನಪ್ರತಿನಿಧಿಗಳು ಹಾಗೂ ಜಿಲ್ಲಾಡಳಿತ ವಿರುದ್ಧ ಘೋಷಣೆಗಳನ್ನು ಕೂಗಿದರು. ಸ್ವಲ್ಪ ಸಮಯದ ನಂತರ ಸಿಮ್ಸ್ ಆಸ್ಪತ್ರೆಗೆ ಸಂಪರ್ಕ ಕಲ್ಪಿಸುವ ಚಾಮರಾಜನಗರ–ತೆರಕಣಾಂಬಿ ಮುಖ್ಯರಸ್ತೆಯಲ್ಲಿ ಕುಳಿತು ಪ್ರತಿಭಟನೆ ಆರಂಭಿಸಿದರು. ಇದರಿಂದ ವಾಹನ ಸಂಚಾರ ಅಸ್ತವ್ಯಸ್ತಗೊಂಡಿತು.

ವಿಷಯ ತಿಳಿದು ಸ್ಥಳಕ್ಕೆ ಆಗಮಿಸಿದ ಪೊಲೀಸರು, ಹಿರಿಯ ಅಧಿಕಾರಿಗಳನ್ನು ಸ್ಥಳಕ್ಕೆ ಕರೆತರಲಾಗುವುದು ಎಂದು ರೈತರಿಗೆ ಭರವಸೆ ನೀಡಿದರು. ನಂತರ ರೈತರು ರಸ್ತೆತಡೆ ಕೈ ಬಿಟ್ಟು, ಸಿಮ್ಸ್ ಆಸ್ಪತ್ರೆ ಮುಂದೆ ಪ್ರತಿಭಟನೆ ಮುಂದುವರಿಸಿದರು.

ಮೃತ ರೈತನ ಕುಟುಂಬದವರಿಗೆ 25 ಲಕ್ಷ ರೂ. ಪರಿಹಾರ ನೀಡಬೇಕು. ಜಪ್ತಿ ಮಾಡಿರುವ ಟ್ರಾಕ್ಟರ್ ಹಿಂದಿರುಗಿಸಬೇಕು ಹಾಗೂ ಮೃತ ರೈತನ ಸಾಲ ಮನ್ನಾ ಮಾಡಬೇಕೆಂಬ ಬೇಡಿಕೆ ಈಡೇರುವ ತನಕ ನಾವು ಮರಣೋತ್ತರ ಪರೀಕ್ಷೆಗೆ ಅವಕಾಶ ನೀಡುವುದಿಲ್ಲ ಎಂದು ಪ್ರತಿಭಟನಾಕಾರರು ಬಿಗಿಪಟ್ಟು ಹಿಡಿದರು. ತಹಸೀಲ್ದಾರ್ ಬಸವರಾಜು ಸ್ಥಳಕ್ಕೆ ಆಗಮಿಸಿ, ಮನವೊಲಿಸಲು ಯತ್ನಿಸಿದರು. ಇವರ ಮಾತಿಗೆ ಬೆಲೆ ನೀಡದ ಪ್ರತಿಭಟನಾಕಾರರು, ಸ್ಥಳಕ್ಕೆ ಶಾಸಕರು ಹಾಗೂ ಜಿಲ್ಲಾಧಿಕಾರಿಗಳು ಆಗಮಿಸಬೇಕು ಎಂದು ಒತ್ತಾಯಿಸಿದರು.

ನಂತರ ಜಿಲ್ಲಾಧಿಕಾರಿ ಚಾರುಲತಾ ಸೋಮಲ್, ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಟಿ.ಪಿ.ಶಿವಕುಮಾರ್ ಪ್ರತಿಭಟನಾ ಸ್ಥಳಕ್ಕೆ ಭೇಟಿ ನೀಡಿ, ಅಹವಾಲು ಆಲಿಸಿದರು. ರೈತನ ಕುಟುಂಬಕ್ಕೆ ಪರಿಹಾರ, ಟ್ರಾಕ್ಟರ್ ವಾಪಸ್ ನೀಡಲು ಕ್ರಮ ವಹಿಸಲಾಗುವುದು ಎಂದು ಜಿಲ್ಲಾಧಿಕಾರಿ ಭರವಸೆ ನೀಡಿದರು. ಆ ಬಳಿಕ ರೈತರು ಪ್ರತಿಭಟನೆ ಕೈಬಿಟ್ಟರು

ಈ ಸಂದರ್ಭದಲ್ಲಿ ರೈತ ಸಂಘದ ಜಿಲ್ಲಾ ಅಧ್ಯಕ್ಷ ಹೊನ್ನೂರು ಪ್ರಕಾಶ್, ಮುಖಂಡರಾದ ಮಾಡ್ರಹಳ್ಳಿ ಮಹದೇವು, ಕಡಬೂರು ಮಂಜುನಾಥ್, ಶಿವಕುಮಾರ್, ಕುಂದಕೆರೆ ಸಂಪತ್ತು, ಮಹೇಶ್, ವಿಜಯ, ಕುಮಾರ್, ಪಾಪು ಇತರರಿದ್ದರು.

ಪ್ರತಿಭಾ ಪುರಸ್ಕಾರ, ಅರಿವು ಕಾರ್ಯಕ್ರಮ

ಚಾಮರಾಜನಗರ, ಅ.18– ಡಾ.ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮ ಕರ್ನಾಟಕ ರಾಜ್ಯ ಸಫಾಯಿ ಕರ್ಮಚಾರಿಗಳ ಆಯೋಗ ಮತ್ತು ಅಭಿವೃದ್ಧಿ ನಿಗಮ ಹಾಗೂ ಜಿಲ್ಲಾಡಳಿತ ಸಂಯುಕ್ತಾಶ್ರಯದಲ್ಲಿ ಸಫಾಯಿ ಕರ್ಮಚಾರಿಗಳ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ಹಾಗೂ ಎಂ.ಎಸ್ ಕಾಯ್ದೆ 2013ರಂತೆ ಸಫಾಯಿ ಕರ್ಮಚಾರಿಗಳಿಗೆ ಅರಿವು ಮೂಡಿಸುವ ಕಾರ್ಯಕ್ರಮವನ್ನು ಅ, 22ರಂದು ಬೆಳಗ್ಗೆ 11ಗಂಟೆಗೆ ನಗರದ ನಂದಿ ಭವನ ಸಭಾಂಗಣದಲ್ಲಿ ಹಮ್ಮಿಕೊಳ್ಳಲಾಗಿದೆ. ಮಾಹಿತಿಗೆ ಡಾ. ಬಿ.ಆರ್. ಅಂಬೇಡ್ಕರ್ ಅಭಿವೃದ್ಧಿ ನಿಗಮದ ಜಿಲ್ಲಾ ವ್ಯವಸ್ಥಾಪಕರನ್ನು ಸಂಪರ್ಕಿಸಬಹುದು.

ವಿದ್ಯುತ್ ಸಂಪರ್ಕ ಕಡಿತ ಖಂಡಿಸಿ ರೈತ ಸಂಘದಿಂದ ಪೊರಕೆ ಪ್ರತಿಭಟನೆ



ಯಳಂದೂರು, ಅ.18– ತಾಲೂಕಿನ ಅಂಬಳೆ ಗ್ರಾಮದಲ್ಲಿ ಹಳೆಯ ವಿದ್ಯುತ್ ಬಿಲ್ ಪಾವತಿ ಮಾಡದ ಮನೆಗಳ ಸಂಪರ್ಕ ಕಡಿತಗೊಳಿಸುವ ಕ್ರಮ ಖಂಡಿಸಿ ರೈತ ಸಂಘ ಸದಸ್ಯರು ಪ್ರತಿಭಟಿಸಿದರು.

ಅಂಬಳೆ ಗ್ರಾಮದ ಗ್ರಾಪಂ ಸಮೀಪದ ಮನೆಗಳಲ್ಲಿ ವಿದ್ಯುತ್ ಬಿಲ್ ಬಾಕಿ ವಸೂಲಿಗೆ ಸೆಸ್ಕ್ ಎಇಇ ನಿಂಗರಾಜು ಹಾಗೂ ಜೆಇ ಮದನ್ ಸೇರಿದಂತೆ ಸಿಬ್ಬಂದಿ ಭೇಟಿ ನೀಡಿ, ಬಿಲ್ ಪಾವತಿಸದವರ ಸಂಪರ್ಕ ಕಡಿತಗೊಳಿಸುತ್ತಿದ್ದರು. ವಿಷಯ ತಿಳಿದ ರೈತ ಸಂಘದ ಸದಸ್ಯರು, ತಕ್ಷಣ ಸ್ಥಳಕ್ಕೆ ಧಾವಿಸಿ ಅಧಿಕಾರಿಗಳನ್ನು ತರಾಟೆ ತೆಗೆದುಕೊಂಡರು.

ವಿದ್ಯುತ್ ಹಳೆಯ ಬಾಕಿ ವಸೂಲಾತಿಗೆ ಮುಂದಾದ ಕೆಇಬಿ ಅಧಿಕಾರಿಗಳಿಗೆ ಪೊರಕೆ ಪ್ರದರ್ಶನ ಮಾಡುವ ಮೂಲಕ ಆಕ್ರೋಶ ವ್ಯಕ್ತಪಡಿಸಿದ ರೈತ ಸಂಘದ ಕಾರ್ಯಕರ್ತರು, ಏಕಾಏಕಿ ವಿದ್ಯುತ್ ಸಂಪರ್ಕವನ್ನು ಕಡಿತಗೊಳಿಸುವುದು, ಹಳೆಯ ಬಾಕಿ ಪಾವತಿಗೆ ಒತ್ತಡ ಹಾಕಿದರೆ ಮುಂದಿನ ದಿನಗಳಲ್ಲಿ ತೀವ್ರ ಪ್ರತಿಭಟಿಸುವುದಾಗಿ ರೈತ ಸಂಘದ ಕಾರ್ಯಕರ್ತರು ಎಚ್ಚರಿಕೆ ನೀಡಿದರು. ಸಂಘದ ಜಿಲ್ಲಾಧ್ಯಕ್ಷ ಹೊನ್ನೂರು ಪ್ರಕಾಶ್ ಮಾತನಾಡಿ, ಹಳೆ ವಿದ್ಯುತ್ ಬಿಲ್ ಬಾಕಿ ಮನ್ನಾ ಮಾಡಿ ಹೊಸ ಡಿಜಿಟಲ್ ಮೀಟರ್ ಅಳವಡಿಸಲು ಕ್ರಮ ವಹಿಸುವುದಾಗಿ ಉಸ್ತುವಾರಿ ಸಚಿವರು ಭರವಸೆ ನೀಡಿದ್ದರು. ಈ ಬಗ್ಗೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ. ಆದರೂ ಬಾಕಿ ವಸೂಲಿಗೆ ಮುಂದಾಗಿರುವ ಅಧಿಕಾರಿಗಳ ಕ್ರಮ ಸರಿಯಲ್ಲ ಎಂದು ಅಸಮಾಧಾನ ವ್ಯಕ್ತಪಡಿಸಿದರು. ಪ್ರತಿಭಟನೆಯಲ್ಲಿ ತಾಪಂ ಮಾಜಿ ಸದಸ್ಯ ವೈ.ಕೆ.ಮೋಳೆ ನಾಗರಾಜು, ರೈತ ಸಂಘದ ಬಸವಣ್ಣ, ಕುಮಾರ್, ಮಹದೇವಸ್ವಾಮಿ, ಚೇತನ್, ಚಿನ್ನಸ್ವಾಮಿ, ಪುಟ್ಟಸ್ವಾಮಿ, ಸೇರಿದಂತೆ ಅಂಬಳೆ ಗ್ರಾಮದ ಗ್ರಾಮಸ್ಥರಿದ್ದರು

> ಹಳೆಯ ವಿದ್ಯುತ್ ಬಿಲ್ ಮನ್ನಗೊಂಡಿರುವ ಬಗ್ಗೆ ಸರ್ಕಾರದಿಂದ ಯಾವುದೇ ಆದೇಶವಿಲ್ಲ. ಆದ್ದರಿಂದ ವಿದ್ಯುತ್ ಬಿಲ್ ಬಾಕಿ ಉಳಿಸಿಕೊಂಡಿರುವ ತಾಲೂಕಿನ ಸಾವಿರಾರು ಮನೆಗಳಿದ್ದು, ಅ ಮನೆಗಳಿಗೆ ಭೇಟಿ ನೀಡಿ ಬಿಲ್ ವಸೂಲಿಗೆ ಇಲಾಖೆ ಮುಂದಾಗಲಿದೆ. ನೀಡದೇ ಇರುವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು.
> -ನಿಂಗರಾಜು, ಯಳಂದೂರು ಸೆಸ್ಕ್ ಎಇಇ.

ಅತ್ಯಾಚಾರ ಆರೋಪಿ ಶಿಕ್ಷಕನನ್ನು ಗಲ್ಲಿಗೇರಿಸಲು ಆಗ್ರಹ

ಚಾಮರಾಜನಗರ, ಅ.18– ಮಳವಳ್ಳಿಯ ಬಾಲಕಿ ಅತ್ಯಾಚಾರ ಆರೋಪಿ ಶಿಕ್ಷಕ ಕಾಂತರಾಜುವನ್ನು ಗಲ್ಲಿಗೇರಿಸುವಂತೆ ಒತ್ತಾಯಿಸಿ ತಾಲೂಕು ಕುರುಬರ ಸಂಘದಿಂದ ನಗರದಲ್ಲಿ ಪ್ರತಿಭಟಿಸಲಾಯಿತು. ನಗರದ ಶ್ರೀಚಾಮರಾಜೇಶ್ವರ ದೇವಸ್ಥಾನದ ಆವರಣದಲ್ಲಿ ಸಂಘದ ತಾಲೂಕು ಅಧ್ಯಕ್ಷ ಸಿ.ಎನ್.ಬಾಲರಾಜು ನೇತೃತ್ವದಲ್ಲಿ ಸಮಾವೇಶಗೊಂಡ ಪ್ರತಿಭಟನಾನಿರತರು, ಅಲ್ಲಿಂದ ಮೆರವಣಿಗೆ ಹೊರಟು ಭುವನೇಶ್ವರಿ ವೃತ್ತದಲ್ಲಿ ಮಾನವ ಸರಪಳಿ ರಚಿಸಿ, ಕೆಲಕಾಲ ರಸ್ತೆತಡೆ ನಡೆಸಿದರು. ನಂತರ ಜೋಡಿರಸ್ತೆ ಮೂಲಕ ಜಿಲ್ಲಾಡಳಿತ ಭವನಕ್ಕೆ ಆಗಮಿಸಿ ಕೆಲಕಾಲ ಪ್ರತಿಭಟಿಸಿ, ಹೆಚ್ಚುವರಿ ಜಿಲ್ಲಾಧಿಕಾರಿ ಕಾತ್ಯಾಯಿನಿದೇವಿ ಮೂಲಕ ಮುಖ್ಯಮಂತ್ರಿಗಳಿಗೆ ಮನವಿ ಸಲ್ಲಿಸಿದರು.

ಈ ಸಂದರ್ಭದಲ್ಲಿ ಪ್ರತಿಭಟನೆ ನೇತೃತ್ವ ವಹಿಸಿದ್ದ ಒಕ್ಕೂಟದ ತಾಲೂಕು ಕುರುಬರ ಸಂಘದ ಅಧ್ಯಕ್ಷ ಸಿ.ಎನ್.ಬಾಲರಾಜು ಮಾತನಾಡಿದರು. ಕುರುಬರ ಸಂಘದ ಪ್ರತಿಭಟನೆಯಲ್ಲಿ ಭಾಗವಹಿಸುವ ಮೂಲಕ ಎಸ್‌ಡಿಪಿಐ ಜಿಲ್ಲಾ ಉಪಾಧ್ಯಕ್ಷ ಸಿ.ಎಸ್.ಸೈಯದ್ ಆರೀಫ್, ಪ್ರಧಾನ ಕಾರ್ಯದರ್ಶಿ ಎಂ.ಮಹೇಶ್ ಬೆಂಬಲ ಸೂಚಿಸಿದರು.

ಪ್ರತಿಭಟನೆಯಲ್ಲಿ ಕುರುಬರ ಸಂಘದ ರಾಜ್ಯ ನಿರ್ದೇಶಕ ಬಸಪ್ಪನಪಾಳ ನಟರಾಜು, ಜಿಲ್ಲಾಧ್ಯಕ್ಷ ನಂಜೇಗೌಡ, ತಾಲೂಕು ಪ್ರಧಾನ ಕಾರ್ಯದರ್ಶಿ ಕೆ.ಪಿ.ನಾಗರಾಜು, ಉಪಾಧ್ಯಕ್ಷ ಆರ್.ಉಮೇಶ್, ನಿರ್ದೇಶಕರಾದ ರಾಜಶೇಖರ್, ಮಹದೇವಸ್ವಾಮಿ, ವೆಂಕಟೇಗೌಡ, ಕೆ.ಕೆಹುಂಡಿ ನಾಗರಾಜು, ತೆಳ್ಳೂರು ಅಶೋಕ್, ಕುದೇರುಲಿಂಗಣ್ಣ, ಸೊತ್ತನಹುಂಡಿ ಸೋಮಣ್ಣ, ಮಹೇಶ್, ಚುಂಗಡಿಪುರ ಮಹೇಶ್, ಮಸಗಾಪುರ ಮರಿಸ್ವಾಮಿ, ಗುಂಡ್ಲುಪೇಟೆ ಸುರೇಶ್, ಸೂರ್ಯ ಬಾಲರಾಜು, ಗ್ರಾಪಂ ಸದಸ್ಯ ಎಲ್‌ಐಸಿ ಕುಮಾರ್, ರಾಮಸಮುದ್ರ ಗೋವಿಂದ್, ಮಸಗಾಪುರ ಸ್ವಾಮಿ, ಜಿಲ್ಲಾ ಉಪ್ಪಾರ ಯುವಕರ ಸಂಘದ ಜಿಲ್ಲಾಧ್ಯಕ್ಷ ಜಯಕುಮಾರ್, ರವಿಕುಮಾರ್, ಸ್ವಾಮಿ, ನಂಜುಂಡೇಗೌಡ ಇತರರಿದ್ದರು.



ಗುಂಡ್ಲುಪೇಟೆ; ಭಾರೀ ಮಳೆಗೆ ಅಪಾರ ಹಾನಿ



ಗುಂಡ್ಲುಪೇಟೆ, ಅ.18– ತಾಲೂಕಿನ ವಿವಿಧೆಡೆ ಬಿದ್ದ ಭಾರೀ ಮಳೆಗೆ ಜನಜೀವನ ಅಸ್ತವ್ಯಸ್ತವಾಗಿದ್ದು, ಜಮೀನುಗಳಿಗೆ ನೀರು ನುಗ್ಗಿದ ಪರಿಣಾಮ ಬೆಳೆ ನಾಶದಿಂದ ಲಕ್ಷಾಂತರ ರೂ. ನಷ್ಟ ಸಂಭವಿಸಿದೆ. ಮಂಗಳವಾರ ಮಧ್ಯಾಹ್ನ ಮೂರು ಗಂಟೆ ಕಾಲ ಎಡಬಿಡದೆ ಸುರಿದ ಮಳೆಗೆ ತಾಲೂಕಿನ ವಡ್ಡಗೆರೆ ಸುತ್ತಮುತ್ತಲಿನ ಗ್ರಾಮದಲ್ಲಿ ಅವಾಂತರ ಸೃಷ್ಟಿಯಾಗಿದೆ.

ತಾಲೂಕಿನ ತೆರಕಣಾಂಬಿ ಹೋಬಳಿಯ ಬೊಮ್ಮನಹಳ್ಳಿ, ಚಿರಕನಹಳ್ಳಿ, ಕುಂದಕೆರೆ ಹಾಗೂ ವಡ್ಡಗೆರೆ, ಯರಿಯೂರು ಸುತ್ತಮುತ್ತಲಿನ ಗ್ರಾಮಗಳಲ್ಲಿ ಮಂಗಳವಾರ ಮಧ್ಯಾಹ್ನ ಒಂದು ಗಂಟೆಗೆ ಆರಂಭವಾದ ಭಾರೀ ಮಳೆಗೆ ಜನಜೀವನ ಅಸ್ತವ್ಯಸ್ತಗೊಂಡಿತು. ಅಲ್ಲದೆ ಬೊಮ್ಮನಹಳ್ಳಿ, ಯರಿಯೂರು, ದಾರಿಬೇಗೂರು ಕೆರೆಗಳು ಕೋಡಿ ಬಿದ್ದವು. ಜಮೀನುಗಳಿಂದ ರಸ್ತೆಯತ್ತ ಪ್ರವಾಹದಂತೆ ನುಗ್ಗಿದ ನೀರು ರಸ್ತೆಗಳ ಮೇಲೆ ಮೂರು ಅಡಿ ಎತ್ತರ ಹರಿದಿದ್ದರಿಂದ ಈ ಭಾಗದ ವಾಹನ ಸಂಚಾರ ಬಂದ್ ಆಗಿತ್ತು. ರೈತರು ಬೆಳೆದಿದ್ದ ಕೋಸು, ಅರಿಶಿನ, ಬಾಳೆ ಸೇರಿದಂತೆ ತರಕಾರಿ ಬೆಳೆ ನೀರಿನಲ್ಲಿ ಮುಳುಗಿವೆ. ಕೆಲ ದಿನಗಳಿಂದ ಬೀಳುತ್ತಿರುವ ಮಳೆಯಿಂದ ರೈತರಿಗೆ ಗಾಯದ ಮೇಲೆ ಬರೆ ಎಳೆದಂತಾಗಿದೆ.

ಪರಿಹಾರದಲ್ಲಿ ತಾರತಮ್ಯ: ನೆರೆಯ ಚಾಮರಾಜನಗರ ತಾಲೂಕಿನಲ್ಲಿ ಅರಿಶಿನ, ಬಾಳೆ ಸೇರಿದಂತೆ ಮುಂತಾದ ಎಲ್ಲಾ ಬೆಳೆಗಳ ನಷ್ಟಕ್ಕೆ ಪರಿಹಾರ ನೀಡುತ್ತಿದ್ದರೂ ಗುಂಡ್ಲುಪೇಟೆಯಲ್ಲಿ ಹತ್ತಿ, ಈರುಳ್ಳಿ ಬೆಳೆಗಳಿಗೆ ಮಾತ್ರ ಪರಿಹಾರ ನೀಡಲಾಗುತ್ತಿದೆ. ಇಲ್ಲಿಯೂ ಮಳೆಯಿಂದ ನಾಶವಾದ ಇತರೆ ಬೆಳೆಗಳಿಗೂ ಪರಿಹಾರ ನೀಡಬೇಕು ಎಂದು ಈ ಭಾಗದ ರೈತರು ಆಗ್ರಹಿಸಿದ್ದಾರೆ.

> ತಾಲೂಕಿನ ತೆರಕಣಾಂಬಿ ಹೋಬಳಿಯ ಕೆಲವು ಭಾಗಗಳಿಗೆ ಮಂಗಳವಾರ ಭಾರೀ ಮಳೆ ಬಿದ್ದಿದ್ದು, ರಸ್ತೆ ಸಂಪರ್ಕ ಬಂದ್ ಆಗಿದ್ದರಿಂದ ಆ ಗ್ರಾಮಗಳಿಗೆ ಹೋಗಲಾಗಿಲ್ಲ. ಆದರೆ ಯಾವುದೇ ಗಂಭೀರ ಹಾನಿ ಬಗ್ಗೆ ವರದಿಯಾಗಿಲ್ಲ. ಈವರೆಗೆ ಬಿದ್ದ ಮಳೆಗೆ ತಾಲೂಕಿನಲ್ಲಿ 31 ಮನೆಗಳಿಗೆ ಹಾನಿಯಾಗಿದ್ದು, ಸದ್ಯ ಹತ್ತಿ ಮತ್ತು ಈರುಳ್ಳಿ ಬೆಳೆಗಳಿಗೆ ಮಾತ್ರ ಪರಿಹಾರ ನೀಡಲಾಗುತ್ತಿದೆ. ಮತ್ತೆ ಮಳೆ ಮುಂದುವರೆದು ಹೆಚ್ಚಿನ ಹಾನಿಯಾಗಿದ್ದರೆ ರಾಷ್ಟ್ರೀಯ ವಿಪತ್ತು ನಿಧಿಯಿಂದ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗುವುದು.
> -ಸಿ.ಜೆ.ರವಿಶಂಕರ್, ತಹಶೀಲ್ದಾರ್.

ಒಂದನೇ ಪುಟದಿಂದ

ಅರಮನೆಯ ಕೋಟೆ ಗೋಡೆ ಕುಸಿತ

200 ಮೀಟರ್ ಕುಸಿತ: ಗನ್‌ಹೌಸ್ ಮುಂಭಾಗ ಕೋಟೆ ಮಾರಮ್ಮ ದೇವಾಲಯದ ಬಳಿ ಸುಮಾರು 20 ಮೀಟರ್ ಕೋಟೆ ಗೋಡೆ ಕುಸಿದಿದೆ. 30 ಅಡಿ ಎತ್ತರದ ಈ ಕೋಟೆ ಗೋಡೆ ಕುಸಿದಿದ್ದು, ಅರಮನೆಯ ಒಳಭಾಗದಿಂದ ಕೋಟೆ ಗೋಡೆ ಬಳಿ ಸಮತಟ್ಟು ಮಾಡಿದ್ದ ಮಣ್ಣು ಸಹ ಅವಶೇಷಗಳೊಂದಿಗೆ ಕುಸಿದಿದೆ.

ಫಿರಂಗಿ ಸಿಡಿಮದ್ದಿನಿಂದ ಸಡಿಲವಾಗಿತ್ತೆ!: ನಾಡಹಬ್ಬ ದಸರಾ ವೇಳೆ ವರಹಾ ದ್ವಾರದ ಪಾರ್ಕಿಂಗ್ ಸ್ಥಳದಲ್ಲಿ ನಾಲ್ಕು ಬಾರಿ ಸಿಡಿಮದ್ದು ಸಿಡಿಸಲಾಗಿತ್ತು. ಅರಮನೆ ಮಂಡಳಿ ಕೋರಿಕೆಯ ಮೇರೆಗೆ ಎರಡು ಬಾರಿ ಸಿಡಿಮದ್ದು ತಾಲೀಮನ್ನು ದಸರಾ ವಸ್ತುಪ್ರದರ್ಶನದ ಪಾರ್ಕಿಂಗ್ ಸ್ಥಳಕ್ಕೆ ಸ್ಥಳಾಂತರಿಸಲಾಗಿತ್ತು. ಆದರೆ, ಮೊದಲ ತಾಲೀಮನ್ನು ವರಹಾ ದ್ವಾರದ ಪಾರ್ಕಿಂಗ್ ಸ್ಥಳದಲ್ಲಿ, ಅರಮನೆ ಆವರಣದಲ್ಲಿ ನಡೆಸಿದ ಜಂಬೂಸವಾರಿ ತಾಲೀಮಿನ ವೇಳೆ ಒಂದು ಬಾರಿ 7 ಸಿಡಿಮದ್ದು, ಕೊನೆ ತಾಲೀಮಿನಲ್ಲಿ 21 ಬಾರಿ ಹಾಗೂ ಜಂಬೂಸವಾರಿ ದಿನವೂ 21 ಬಾರಿ ಕುಶಾಲ ತೋಪು ಹಾರಿಸಲಾಗಿತ್ತು. ಈ ವೇಳೆ ಉಂಟಾದ ಕಂಪನದಿಂದ ಕೋಟೆ ಗೋಡೆ ಶಿಥಿಲಗೊಂಡಿತ್ತು ಎನ್ನಲಾಗಿದೆ. ಹಾಗಾಗಿ ಕಳೆದ ಕೆಲವು ದಿನಗಳಿಂದ ಸುರಿದ ಮಳೆಯಿಂದಾಗಿ ನೀರು ತುಂಬಿಕೊಂಡು, ದುರ್ಬಲತೆಯಿಂದ ಕೋಟೆ ಗೋಡೆ ಕುಸಿದಿದೆ ಎಂದು ತಜ್ಞರು ಅಭಿಪ್ರಾಯಪಟ್ಟಿದ್ದಾರೆ.

ತುರ್ತು ಕ್ರಮ: ಮುಂಜಾನೆಯೇ ಗೋಡೆ ಕುಸಿದಿರುವ ಮಾಹಿತಿ ತಿಳಿದ ಅರಮನೆ ಮಂಡಳಿ, ಕೂಡಲೇ ಕ್ರಮ ಕೈಗೊಂಡು ಕುಸಿದ ಭಾಗದಲ್ಲಿ ಟಾರ್ಪಾಲ್ ಕಟ್ಟಿ, ರಕ್ಷಣಾ ಕಾರ್ಯ ಕೈಗೊಳ್ಳಲಾಗಿದೆ. ಅಲ್ಲದೆ, ಗೋಡೆ ದುರಸ್ತಿ ಕಾಮಗಾರಿ ಆರಂಭಿಸಲಾಗಿದೆ.

ತಿಂಗಳ ಹಿಂದೆಯೇ ಟೆಂಡರ್: ಅರಮನೆಯ ರಕ್ಷಣಾ ಗೋಡೆಯ ಕೆಲವು ಭಾಗ ಶಿಥಿಲಗೊಂಡಿದ್ದು, ಅದರ ದುರಸ್ತಿಗೆ ಅರಮನೆ ಮಂಡಳಿ ಇ-ಟೆಂಡರ್ ಕರೆದಿತ್ತು. ಶಿಥಿಲಗೊಂಡ ಮೂರು ಸ್ಥಳದಲ್ಲಿ 50 ಮೀಟರ್ ಗೋಡೆ ದುರಸ್ತಿಗೆ ಗುರುತಿಸಲಾಗಿತ್ತು. ಅದಕ್ಕಾಗಿ 39.60 ಲಕ್ಷ ರೂ.ಗಳ ಟೆಂಡರ್ ಕರೆಯಲಾಗಿತ್ತು. ಗುತ್ತಿಗೆದಾರ ರಾಮಚಂದ್ರ ಎಂಬುವರು ಟೆಂಡರ್ ಪಡೆದಿದ್ದು, ಭದ್ರತಾ ಠೇವಣಿ ಕೂಡ ಸಲ್ಲಿಸಿದ್ದಾರೆ. ದಸರಾ ಹಿನ್ನೆಲೆಯಲ್ಲಿ ಕಾಮಗಾರಿ ಆರಂಭಿಸಿರಲಿಲ್ಲ. ಆದರೆ, ಮಳೆಯಿಂದಾಗಿ ಇದೀಗ ಗೋಡೆ ಕುಸಿತದ ಹಿನ್ನೆಲೆಯಲ್ಲಿ ಕೂಡಲೇ ಕಾಮಗಾರಿ ಆರಂಭಿಸಲು ಸೂಚಿಸಲಾಗಿದೆ.

ಜೆಡಿಎಸ್ ಸಮಾಲೋಚನಾ ಸಭೆ

ಕಾರ್ಯತಂತ್ರದ ಬಗ್ಗೆ ಸ್ಪಷ್ಟ ದಿಕ್ಸೂಚಿ ನೀಡಲಾಗುವುದು ಎಂದಿದ್ದಾರೆ. ಮಾಜಿ ಪ್ರಧಾನಮಂತ್ರಿಗಳು, ಜೆಡಿಎಸ್ ರಾಷ್ಟ್ರೀಯ ಅಧ್ಯಕ್ಷರಾದ ಹೆಚ್.ಡಿ.ದೇವೇಗೌಡರು ಈ ಮಹತ್ವದ ಸಭೆಯಲ್ಲಿ ಪಾಲ್ಗೊಳ್ಳಲಿದ್ದಾರೆ. ಹಾಗೆಯೇ ಪಕ್ಷದ ರಾಜ್ಯಾಧ್ಯಕ್ಷ ಸಿಎಂ ಇಬ್ರಾಹಿಂ, ಕೋರ್ ಕಮಿಟಿ ಅಧ್ಯಕ್ಷ ಬಂಡೆಪ್ಪ ಕಾಶೆಂಪೂರ್, ಸಂಸದೀಯ ಮಂಡಳಿ ಅಧ್ಯಕ್ಷ ಹೆಚ್.ಕೆ.ಕುಮಾರಸ್ವಾಮಿ ಸೇರಿದಂತೆ ಪಕ್ಷದ ಎಲ್ಲ ಶಾಸಕರು, ವಿಧಾನ ಪರಿಷತ್ ಸದಸ್ಯರು, ಮಾಜಿ ಶಾಸಕರು, ಮುಂಬರುವ ವಿಧಾನಸಭೆ ಚುನಾವಣೆಯ ಸಂಭವನೀಯ ಅಭ್ಯರ್ಥಿಗಳು, ಪಕ್ಷದ ಜಿಲ್ಲಾ ಘಟಕಗಳ ಅಧ್ಯಕ್ಷರು ಸೇರಿದಂತೆ ಆಯ್ದ ಪ್ರಮುಖ ನಾಯಕರು ಈ ಸಭೆಯಲ್ಲಿ ಭಾಗಿಯಾಗಲಿದ್ದಾರೆ ಎಂದು ಕುಮಾರಸ್ವಾಮಿ ತಿಳಿಸಿದ್ದಾರೆ.

ಪಂಚರತ್ನ ರಥಯಾತ್ರೆ: ನವೆಂಬರ್ 1ರಿಂದ ಪಂಚರತ್ನ ರಥಯಾತ್ರೆ ಅರಂಭವಾಗುತ್ತಿದ್ದು, ಯಾತ್ರೆಯ ಅಂತಿಮ ಹಂತದ ಸಿದ್ಧತೆಗಳ ಬಗ್ಗೆ ಸಭೆಯಲ್ಲಿ ಚರ್ಚೆ ನಡೆಯಲಿದೆ. ಅಲ್ಲದೆ, ರಥಯಾತ್ರೆ ಹೇಗಿರುತ್ತದೆ, ಅದರ ಸ್ವರೂಪವೇನು, ಯಾವ ಮಾರ್ಗದಲ್ಲಿ ಸಾಗುತ್ತದೆ, ಗ್ರಾಮ ವಾಸ್ತವ್ಯ, ಜನ ಸಂಪರ್ಕ ಸಭೆ, ಸಮಾವೇಶ ಇತ್ಯಾದಿ ಪ್ರಮುಖ ಅಂಶಗಳ ಬಗ್ಗೆ ಮಾಹಿತಿ ವಿನಿಮಯ ಮಾಡಿಕೊಳ್ಳಲಾಗುವುದು.

ಈ ಪೈಕಿ ಪಂಚರತ್ನ ಕಾರ್ಯಕ್ರಮಗಳಾದ ಶಿಕ್ಷಣ, ಆರೋಗ್ಯ, ಯುವ ಮತ್ತು ಮಹಿಳಾ ಸಬಲೀಕರಣ, ಕೃಷಿ – ನೀರಾವರಿ, ಉದ್ಯೋಗ, ವಸತಿ ಕಾರ್ಯಕ್ರಮಗಳ ಬಗ್ಗೆ ಜನರಿಗೆ ಮನದಟ್ಟು ಮಾಡಿಕೊಡುವ ಬಗ್ಗೆ ಸಭೆಯಲ್ಲಿ ಸೂಕ್ತ ಮಾರ್ಗದರ್ಶನ ನೀಡಲಾಗುವುದು ಎಂದು ಮಾಜಿ ಮುಖ್ಯಮಂತ್ರಿಗಳು ಹೇಳಿದ್ದಾರೆ.

ಅಭ್ಯರ್ಥಿಗಳಿಗೆ ಚುನಾವಣೆ ಪಾಠ: ಮುಂಬರುವ ವಿಧಾನಸಭೆ ಚುನಾವಣೆಯಲ್ಲಿ ಪಕ್ಷ ಅನುಸರಿಸಬಹುದಾದ ಕಾರ್ಯತಂತ್ರದ ಬಗ್ಗೆ ಸಭೆಯಲ್ಲಿ ಪ್ರಮುಖವಾಗಿ ಚರ್ಚೆಯಾಗಲಿದೆ ಎಂದಿರುವ ಮಾಜಿ ಮುಖ್ಯಮಂತ್ರಿಗಳು, ಪ್ರತಿ ಕ್ಷೇತ್ರವೂ ನಮಗೆ ಮುಖ್ಯವಾಗಿದೆ ಎಂದಿದ್ದಾರೆ. ಬಿಡದಿಯಲ್ಲಿ ನಡೆದ ಸಭೆಯಲ್ಲಿ ಅಭ್ಯರ್ಥಿಗಳಿಗೆ ಕೆಲ ಟಾಸ್ಕುಗಳನ್ನು ಕೊಡಲಾಗಿತ್ತು. ಕೆಲವರು ಆ ಟಾಸ್ಕುಗಳನ್ನು ಅತ್ಯುತ್ತಮವಾಗಿ ಪೂರ್ಣಗೊಳಿಸಿದ್ದಾರೆ. ಕೆಲವರು ಪ್ರಾಮಾಣಿಕವಾಗಿ ಪೂರ್ಣಗೊಳಿಸಲು ಯತ್ನಿಸಿದ್ದಾರೆ. ಈ ಬಗ್ಗೆ ಸಭೆಯಲ್ಲಿ ಕೂಲಂಕುಷವಾಗಿ ಗಮನಿಸಿ ಸೂಕ್ತ ಮಾರ್ಗದರ್ಶನ ನೀಡಲಾಗುವುದು ಎಂದು ಅವರು ಹೇಳಿದ್ದಾರೆ.

ಜೆಡಿಎಸ್ 126 ಅಭ್ಯರ್ಥಿಗಳ ಪಟ್ಟಿ ರೆಡಿ

ಅದರ ಆಧಾರದ ಮೇಲೆ ಮೈಸೂರಿನ ಕಾರ್ಯಾಗಾರದಲ್ಲಿ ಆಕಾಂಕ್ಷಿಗಳ ಮೌಲ್ಯಮಾಪನ ಮಾಡಲಾಗುತ್ತದೆ. ಕಳೆದ ಒಂದು ವರ್ಷದ ಕಾರ್ಯವೈಖರಿ ತೃಪ್ತಿಕರವಾಗಿಲ್ಲದಿದ್ದರೆ, ಅಂತಹ ಕ್ಷೇತ್ರಗಳಲ್ಲಿ ಅಭ್ಯರ್ಥಿಗಳನ್ನು ಬದಲಿಸಲಿದ್ದಾರೆ.

ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು, ಮಾಜಿ ಮುಖ್ಯಮಂತ್ರಿ ಹೆಚ್.ಡಿ.ಕುಮಾರಸ್ವಾಮಿ, ರಾಜ್ಯಾಧ್ಯಕ್ಷ ಸಿ.ಎಂ.ಇಬ್ರಾಹಿಂ ಸೇರಿದಂತೆ ಪಕ್ಷದ ಎಲ್ಲಾ ನಾಯಕರು ಪಾಲ್ಗೊಳ್ಳುತ್ತಾರೆ. ಚುನಾವಣೆಗೆ ಸಂಬಂಧಿಸಿದಂತೆ ಜೆಡಿಎಸ್ ಸಮೀಕ್ಷಾ ವರದಿ ಕೂಡ ಪಡೆದುಕೊಂಡಿದೆ. ಅದನ್ನೂ ಅಭ್ಯರ್ಥಿಗಳ ಆಯ್ಕೆಗೆ ಪರಿಗಣಿಸಲಾಗುತ್ತದೆ.

ರಾಜ್ಯದ 2023ರ ವಿಧಾನಸಭಾ ಚುನಾವಣೆಯಲ್ಲಿ ಬಹುಮತ ಪಡೆದು ಸ್ವಂತ ಶಕ್ತಿಯ ಮೇಲೆ ರಾಜ್ಯದ ಅಧಿಕಾರದ ಚುಕ್ಕಾಣಿ ಹಿಡಿಯಬೇಕೆಂಬ ಮಹದಾಸೆ ಹೊಂದಿದೆ. ಅದಕ್ಕೆ ಪೂರಕ ಸಿದ್ಧತೆಯನ್ನು ಮಾಡಲಿದೆ. ಪಕ್ಷದಿಂದ ಹೊರಗೆ ಕಾಲಿಟ್ಟಿರುವ ಕೋಲಾರದ ಶ್ರೀನಿವಾಸಗೌಡ, ಗುಬ್ಬಿ ಶ್ರೀನಿವಾಸ್ ಅವರಲ್ಲದೆ, ನಾಲ್ಕೈದು ಹಾಲಿ ಶಾಸಕರಿಗೂ ವಿಧಾನಸಭೆ ಟಿಕೆಟ್ ಕೈತಪ್ಪುವ ಸಾಧ್ಯತೆ ಇದೆ.

ಸರ್ಕಾರಕ್ಕೆ ತಲೆ 'ಬಿಸಿ'

ಇನ್ನು ಕುರುಬ ಸಮುದಾಯದ ಬೇಡಿಕೆ ವಿಷಯವೂ ಬಿಜೆಪಿ ಪಾಲಿಗೆ ತಲೆ ನೋವಾಗಿದ್ದು, ಈ ಬೇಡಿಕೆಯನ್ನು ಒಪ್ಪಿದರೂ ಕಷ್ಟ, ಒಪ್ಪದಿದ್ದರೂ ಕಷ್ಟ ಎಂಬುದು ಅದರ ಯೋಚನೆ. ಒಂದು ವೇಳೆ ಒಪ್ಪದೆ ಇದ್ದರೆ ಕುರುಬ ಸಮುದಾಯವನ್ನು ಬಿಜೆಪಿ ಕಡೆ ಸೆಳೆಯಬೇಕು,ಆ ಮೂಲಕ ಪ್ರತಿ ವಿಧಾನಸಭಾ ಚುನಾವಣೆಯ ನಂತರ ಎದುರಿಸುತ್ತಿರುವ ಬಹುಮತದ ಸಮಸ್ಯೆಯನ್ನು ನಿವಾರಿಸಿಕೊಳ್ಳಲು ಎಂಬುದು ಶುರುವಿನಲ್ಲಿ ಬಿಜೆಪಿಯ ಲೆಕ್ಕಾಚಾರವಾಗಿತ್ತು. ಆದರೆ ಅವರನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಿದರೆ ಈಗಷ್ಟೇ ಮೀಸಲಾತಿ ಹೆಚ್ಚಳದಿಂದ ಸಮಾಧಾನಗೊಂಡಿರುವ ಪರಿಶಿಷ್ಟ ಪಂಗಡದಲ್ಲಿ ಆಕ್ರೋಶ ಕಾಣಿಸಿಕೊಳ್ಳಬಹುದು. ರಾಜ್ಯದ ಶೇಕಡಾ ಏಳರಷ್ಟು ಜನಸಂಖ್ಯೆ ಇರುವ ತಮಗೆ ಮೀಸಲಾತಿ ಪ್ರಮಾಣವನ್ನು ಹೆಚ್ಚಳ ಮಾಡಿರುವುದು ನ್ಯಾಯ.ಆದರೆ ಮೀಸಲಾತಿ ಪ್ರಮಾಣವನ್ನು ಹೆಚ್ಚಳಗೊಳಿಸಿ, ಶೇಕಡಾ ಎಂಟರಷ್ಟಿರುವ ಕುರುಬ ಸಮುದಾಯವನ್ನು ಪರಿಶಿಷ್ಟ ಪಂಗಡದ ಪಟ್ಟಿಗೆ ಸೇರಿಸಿದರೆ ಈಗಿರುವವರಿಗೆ ಅನ್ಯಾಯವಾಗುತ್ತದೆ. ಆಗ ಶೇಕಡಾ ಹದಿನೈದರಷ್ಟು ಜನ ಶೇಕಡಾ ಏಳರಷ್ಟು ಮೀಸಲಾತಿಗಾಗಿ ಪೈಪೋಟಿ ನಡೆಸಬೇಕಾಗುತ್ತದೆ.

2ನೇ ಟರ್ಮಿನಲ್ ಉದ್ಘಾಟನೆ

ಡಾ.ಸಿ.ಎನ್.ಅಶ್ವಥ ನಾರಾಯಣ ಕೆಂಪೇಗೌಡ ಅಭಿವೃದ್ಧಿ ಪ್ರಾಧಿಕಾರದ ಉಪಾಧ್ಯಕ್ಷರೂ ಆಗಿರುವ ಅವರು ನಿರ್ಮಲಾನಂದ ಶ್ರೀಗಳನ್ನು ಭೇಟಿ ಮಾಡಿ ಚರ್ಚೆ ನಡೆಸಿದರು. ನ.11ರಂದು ಕೆಂಪೇಗೌಡ ಏರ್‌ಪೋರ್ಟ್ ಮುಂದೆ ಸಮಾರಂಭ ನಡೆಯಲಿದ್ದು, ಪ್ರಧಾನಿ ನರೇಂದ್ರ ಮೋದಿ 108 ಅಡಿ ಎತ್ತರದ ಕೆಂಪೇಗೌಡ ಕಂಚಿನ ಪ್ರತಿಮೆಯನ್ನು ಅನಾವರಣಗೊಳಿಸಲಿದ್ದಾರೆ. ನ.11ರಂದು ಕೆಐಎಬಿ ಮುಂದೆ ಕೆಂಪೇಗೌಡರ ಪ್ರತಿಮೆ ಅನಾವರಣ ಹಿನ್ನೆಲೆಯಲ್ಲಿ ರಾಜ್ಯಾದ್ಯಂತ ಮೃತ್ತಿಕೆ ಸಂಗ್ರಹ ಅಭಿಯಾನಕ್ಕೆ ರಥಗಳು ಸಿದ್ಧವಾಗಿದ್ದು, ಅಕ್ಟೋಬರ್ 21ರಂದು ವಿಧಾನಸೌಧದ ಮುಂಭಾಗ ರಥಗಳಿಗೆ ಸಿಎಂ ಬೊಮ್ಮಾಯಿ ಚಾಲನೆ ನೀಡಲಿದ್ದಾರೆ. ಅಭಿಯಾನ ಯಶಸ್ವಿ ಆಗುವಂತೆ ವಿಧಾನಸೌಧದಲ್ಲಿ ನಿನ್ನೆ ನಡೆದ ಡಿಸಿಗಳ ಸಭೆಯಲ್ಲಿ ಸಿಎಂ ಸೂಚನೆ ನೀಡಿದ್ದಾರೆ. ಅಭಿಯಾನದ ಯಶಸ್ಸಿಗೆ ಎಲ್ಲರೂ ಸೂಕ್ತ ವ್ಯವಸ್ಥೆ ಮಾಡಬೇಕೆಂದು ಸೂಚನೆ ನೀಡಲಾಗಿದೆ.

ಈ ವಾರ ದೆಹಲಿಗೆ ಸಿಎಂ

ಈ ವಾರ ದೆಹಲಿಗೆ ಹೋಗಲಿರುವುದಾಗಿ ತಿಳಿಸಿದರು. ಸಂಪುಟ ವಿಸ್ತರಣೆ ಮುಖ್ಯಮಂತ್ರಿಗಳ ಪರಮಾಧಿಕಾರ ಎಂದು ರಾಜ್ಯ ಬಿಜೆಪಿಯ ಉಸ್ತುವಾರಿ ಹೊಣೆ ಹೊತ್ತ ಅರುಣ್ ಸಿಂಗ್ ಅವರು ಹೇಳಿರುವ ಕುರಿತು ಪ್ರತಿಕ್ರಿಯಿಸಿದ ಅವರು, ಈ ಕುರಿತು ದೆಹಲಿಗೆ ಹೋದಾಗ ವರಿಷ್ಠರ ಜತೆ ಚರ್ಚಿಸುವ ಇಂಗಿತ ವ್ಯಕ್ತಪಡಿಸಿದರು.

ಮಂತ್ರಿಗಿರಿಗಾಗಿ ಪಟ್ಟು ಹಿಡಿದಿರುವ ಮಾಜಿ ಸಚಿವ ರಮೇಶ್ ಜಾರಕಿಹೊಳಿ ಅವರು ಪಕ್ಷ ತೊರೆಯುವ ಬೆದರಿಕೆಯೊಡ್ಡಿದ್ದಾರೆ ಎಂದು ಸುದ್ದಿಗಾರರು ಕೇಳಿದ ಪ್ರಶ್ನೆಗೆ ಪ್ರತಿಕ್ರಿಯಿಸಿದ ಅವರು, ಪಾಪ, ಅವರು ಹಾಗೆ ಹೇಳಿಲ್ಲ ಎಂದರು.

ರಮೇಶ್ ಜಾರಕಿಹೊಳಿ ಅವರು ತಮ್ಮ ಕ್ಷೇತ್ರದ ಕೆಲಸಗಳ ಬಗ್ಗೆ ಮಾತನಾಡಲು ಬಂದಿದ್ದರು. ಅದನ್ನು ಹೊರತುಪಡಿಸಿದರೆ ಉಳಿದಂತೆ ಯಾವ ವಿಷಯವೂ ಚರ್ಚೆಯಾಗಿಲ್ಲ. ಅವರು ಕೂಡಾ ಪಕ್ಷ ತೊರೆಯುವುದಿಲ್ಲ ಎಂದು ವಿವರಿಸಿದರು.

ಕನ್ನಡಿಗ ರೋಜರ್ ಬಿನ್ನಿ ನೇಮಕ

ಬಿಸಿಸಿಐ ಅಧ್ಯಕ್ಷ ಸ್ಥಾನಕ್ಕೆ ನಾಮಪತ್ರ ಸಲ್ಲಿಸಿದ ಏಕೈಕ ಅಭ್ಯರ್ಥಿಯಾಗಿದ್ದರು. ಅಂತೆಯೆ ಜಯ್ ಶಾ ಬಿಸಿಸಿಐ ಕಾರ್ಯದರ್ಶಿಯಾಗಿ ಮುಂದುವರಿಯಲಿದ್ದಾರೆ. ಬಿಸಿಸಿಐನ ಹಾಲಿ ಅಧ್ಯಕ್ಷರಾದ ಸೌರವ್ ಗಂಗೂಲಿ ಅಂತರರಾಷ್ಟ್ರೀಯ ಕ್ರಿಕೆಟ್ ಮಂಡಳಿ (ಐಸಿಸಿ) ಅಧ್ಯಕ್ಷ ಸ್ಥಾನದ ಮೇಲೆ ಕಣ್ಣಿಟ್ಟಿದ್ದಾರೆ ಎಂಬ ಮಾತುಗಳು ಕೇಳಿಬರುತ್ತಿದೆ.

ರೋಜರ್ ಬಿನ್ನಿ ಈ ಹಿಂದೆ ಬಿಸಿಸಿಐ ಆಯ್ಕೆ ಸಮಿತಿಯ ಸದಸ್ಯರಾಗಿ ಸೇವೆ ಸಲ್ಲಿಸಿದ್ದರು. ಬಿಸಿಸಿಐ ಅಧ್ಯಕ್ಷ ಸ್ಥಾನಕ್ಕೆ ಅಕ್ಟೋಬರ್ 11 ಮತ್ತು 12 ರಂದು ಅಭ್ಯರ್ಥಿಗಳು ನಾಮಪತ್ರಗಳನ್ನು ಸಲ್ಲಿಸಿದ್ದರು. ಅಕ್ಟೋಬರ್ 13 ರಂದು ಎಲ್ಲಾ ನಾಮಪತ್ರಗಳ ಪರಿಶೀಲನೆ ಕಾರ್ಯ ಜರುಗಿತ್ತು. ಇಂದು ಮುಂಬೈನಲ್ಲಿ ಬಿಸಿಸಿಐ ಚುನಾವಣೆ ನಡೆದಿದ್ದು, ಇದರಲ್ಲಿ ರೋಜರ್ ಬಿನ್ನಿ ಅವರನ್ನು ನೂತನ ಬಿಸಿಸಿಐ ಅಧ್ಯಕ್ಷರಾಗಿ ಆಯ್ಕೆ ಮಾಡಲಾಗಿದೆ.

ಮೈಸೂರಲ್ಲಿ ಇಂದಿನಿಂದ 'ಬಿಗ್ ಟೆಕ್ ಶೋ–2022'

- ಎರಡು ದಿನ ವಿವಿಧ ಚರ್ಚಾ ಗೋಷ್ಠಿಗಳು, ವಾಕಥಾನ್ ಇನ್ನಿತರೆ ಕಾರ್ಯಕ್ರಮ
- ಡಿಜಿಟಲ್ ವ್ಯವಸ್ಥೆಯಲ್ಲಿ ಕರ್ನಾಟಕವನ್ನು ಜಾಗತಿಕ ಶಕ್ತಿಯಾಗಿ ಗಟ್ಟಿಗೊಳಿಸುವ ಪ್ರಯತ್ನ



ಮೈಸೂರು, ಅ.18(ಆರ್‌ಕೆಬಿ)– ಕರ್ನಾಟಕ ಸರ್ಕಾರದ ಕಾರ್ಯಕ್ರಮವಾದ ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್ (ಕೆಡಿಇಎಂ), ಇಡೀ ಕೈಗಾರಿಕಾ ಪರಿಸರ ವ್ಯವಸ್ಥೆಯನ್ನು ಒಟ್ಟುಗೂಡಿಸಿ, ಇಲ್ಲಿಯ ವರೆಗೆ ಸಾಧಿಸಿದ ಪ್ರಗತಿಯನ್ನು ಪ್ರದರ್ಶಿಸಲು ಮತ್ತು ಮೈಸೂರಿಗೆ ಮುಂದಿನ ಹಾದಿಯನ್ನು ರೂಪಿಸಲು ಅ.19 ಮತ್ತು 20ರಂದು ಮೈಸೂರಿನಲ್ಲಿ 'ಬಿಗ್ ಟೆಕ್ ಶೋ–2022'ರ 2ನೇ ಆವೃತ್ತಿಯನ್ನು ಆಯೋಜಿಸಿದೆ.

ಕೇಂದ್ರ ವಿದ್ಯುನ್ಮಾನ ಮತ್ತು ಮಾಹಿತಿ ತಂತ್ರಜ್ಞಾನ ರಾಜ್ಯ ಸಚಿವ ಮತ್ತು ಕೇಂದ್ರ ಕೌಶಲ್ಯ ಅಭಿವೃದ್ಧಿ ಮತ್ತು ಉದ್ಯಮಶೀಲತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್ ಅವರ ನೇತೃತ್ವದಲ್ಲಿ ಮೈಸೂರಿನ ರಾಡಿಸನ್ ಬ್ಲ್ಯೂ ಪ್ಲಾಜಾದಲ್ಲಿ ಈ ಟೆಕ್ ಶೋ ನಡೆಯಲಿದ್ದು, ಎರಡು ದಿನವೂ ಚರ್ಚಾ ಗೋಷ್ಠಿಗಳು, ವಾಕಥಾನ್ ಸೇರಿದಂತೆ ಇನ್ನಿತರೆ ಕಾರ್ಯಕ್ರಮಗಳನ್ನು ಏರ್ಪಡಿಸಲಾಗಿದೆ ಎಂದು ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್‌ನ ಸಿಇಓ ಸಂಜೀವ್ ಗುಪ್ತ ಇಂದಿಲ್ಲಿ ತಿಳಿಸಿದರು.

ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಸುದ್ದಿಗೋಷ್ಠಿಯಲ್ಲಿ ಬಿಗ್ ಟೆಕ್ ಶೋ ಕುರಿತು ಮಾಹಿತಿ ನೀಡಿದ ಅವರು, ಎಲೆಕ್ಟ್ರಾನಿಕ್ಸ್ ಸಿಸ್ಟಮ್ ವಿನ್ಯಾಸ ಮತ್ತು ಉತ್ಪಾದನೆ, ಸೈಬರ್ ಭದ್ರತೆ ಸೇರಿದಂತೆ ಸೆಮಿಕಾನ್‌ನ ಹೊಸ ಜಾಗತಿಕ ಕೇಂದ್ರವಾಗಿರುವ ಮೈಸೂರು, ಉದ್ಯಮದ ಪ್ರಮುಖರು, ಸ್ಟಾರ್ಟ್‌ಅಪ್‌ಗಳು ಮತ್ತು ವ್ಯವಹಾರಗಳ ಪ್ರದರ್ಶನಕ್ಕಾಗಿ ಸಂಪೂರ್ಣ ಪರಿಸರ ವ್ಯವಸ್ಥೆಯನ್ನು ಒಟ್ಟುಗೂಡಿಸುವ ಗುರಿಯನ್ನು ಈ ಎರಡು ದಿನಗಳ ಕಾರ್ಯಕ್ರಮ ಹೊಂದಿದೆ ಎಂದರು.

ಬಿಗ್ ಟೆಕ್ ಶೋನ ನಿರೀಕ್ಷಿತ ಪರಿಣಾಮ ಕುರಿತು ಮಾತನಾಡಿದ ಅವರು, ಕರ್ನಾಟಕ ಮತ್ತು ಅದರ ಸಮೂಹಗಳ ಪ್ರತಿಭಾ ಸಂಪತ್ತನ್ನು ಅಳವಡಿಸಿಕೊಳ್ಳುವುದು ನಮ್ಮ ಗುರಿಯಾಗಿದೆ. ಬೆಂಗಳೂರಿನ ಆಚೆಗೂ ವಿಸ್ತರಿಸುವುದು ನಮ್ಮ ದೃಷ್ಟಿಕೋನವಾಗಿದೆ. ಟೆಕ್ ಹಬ್ ಆಗಿ ಕರ್ನಾಟಕದ ಭವಿಷ್ಯಕ್ಕೆ ಹೆಚ್ಚಿನ ವೇಗವನ್ನು ನೀಡುವ ಕಲ್ಪನೆಗಳು, ಜನರು ಮತ್ತು ಅನುಕೂಲಕರ ಪರಿಸರವನ್ನು ಹೆಚ್ಚು ರೂಢಿಸುವುದು ಇದರ ಉದ್ದೇಶವೂ ಆಗಿದೆ ಎಂದು ಹೇಳಿದರು.

ಬಿಗ್ ಟೆಕ್ ಶೋ, ನಮ್ಮ ತಾಂತ್ರಿಕ ಶ್ರೇಷ್ಠತೆಯ ಗುರಿಗಳನ್ನು ಸಾಧಿಸುವ ಮಹತ್ವದ ಮೈಲಿಗಲ್ಲಾಗಲಿದೆ. ರಾಜ್ಯದಲ್ಲಿ ದೃಢವಾದ ಡಿಜಿಟಲ್ ಸಾಮರ್ಥ್ಯಗಳನ್ನು ನಿರ್ಮಿಸಲು ಹೆಚ್ಚಿನ ಕಂಪನಿಗಳು ಮುಂದೆ ಬರುವುದರೊಂದಿಗೆ ಮುಂಬರುವ ತಿಂಗಳುಗಳಲ್ಲಿ ಗಮನಾರ್ಹ ನಿರೀಕ್ಷೆಗಳನ್ನು ಹೊಂದಿದ್ದೇವೆ. ಡಿಜಿಟಲ್ ಆವಿಷ್ಕಾರದಲ್ಲಿ ಜಾಗತಿಕ ಶಕ್ತಿಯಾಗಿ ಕರ್ನಾಟಕದ ಪಾತ್ರವನ್ನು ಗಟ್ಟಿಗೊಳಿಸುವಲ್ಲಿ ಮೈಸೂರು ಕ್ಲಸ್ಟರ್ ಬೆಳವಣಿಗೆಯು ಮಹತ್ವದ ಪಾತ್ರವನ್ನು ವಹಿಸುತ್ತಿದೆ ಎಂದು ಹೇಳಿದರು.

ಎರಡು ದಿನಗಳ ಕಾರ್ಯಕ್ರಮದಲ್ಲಿ ಚರ್ಚಾಗೋಷ್ಠಿಗಳು, ವಾಕಥಾನ್, ವುಮೆನ್ @ ವರ್ಕ್ ಕಾನ್‌ಕ್ಲೇವ್, ಸ್ಟಾರ್ಟ್‌ಅಪ್ ಶೋಕೇಸ್, ಮೈಸೂರು ಬ್ಲ್ಯೂ ಸಿಇಒ ರೌಂಡ್ ಟೇಬಲ್, ಮುಖ್ಯ ಭಾಷಣಗಳು ಮತ್ತು ಹಲವು ವಿಷಯಗಳ ಮೇಲೆ ಚರ್ಚೆಗಳು ನಡೆಯಲಿವೆ ಎಂದರು.

ಎರಡು ದಿನವೂ ಬೆಳಗ್ಗೆ 9.30ರಿಂದ ಸಂಜೆ 7 ಗಂಟೆಯವರೆಗೆ ನಾನಾ ಕಾರ್ಯಕ್ರಮಗಳು ನಡೆಯಲಿದ್ದು, 19ರಂದು ಬೆಳಗ್ಗೆ 9.30ಕ್ಕೆ ಬಿಗ್‌ಟೆಕ್ ಶೋ ಉದ್ಘಾಟನೆಗೊಳ್ಳಲಿದೆ. ಕೇಂದ್ರ ಕೌಶಲ್ಯಾಭಿವೃದ್ಧಿ ಮತ್ತು ಉದ್ಯಮಶೀಲತೆ ರಾಜ್ಯ ಸಚಿವ ರಾಜೀವ್ ಚಂದ್ರಶೇಖರ್, ಉನ್ನತ ಶಿಕ್ಷಣ, ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಸಚಿವ ಡಾ.ಸಿ.ಎನ್. ಅಶ್ವತ್ಥನಾರಾಯಣ್, ಮೈಸೂರು ರಾಜವಂಶಸ್ಥ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಇನ್ನಿತರರು ಕಾರ್ಯಕ್ರಮದಲ್ಲಿ ಭಾಗವಹಿಸಲಿದ್ದಾರೆ. ಸೈಬರ್ ವರ್ಸ್ ಫೌಂಡೇಷನ್‌ನ ಅಧ್ಯಕ್ಷೆ ತ್ರಿಷಿಕಾಕುಮಾರಿ ಒಡೆಯರ್ ಮತ್ತು ಇನ್ನಿತರೆ ಹೆಸರಾಂತ ಮಹಿಳಾ ನಾಯಕರು ವುಮೆನ್ ಅಟ್ ವರ್ಕ್ ಕುರಿತು ಪ್ರಧಾನ ಭಾಷಣ ಮಾಡಲಿದ್ದಾರೆ. ಉದ್ಯಮ ದಿಗ್ಗಜರನ್ನು ಒಳಗೊಂಡ ತಾಂತ್ರಿಕ ಚರ್ಚೆಗಳು ನಡೆಯಲಿವೆ ಎಂದರು.

> ಬಿಗ್ ಟೆಕ್ ಶೋ, ನಮ್ಮ ತಾಂತ್ರಿಕ ಶ್ರೇಷ್ಠತೆಯ ಗುರಿಗಳನ್ನು ಸಾಧಿಸುವ ಮಹತ್ವದ ಮೈಲಿಗಲ್ಲಾಗಲಿದೆ. ರಾಜ್ಯದಲ್ಲಿ ದೃಢವಾದ ಡಿಜಿಟಲ್ ಸಾಮರ್ಥ್ಯಗಳನ್ನು ನಿರ್ಮಿಸಲು ಹೆಚ್ಚಿನ ಕಂಪನಿಗಳು ಮುಂದೆ ಬರುವುದರೊಂದಿಗೆ ಮುಂಬರುವ ತಿಂಗಳುಗಳಲ್ಲಿ ಗಮನಾರ್ಹ ನಿರೀಕ್ಷೆಗಳನ್ನು ಹೊಂದಿದ್ದೇವೆ. ಡಿಜಿಟಲ್ ಆವಿಷ್ಕಾರದಲ್ಲಿ ಜಾಗತಿಕ ಶಕ್ತಿಯಾಗಿ ಕರ್ನಾಟಕದ ಪಾತ್ರವನ್ನು ಗಟ್ಟಿಗೊಳಿಸುವಲ್ಲಿ ಮೈಸೂರು ಕ್ಲಸ್ಟರ್ ಬೆಳವಣಿಗೆಯು ಮಹತ್ವದ ಪಾತ್ರವನ್ನು ವಹಿಸುತ್ತಿದೆ.
> -ಸಂಜೀವ್ ಗುಪ್ತ, ಸಿಇಓ, ಕರ್ನಾಟಕ ಡಿಜಿಟಲ್ ಎಕಾನಮಿ ಮಿಷನ್

ಅ.20ರಂದು ಬೆಳಗ್ಗೆ 6.30ಕ್ಕೆ ಮೈಸೂರು ಅರಮನೆ ಬಳಿಯಿಂದ ವಾಕಥಾನ್ ನಡೆಯಲಿದೆ. ಟೆಕ್‌ಶೋನಲ್ಲಿ ಅನೇಕ ಗಣ್ಯರು, 50ಕ್ಕೂ ಹೆಚ್ಚು ಪ್ರತಿನಿಧಿಗಳು, 50ಕ್ಕೂ ಅಧಿಕ ಸ್ಟಾರ್ಟ್‌ಅಪ್ ಶೋಕೇಸ್, ಹೂಡಿಕೆದಾರರು ಇನ್ನಿತರರು ಭಾಗವಹಿಸಲಿದ್ದಾರೆ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಆಶಯ ಡಿಸೈನ್ ಸಲ್ಯುಷನ್ಸ್ ಸಂಸ್ಥಾಪಕ ಡಾ.ಮಹೇಶ್ ರಾವ್, ಪ್ರಸಾರ ಭಾರತಿಯ ಮಾಜಿ ಹೆಚ್ಚುವರಿ ನಿರ್ದೇಶಕರೂ ಆದ ವಾಯುಪಡೆ ನಿವೃತ್ತ ಅಧಿಕಾರಿ ಕ್ಯಾಪ್ಟನ್ ಆನಂದನಾಯ್ಡು, ರವಿಶಂಕರ್ ಉಪಸ್ಥಿತರಿದ್ದರು.

ಅ.21ರಂದು ರೇರಾ ಕಾಯ್ದೆ ಕುರಿತು ಕಾರ್ಯಾಗಾರ



ಮೈಸೂರು,ಅ.18(ಪಿಎಂ)– ಕ್ರೆಡಾಯ್ ಮೈಸೂರು ಘಟಕ, ಬಿಲ್ಡರ್ಸ್ ಅಸೋಸಿಯೇಷನ್ ಆಫ್ ಇಂಡಿಯಾ (ಬಿಎಐ) ಮೈಸೂರು ಘಟಕ ಹಾಗೂ ಕರ್ನಾಟಕ ರಿಯಲ್ ಎಸ್ಟೇಟ್ ನಿಯಂತ್ರಣ ಪ್ರಾಧಿಕಾರದ ಸಂಯುಕ್ತಾಶ್ರಯದಲ್ಲಿ ಅ.21ರಂದು ರೇರಾ ಕಾಯ್ದೆ ಕುರಿತು ಒಂದು ದಿನದ ಕಾರ್ಯಾಗಾರ ಆಯೋಜಿಸಲಾಗಿದೆ ಎಂದು ಕ್ರೆಡಾಯ್ ಮೈಸೂರು ಘಟಕದ ಉಪಾಧ್ಯಕ್ಷ ಶ್ರೀಹರಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮೈಸೂರಿನ ಜೆಪಿ ನಗರದ ಅಕ್ಕಮಹಾದೇವಿ ರಸ್ತೆಯಲ್ಲಿರುವ ಎಂಬಿಸಿಟಿ ಸಭಾಂಗಣದಲ್ಲಿ ಬೆಳಗ್ಗೆ 10ರಿಂದ ಸಂಜೆ 5ರವರೆಗೆ ಕಾರ್ಯಾಗಾರ ನಡೆಯಲಿದೆ. 9 ವಿಚಾರಗೋಷ್ಠಿಗಳು ನಡೆಯಲಿದ್ದು, ಪ್ರಾಧಿಕಾರದ ಅಧಿಕಾರಿಗಳು ವಿಚಾರ ಮಂಡಿಸಲಿದ್ದಾರೆ. ಬೆಳಗ್ಗೆ 10ಕ್ಕೆ ಕಾರ್ಯಾಗಾರದ ಉದ್ಘಾಟನಾ ಸಮಾರಂಭ ನಡೆಯಲಿದೆ ಎಂದರು.

ಕಾರ್ಯಾಗಾರದಲ್ಲಿ ಪ್ರಾಧಿಕಾರದ ಅಧ್ಯಕ್ಷ ಹೆಚ್.ಎಸ್.ಕಿಶೋರ್ ಚಂದ್ರ, ಕಾರ್ಯದರ್ಶಿ ಇಬ್ರಾಹಿಂ ಮೈಗೂರ್, ಮುಡಾ ಆಯುಕ್ತ ಜಿ.ಟಿ.ದಿನೇಶ್ ಕುಮಾರ್, ಪಾಲಿಕೆ ಆಯುಕ್ತ ಲಕ್ಷ್ಮೀಕಾಂತ ರೆಡ್ಡಿ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಹಾಗೂ ಮುಖ್ಯಸ್ಥರು ಪಾಲ್ಗೊಳ್ಳಲಿದ್ದಾರೆ. ಮೈಸೂರು, ಚಾಮರಾಜನಗರ, ಹಾಸನ, ಕೊಡಗು ಮತ್ತು ಮಂಡ್ಯ ಜಿಲ್ಲೆಗಳ ಖಾಸಗಿ ವಸತಿ ಬಡಾವಣೆ ಅಭಿವೃದ್ಧಿದಾರರು, ಅಪಾರ್ಟ್‌ಮೆಂಟ್ ನಿರ್ಮಾಣಗಾರರು ಭಾಗವಹಿಸಬಹುದು. ಆ ಮೂಲಕ ರೇರಾ ಕಾಯ್ದೆ ಬಗ್ಗೆ ಮಾಹಿತಿ ಪಡೆಯಬಹುದು ಎಂದು ತಿಳಿಸಿದರು.

ಭಾಗವಹಿಸಲು ಗೂಗಲ್ ಫಾರಂ ಆಧಾರಿತ ನೋಂದಣಿ ಕಡ್ಡಾಯವಾಗಿದೆ. ವಿವಿಧ ಪ್ರಶ್ನೆಗಳನ್ನು ನೋಂದಣಿ ಸಂದರ್ಭದಲ್ಲಿ ಸಲ್ಲಿಸಬೇಕಾಗುತ್ತದೆ. ನೋಂದಣಿ ಉಚಿತವಿದ್ದು, ಹೆಚ್ಚಿನ ವಿವರಗಳಿಗೆ ಮೊ.ಸಂ. 70193 05529 ಅಥವಾ 63663 51290 ಅನ್ನು ಸಂಪರ್ಕಿಬಹುದು ಎಂದು ಹೇಳಿದರು. ಬಿಎಐ ಮೈಸೂರು ಘಟಕದ ಅಧ್ಯಕ್ಷ ರಘುನಾಥ್, ಕ್ರೆಡಾಯ್ ಮೈಸೂರು ಘಟಕದ ಖಜಾಂಚಿ ಅರುಣ್ ಪಂಡಿತ್, ಸದಸ್ಯ ಡಿ.ಶ್ರೀರಾಮ್ ಗೋಷ್ಠಿಯಲ್ಲಿದ್ದರು.

ಆಕಸ್ಮಿಕ ಬೆಂಕಿ: ಬಾಲಕ ಸಾವು

ಮೈಸೂರು, ಅ.18(ಆರ್‌ಕೆ)–ಆಟವಾಡುತ್ತಿದ್ದಾಗ ಆಕಸ್ಮಿಕವಾಗಿ ಬೆಂಕಿ ತಗುಲಿ ತೀವ್ರ ಸುಟ್ಟಗಾಯಗಳಾಗಿದ್ದ ಬಾಲಕ ಸಾವನ್ನಪ್ಪಿದ್ದಾನೆ. ಈ ಘಟನೆ ಪಾಂಡವಪುರ ತಾಲೂಕು, ಕಸಬಾ ಹೋಬಳಿ, ಶಂಭುನಹಳ್ಳಿ ಗ್ರಾಮದಲ್ಲಿ ಸಂಭವಿಸಿದೆ.



ರಾಜು ಎಂಬುವರ ಪುತ್ರ ಎಂ.ಆರ್.ಯಶವಂತ್(13) ಸಾವನ್ನಪ್ಪಿದ ಬಾಲಕ. ಶಂಭುನಹಳ್ಳಿ ಗ್ರಾಮದ ಅಜ್ಜಿ ಮನೆಯಲ್ಲಿದ್ದ ಆತ, ಅಲ್ಲಿನ ಹಾಲು ಉತ್ಪಾದಕರ ಸಹಕಾರ ಸಂಘದ ಆವರಣದಲ್ಲಿ ಹುಟ್ಟುಹಬ್ಬ ಆಚರಣೆ ವೇಳೆ ಬಳಸುವ ಸ್ಪ್ರೇಯೊಂದಿಗೆ ಆಟವಾಡುತ್ತಿದ್ದಾಗ ಭಾನುವಾರ ಬೆಳಗ್ಗೆ ಆಕಸ್ಮಿಕವಾಗಿ ಬೆಂಕಿ ಹೊತ್ತಿಕೊಂಡ ಪರಿಣಾಮ ಸುಟ್ಟಗಾಯಗಳಾಗಿತ್ತು. ತಕ್ಷಣ ಆತನನ್ನು ಪಾಂಡವಪುರ ಸಾರ್ವಜನಿಕ ಆಸ್ಪತ್ರೆಗೆ ಕರೆದೊಯ್ದು ಪ್ರಥಮ ಚಿಕಿತ್ಸೆ ಕೊಡಿಸಿದ ಬಳಿಕ ಹೆಚ್ಚಿನ ಚಿಕಿತ್ಸೆಗಾಗಿ ಮೈಸೂರಿನ ಕೆ.ಆರ್.ಆಸ್ಪತ್ರೆಗೆ ದಾಖಲಿಸಲಾಗಿತ್ತಾದರೂ, ಚಿಕಿತ್ಸೆ ಫಲಕಾರಿಯಾಗದೇ ಬಾಲಕ ಇಂದು ಬೆಳಗ್ಗೆ 6.30 ಗಂಟೆಗೆ ಕೊನೆಯುಸಿರೆಳೆದ.

ಪ್ರಕರಣ ದಾಖಲಿಸಿಕೊಂಡಿರುವ ಪಾಂಡವಪುರ ಠಾಣೆ ಇನ್ಸ್‌ಪೆಕ್ಟರ್ ಹೆಚ್.ಆರ್. ವಿವೇಕಾನಂದ ಅವರು, ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಮರಣೋತ್ತರ ಪರೀಕ್ಷೆ ನಂತರ ವಾರಸುದಾರರಿಗೆ ಮೃತದೇಹ ಒಪ್ಪಿಸಿದರು.

ಬೈಕ್‌ಗಳ ಮುಖಾಮುಖಿ ಡಿಕ್ಕಿ: ಯುವಕ ಸಾವು

ಮೈಸೂರು, ಅ. 18 (ಆರ್‌ಕೆ)– ಎರಡು ಬೈಕ್‌ಗಳ ನಡುವೆ ಡಿಕ್ಕಿ ಸಂಭವಿಸಿ ಯುವಕ



ಸಾವನ್ನಪ್ಪಿರುವ ಘಟನೆ ಪಾಂಡವಪುರ ತಾಲೂಕು ಕ್ಯಾತನಹಳ್ಳಿಯಲ್ಲಿ ಸಂಭವಿಸಿದೆ. ತಾಲೂಕಿನ ಹೊಸಬಲೆಕೆರೆ ಗ್ರಾಮದ ನಿವಾಸಿ ಕೆಂಪೇಗೌಡರ ಮಗ ಕೆ. ಅಭಿಷೇಕ್ (23) ಸಾವನ್ನಪ್ಪಿದ ಯುವಕ. ಕ್ಯಾತನಹಳ್ಳಿಯ ಕೆಇಬಿ ಕಚೇರಿ ರಸ್ತೆಯಲ್ಲಿ ಹೋಗುತ್ತಿದ್ದಾಗ ಎದುರಿನಿಂದ ಬಂದ ಮತ್ತೊಂದು ಬೈಕು ಭಾನುವಾರ ಸಂಜೆ 7 ಗಂಟೆ ವೇಳೆ ಡಿಕ್ಕಿ ಹೊಡೆಯಿತು. ತೀವ್ರವಾಗಿ ಗಾಯಗೊಂಡಿದ್ದ ಅಭಿಷೇಕ್‌ನನ್ನು ಮೈಸೂರಿನ ಖಾಸಗಿ ಆಸ್ಪತ್ರೆಗೆ ದಾಖಲು ಮಾಡಲಾಯಿತಾದರೂ ಚಿಕಿತ್ಸೆ ಫಲಕಾರಿಯಾಗದೆ ಸೋಮವಾರ ಸಂಜೆ 4 ಗಂಟೆ ವೇಳೆ ಕೊನೆಯುಸಿರೆಳೆದ ಎಂದು ಪ್ರಕರಣ ದಾಖಲಿಸಿಕೊಂಡಿರುವ ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆ ಪೊಲೀಸರು ತಿಳಿಸಿದ್ದಾರೆ.

ಮೈಸೂರು ಮೆಡಿಕಲ್ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಶವಾಗಾರದಲ್ಲಿ ಇಂದು ಮರಣೋತ್ತರ ಪರೀಕ್ಷೆ ನಡೆಸಿದ ನಂತರ ಮೃತದೇಹವನ್ನು ವಾರಸುದಾರರಿಗೆ ಒಪ್ಪಿಸಲಾಯಿತು. ಎರಡೂ ಬೈಕುಗಳನ್ನು ವಶಕ್ಕೆ ಪಡೆದಿರುವ ಶ್ರೀರಂಗಪಟ್ಟಣ ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಬಿ.ಜಿ. ಕುಮಾರ್ ತನಿಖೆ ನಡೆಸುತ್ತಿದ್ದಾರೆ.

ಕರ್ನಾಟಕ ಯುವ ಸಂಘ ಸಂಸ್ಥೆಗಳ ಒಕ್ಕೂಟ ಅಸ್ತಿತ್ವಕ್ಕೆ



ಮೈಸೂರು,ಅ.18(ಪಿಎಂ)– ಯುವ ಸಂಘ–ಸಂಸ್ಥೆಗಳಿಗೆ ಉತ್ತೇಜನ ನೀಡುವ ಉದ್ದೇಶದಿಂದ 'ಕರ್ನಾಟಕ ಯುವ ಸಂಘ–ಸಂಸ್ಥೆಗಳ ಒಕ್ಕೂಟ'ವನ್ನು ಅಸ್ತಿತ್ವಕ್ಕೆ ತರಲಾಗಿದೆ ಎಂದು ಒಕ್ಕೂಟದ ಅಧ್ಯಕ್ಷ ಹೆಚ್.ಎಂ.ಶಿವಕುಮಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಸಾಮಾಜಿಕ ಮತ್ತು ಸಾಂಸ್ಕೃತಿಕ ಸೇರಿದಂತೆ ವಿವಿಧ ಆಯಾಮಗಳಲ್ಲಿ ಯುವ ಚಟುವಟಿಕೆಗಳಿಗೆ ಪ್ರೋತ್ಸಾಹ ನೀಡುವ ನಿಟ್ಟಿನಲ್ಲಿ ಒಕ್ಕೂಟ ಸ್ಥಾಪಿಸಲಾಗಿದೆ. ಕಳೆದ ಒಂದು ದಶಕದಿಂದ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಿಂದ ಯುವ ಸಂಘಟನೆಗಳಿಗೆ ಯಾವುದೇ ಉತ್ತೇಜನ ಮತ್ತು ಅನುದಾನ ನೀಡಿಲ್ಲ. ಇದರಿಂದ ಸಂಘ–ಸಂಸ್ಥೆಗಳು ನಿಷ್ಕ್ರಿಯವಾಗುತ್ತಿವೆ. ಇವುಗಳನ್ನು ಕ್ರಿಯಾಶೀಲಗೊಳಿಸುವ ನಿಟ್ಟಿನಲ್ಲಿ ಒಕ್ಕೂಟ ಚಟುವಟಿಕೆ ರೂಪಿಸಲಾಗುವುದು ಎಂದರು.

ಇಲಾಖೆಯಿಂದ ನೀಡುತ್ತಿದ್ದ ಜಿಲ್ಲಾ ಹಾಗೂ ರಾಜ್ಯ ಯುವ ಪ್ರಶಸ್ತಿ ಸ್ಥಗಿತಗೊಳಿಸಿದ್ದು, ಅದನ್ನು ಮುಂದುವರೆಸಬೇಕು. ಇಲಾಖೆಯಿಂದ ಗ್ರಾಮೀಣ ಕ್ರೀಡೋತ್ಸವ, ಯುವ ಚೇತನ, ಯುವ ಪ್ರೇರಣ ಹಾಗೂ ಯುವ ಸಂವಹನ ಕಾರ್ಯಕ್ರಮಗಳನ್ನು ಮುಂದುವರೆಸಬೇಕು. ಯುವ ಸಂಘ–ಸಂಸ್ಥೆಗಳನ್ನು ಜಿಲ್ಲಾ ನೋಂದಣಾಧಿಕಾರಿಗಳ ಕಚೇರಿಯಲ್ಲಿ ನೋಂದಣಿ ಮಾಡಬೇಕೆಂಬ ನಿಯಮ ಸಡಿಲಗೊಳಿಸಿ, ಈ ಹಿಂದಿನಂತೆ ಯುವ ಸಬಲೀಕರಣ ಮತ್ತು ಕ್ರೀಡಾ ಇಲಾಖೆಯಲ್ಲಿ ನೋಂದಾಯಿಸಿ ಕಾರ್ಯ ಚಟುವಟಿಕೆ ನಡೆಸಲು ಅವಕಾಶ ಕಲ್ಪಿಸಬೇಕು ಎಂದು ಒತ್ತಾಯಿಸಿದರು. ಒಕ್ಕೂಟದ ಗೌರವಾಧ್ಯಕ್ಷ ವಿಜಯಕುಮಾರ್ ಸೊನಾರೆ, ಪ್ರಧಾನ ಕಾರ್ಯದರ್ಶಿ ಡಿ.ಪಣೀಂದ್ರ ಪ್ರಸಾದ್, ಪದಾಧಿಕಾರಿಗಳಾದ ಸುಮಂತ್ ವಶಿಷ್ಠ, ಸತೀಶ್‌ಮೇಕ್ರಿ, ಪ್ರೇಮ್‌ಕುಮಾರ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ಇಂದು ಕೆಲವೆಡೆ ವಿದ್ಯುತ್ ವ್ಯತ್ಯಯ

ಮೈಸೂರು, ಅ.18– ಚಾಮುಂಡೇಶ್ವರಿ ವಿದ್ಯುತ್ ಸರಬರಾಜು ನಿಗಮ ಮತ್ತು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ ವತಿಯಿಂದ ವಿದ್ಯುತ್ ಸುಧಾರಣಾ ಕಾಮಗಾರಿಯನ್ನು ಕೈಗೊಂಡಿರುವುದರಿಂದ ಬುಧವಾರ (ಅ.19) ನಗರದ ತೇಜು ಕಾರ್ನರ್ ಸುತ್ತಮುತ್ತ, 80 ಅಡಿ ರಸ್ತೆ, ಮೈಲಾರಿ ಹೋಟೆಲ್, ಮರಿಮಲ್ಲಪ್ಪ ಶಾಲೆ ಸುತ್ತಮುತ್ತ, ವಿಜಯನಗರ ಬಸ್ ಡಿಪೋ, ಚಾಮುಂಡೇಶ್ವರಿ ಸರ್ಕಲ್, ಹೈಟೆನ್ಷನ್ ಲೈನ್, ಸಂಕಲ್ಪ ಅಪಾರ್ಟ್‌ಮೆಂಟ್ ಹಿಂಭಾಗ, ಅಂಚೆ ಕಚೇರಿ ರಸ್ತೆ ಸುತ್ತಮುತ್ತ, ಬಿ.ಎಸ್. ಎನ್.ಎಲ್.ಟವರ್ ಹಿಂಭಾಗ ಹಾಗೂ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಬೆಳಗ್ಗೆ 10 ಗಂಟೆಯಿಂದ ಸಂಜೆ 5. 30 ಗಂಟೆಯವರೆಗೆ ವಿದ್ಯುತ್ ವ್ಯತ್ಯಯವಾಗಲಿದೆ ಎಂದು ವಿ.ವಿ ಮೊಹಲ್ಲಾ ವಿಭಾಗದ, ಕಾರ್ಯನಿರ್ವಾಹಕ ಇಂಜಿನಿಯರ್(ವಿ) ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಅ.21ರಂದು 'ಕಥಾಲೇಖನ' ತೆರೆಗೆ




ಮೈಸೂರು,ಅ.18(ಪಿಎಂ)– 'ಕಥಾಲೇಖನ' ಕನ್ನಡ ಸಿನಿಮಾ ಅ.21ರಂದು ರಾಜ್ಯಾದ್ಯಂತ ಬಿಡುಗಡೆಯಾಗಲಿದೆ ಎಂದು ಸಿನಿಮಾದ ನಿರ್ಮಾಪಕ ಗೋಪಾಲ್ ಕುಲಕರ್ಣಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಜಿಕೆ ಎಂಟರ್ಟೈನ್‌ಮೆಂಟ್ ಬ್ಯಾನರ್‌ನಡಿ ಈ ಸಿನಿಮಾ ನಿರ್ಮಾಣಗೊಂಡಿದೆ. ರಿವೆಂಜ್ ಲವ್ ಕತೆಯನ್ನು ಒಳಗೊಂಡಿರುವ ಈ ಚಿತ್ರವು ಸಸ್ಪೆನ್ಸ್, ಥ್ರಿಲ್ಲರ್ ಒಳಗೊಂಡಿದೆ. ಕುಟುಂಬ ಸಮೇತರಾಗಿ ನೋಡುವಂತಹ ಒಳ್ಳೆಯ ಚಿತ್ರ ಇದಾಗಿದೆ ಎಂದು ವಿವರಿಸಿದರು. ಸಿನಿಮಾದ ನಿರ್ದೇಶಕ ಸತ್ಯರತ್ನಂ, ನಾಯಕ ನಟ ಅರ್ಫತ್, ನಾಯಕಿ ಕಾವ್ಯಭಗವಂತ, ನಟ ಪಲ್ಲಿ ಗೋವಿಂದ್ ಮತ್ತಿತರರು ಗೋಷ್ಠಿಯಲ್ಲಿದ್ದರು.

ಶ್ರೀ ಹಿಮವದ್ ಗೋಪಾಲಸ್ವಾಮಿ ಬೆಟ್ಟಕ್ಕೆ ವಿದ್ಯುತ್ ಸಂಪರ್ಕ

ಮುಜರಾಯಿ ಇಲಾಖೆ ಅಸಹಕಾರ; ಕಾಮಗಾರಿ ನೆನೆಗುದಿಗೆ



ಮೈಸೂರು,ಅ.18(ಪಿಎಂ)– ಚಾಮರಾಜನಗರ ಜಿಲ್ಲೆಯ ಶ್ರೀ ಹಿಮವದ್ ಗೋಪಾಲಸ್ವಾಮಿ ಬೆಟ್ಟಕ್ಕೆ ಹೊಸದಾಗಿ ವಿದ್ಯುತ್ ಸಂಪರ್ಕ ಕಲ್ಪಿಸಬೇಕೆಂಬ ನನ್ನ ಕೋರಿಕೆಗೆ ಸರ್ಕಾರ ಸ್ಪಂದಿಸಿದ್ದು, ಆಡಳಿತಾತ್ಮಕ ಅನುಮೋದನೆ ನೀಡುವ ಪ್ರಕ್ರಿಯೆ ಪ್ರಗತಿಯಲ್ಲಿದೆ. ಆದರೆ ಮುಜರಾಯಿ ಇಲಾಖೆಯ ಅಸಹಕಾರದಿಂದ ಆಡಳಿತಾತ್ಮಕ ಅನುಮೋದನೆ ಪಡೆಯಲು ಅಡ್ಡಿಯುಂಟಾಗಿದೆ ಎಂದು ಪ್ರಥಮ ದರ್ಜೆ ವಿದ್ಯುತ್ ಗುತ್ತಿಗೆದಾರ ಆರ್.ಶ್ರೀಪಾಲ್ ಆರೋಪಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಗುಂಡ್ಲುಪೇಟೆ ತಾಲೂಕು ಹಂಗಳ ಗ್ರಾಮದಲ್ಲಿರುವ ಶ್ರೀ ಹಿಮವದ್ ಗೋಪಾಲಸ್ವಾಮಿ ಬೆಟ್ಟಕ್ಕೆ 800 ವರ್ಷಗಳ ಇತಿಹಾಸವಿದ್ದು, ಇಲ್ಲಿಗೆ ಮೂಲಭೂತ ಸೌಲಭ್ಯವಾದ ವಿದ್ಯುತ್ ಸಂಪರ್ಕ ಕಲ್ಪಿಸಲು ಮುಜರಾಯಿ ಇಲಾಖೆ ಸಚಿವರು ಹಾಗೂ ಗುಂಡ್ಲುಪೇಟೆ ತಹಸೀಲ್ದಾರ್ ಮೀನಾಮೇಷ ಎಣಿಸುತ್ತಿದ್ದಾರೆ ಎಂದು ದೂರಿದರು.

ಸದರಿ ಬೆಟ್ಟದ ಮೇಲೆ ವಿದ್ಯುತ್ ಸಂಪರ್ಕ ಇಲ್ಲದೇ ಇರುವ ಹಿನ್ನೆಲೆಯಲ್ಲಿ ಸರ್ಕಾರದ ಮನವೊಲಿಸಿ ವಿದ್ಯುತ್ ಸಂಪರ್ಕ ಕಲ್ಪಿಸುವ ಹರಕೆ ಮಾಡಿಕೊಂಡಿದ್ದೆ. ಈ ಹಿನ್ನೆಲೆಯಲ್ಲಿ ರಾಷ್ಟ್ರಪತಿಗಳು, ಪ್ರಧಾನಿಗಳು, ರಾಜ್ಯಪಾಲರು, ಮುಖ್ಯಮಂತ್ರಿಗಳು, ಇಂಧನ ಸಚಿವರು, ಚಾಮರಾಜನಗರ ಜಿಲ್ಲಾ ಉಸ್ತುವಾರಿ ಸಚಿವರು, ಕ್ಷೇತ್ರದ ಸಂಸದರು, ಶಾಸಕರಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಮನವಿ ಸಲ್ಲಿಸಿದ್ದೆ. ಅಲ್ಲದೆ, ಅಗತ್ಯ ಸಾಮಗ್ರಿ ಒದಗಿಸಿಕೊಟ್ಟಲ್ಲಿ ನನ್ನ ಹರಕೆ ಇರುವ ಕಾರಣ ಯಾವುದೇ ಸಂಭಾವನೆ ಇಲ್ಲದೇ ಕಾಮಗಾರಿ ನಿರ್ವಹಿಸಲು ಸಿದ್ಧವಿದ್ದೇನೆ ಎಂದೂ ಮನವಿಯಲ್ಲಿ ತಿಳಿಸಿದ್ದೆ ಎಂದರು.

ಇದಕ್ಕೆ ಮುಖ್ಯಮಂತ್ರಿಗಳು ಸೇರಿದಂತೆ ಎಲ್ಲರೂ ಸ್ಪಂದಿಸಿದರು. ಚೆಸ್ಕಾಂ ಮೈಸೂರು ವ್ಯವಸ್ಥಾಪಕ ನಿರ್ದೇಶಕರಿಗೆ ವಿದ್ಯುತ್ ಸಂಪರ್ಕ ಕಲ್ಪಿಸಲು ಕ್ರಮ ವಹಿಸಲು ಸರ್ಕಾರ ನಿರ್ದೇಶನ ನೀಡಿತು. ಅದರಂತೆ ಒಟ್ಟು 3.21 ಕೋಟಿ ರೂ. ಮೊತ್ತದ ಅಂದಾಜು ಪಟ್ಟಿಯನ್ನು ಚೆಸ್ಕಾಂ ತಯಾರಿಸಿದೆ. ಚೆಸ್ಕಾಂನಲ್ಲಿ ಪರಿವರ್ತಕಗಳು ಇಲ್ಲದ ಕಾರಣ ಸ್ವಯಂ ಕಾರ್ಯನಿರ್ವಹಣೆಯಲ್ಲಿ ಮುಜರಾಯಿ ಇಲಾಖೆ ಮಾಡಿಕೊಳ್ಳಲು ಕೋರಲಾಗಿದೆ. ವಿದ್ಯುತ್ ಪರಿವರ್ತಕ ಸೇರಿದಂತೆ ಎಲ್‌ಟಿ ಲೈನ್‌ಗಳ 8.21 ಲಕ್ಷ ರೂ. ವೆಚ್ಚವನ್ನು ಮುಜರಾಯಿ ಇಲಾಖೆ ವತಿಯಿಂದ ಸ್ವಯಂ ಕಾರ್ಯನಿರ್ವಹಣೆ ಯೋಜನೆಯಡಿ ಭರಿಸಲು ಚೆಸ್ಕಾಂನಿಂದ ಕೋರಲಾಗಿದೆ ಎಂದು ವಿವರಿಸಿದರು.

ಆದರೆ ಈ ಸಂಬಂಧ ಗುಂಡ್ಲುಪೇಟೆ ತಹಸೀಲ್ದಾರ್ ಅವರು ನಿರ್ದೇಶನ ಕೋರಿ ಚಾಮರಾಜನಗರ ಜಿಲ್ಲಾಧಿಕಾರಿಗಳಿಗೆ ಪತ್ರ ಬರೆದಿದ್ದು, ಜಿಲ್ಲಾಧಿಕಾರಿಗಳು ಇಲಾಖೆ ಆಯುಕ್ತರಿಗೆ ನಿರ್ದೇಶನ ಕೋರಿ ಪತ್ರ ಬರೆದಿದ್ದಾರೆ. ಆಯುಕ್ತರು ಇಲಾಖೆ ಸಚಿವರಿಗೆ ಪತ್ರ ಬರೆದಿದ್ದು, 8.21 ಲಕ್ಷ ರೂ. ಮೊತ್ತ ಭರಿಸಲು ಮೀನಾಮೇಷ ಎಣಿಸುತ್ತಿದ್ದಾರೆ. ಸಚಿವರನ್ನು ಖುದ್ದು ಭೇಟಿ ಮಾಡಲು ವಿಧಾನಸೌಧಕ್ಕೆ ಹೋಗಿದ್ದೆ. ಆದರೆ ಅವರು ಸಿಗಲಿಲ್ಲ. ಹೀಗಾಗಿ ಈ ಅಭಿವೃದ್ಧಿ ಕಾರ್ಯ ಸ್ಥಗಿತಗೊಳ್ಳುವ ಆತಂಕ ಎದುರಾಗಿದೆ ಎಂದರು. ಕನ್ನಡಪರ ಹೋರಾಟಗಾರ ಭೋಗನಂದೀಶ್, ಮುಖಂಡರಾದ ಸುಬ್ಬೇಗೌಡ, ಸೋಮಶೇಖರ್ ಗೋಷ್ಠಿಯಲ್ಲಿದ್ದರು.

ಮೈಸೂರು ಮಿತ್ರ

ಹೊಸಹಳ್ಳಿ ಹಾಡಿ ಆದಿವಾಸಿ ಕರಿಯಪ್ಪನ ಸಾವು ಪ್ರಕರಣ

ತಪ್ಪಿತಸ್ಥ ಅರಣ್ಯಾಧಿಕಾರಿಗಳ ಅಮಾನತಿಗೆ ಆಗ್ರಹ

ಸಂತ್ರಸ್ತ ಕುಟುಂಬಕ್ಕೆ ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಸಾಂತ್ವನ

ಹೆಚ್.ಡಿ.ಕೋಟೆ, ಅ.18– ತಾಲೂಕಿನ ಎನ್.ಬೇಗೂರು ಅರಣ್ಯ ವಲಯದ ಹೊಸಹಳ್ಳಿ ಹಾಡಿ ಆದಿವಾಸಿ ಜೇನು ಕುರುಬ ಜನಾಂಗದ ಕರಿಯಪ್ಪನ ಸಾವಿಗೆ ಕಾರಣರಾದ ತಪ್ಪಿತಸ್ಥ ಅರಣ್ಯ ಇಲಾಖೆ ಅಧಿಕಾರಿಗಳನ್ನು ಸೇವೆಯಿಂದ ಅಮಾನತು ಗೊಳಿಸಬೇಕು ಎಂದು ಕೆಪಿಸಿಸಿ ಕಾರ್ಯಾಧ್ಯಕ್ಷ ಆರ್.ಧ್ರುವನಾರಾಯಣ್ ಆಗ್ರಹಿಸಿದರು.

ತಾಲೂಕಿನ ಹೊಸಹಳ್ಳಿ ಹಾಡಿಗೆ ಮಂಗಳವಾರ ಭೇಟಿ ನೀಡಿ ಕರಿಯಪ್ಪನ ಕುಟುಂಬದವರಿಗೆ ಸಾಂತ್ವನ ಹೇಳಿ, ವೈಯಕ್ತಿಕವಾಗಿ ಧನಸಹಾಯ ಮಾಡಿ ಅವರು ಮಾತನಾಡಿದರು.

ಆದಿವಾಸಿ ಕರಿಯಪ್ಪನ ಸಾವಿಗೆ ಕಾರಣರಾದ ಅರಣ್ಯಾಧಿಕಾರಿಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಬೇಕು. ಪೊಲೀಸ್ ಠಾಣೆಯಲ್ಲಿ ಎಫ್‌ಐಆರ್ ದಾಖಲಾದ ತಕ್ಷಣ ಅವರನ್ನು ಸೇವೆಯಿಂದ ಅಮಾನತು ಮಾಡುವಂತೆ ಸರ್ಕಾರವನ್ನು ಒತ್ತಾಯಿಸಿದ ಅವರು, ಘಟನೆ ನಡೆದು 10 ದಿನ ಕಳೆದರೂ, ಅರಣ್ಯ ಇಲಾಖೆ ಅಧಿಕಾರಿಗಳ ವಿರುದ್ಧ ಯಾವುದೇ ಕ್ರಮ ಕೈಗೊಳ್ಳದಿರುವುದು ಅನುಮಾನಕ್ಕೆ ಎಡೆ ಮಾಡಿಕೊಟ್ಟಿದೆ ಎಂದರು.



ಅರಣ್ಯದೊಂದಿಗೆ ಉತ್ತಮ ಸಂಬಂಧವಿಟ್ಟುಕೊಂಡು, ಅರಣ್ಯ ರಕ್ಷಣೆ ಮಾಡಿಕೊಂಡು ಬಂದಿರುವ ಅಮಾಯಕ ಗಿರಿಜನರ ಮೇಲೆ ಅರಣ್ಯ ಇಲಾಖೆಯವರು ದೌರ್ಜನ್ಯ ನಡೆಸಿರುವುದು ಖಂಡನೀಯ ಎಂದರು.

ಅರಣ್ಯ ಇಲಾಖೆಯವರು ಆದಿವಾಸಿಗಳ ಮನೆಗಳಿಗೆ ನುಗ್ಗಿ ಮಹಿಳೆಯರು, ಮಕ್ಕಳೆನ್ನದೆ ದೌರ್ಜನ್ಯ ನಡೆಸುತ್ತಾರೆ. ಇದರಿಂದ ಆದಿವಾಸಿಗಳು ಆತಂಕಕ್ಕೆ ಒಳಗಾಗಿದ್ದಾರೆ. ಹೀಗಾಗಿ ಜಿಲ್ಲಾಧಿಕಾರಿಗಳು ಅರಣ್ಯ ಇಲಾಖೆ ಹಾಗೂ ಬುಡಕಟ್ಟು ಸಮುದಾಯದ ಮುಖಂಡರ ಸಭೆ ಕರೆದು ಆದಿವಾಸಿಗಳಲ್ಲಿರುವ ಭಯವನ್ನು ನಿರ್ಮೂಲನೆ ಮಾಡಬೇಕು. ಆದಿವಾಸಿಗಳು ನೆಮ್ಮದಿಯಿಂದ ಬದುಕಲು ಅವಕಾಶ ಮಾಡಿಕೊಡಬೇಕು ಎಂದರು.

ಯಾರು ಏನೇ ತಪ್ಪು ಮಾಡಿದರೂ, ಶಿಕ್ಷೆ ನೀಡಲು ಕಾನೂನು ಇದೆ. ಅರಣ್ಯ ಇಲಾಖೆಯವರು ತಪ್ಪು ಮಾಡಿದವರನ್ನು ಹಿಡಿದು, ಬಡಿದು ಹೊಡೆಯುವುದು ಸರಿಯಲ್ಲ. ಅರಣ್ಯಾಧಿಕಾರಿಗಳು ಕರಿಯಪ್ಪನನ್ನು ವಶಕ್ಕೆ ಪಡೆದು ಸರಿಯಾದ ರೀತಿ ವಿಚಾರಣೆ ಮಾಡಬೇಕಿತ್ತು. ಆದರೆ ದೌರ್ಜನ್ಯ ನಡೆಸಿ ಆತನ ಸಾವಿಗೆ ಕಾರಣರಾಗಿದ್ದಾರೆ. ಈಗಾಗಲೇ ಕರಿಯಪ್ಪನ ಪ್ರಕರಣವನ್ನು ಸಿಓಡಿ ತನಿಖೆಗೆ ವಹಿಸಲಾಗಿದ್ದು, ಅಧಿಕಾರಿಗಳು ತುರ್ತಾಗಿ ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಾನೂನು ಕ್ರಮ ಜರುಗಿಸಬೇಕು ಎಂದು ಒತ್ತಾಯಿದರು.

ಈ ವೇಳೆ ನಂಜನಗೂಡು ಕಾಂಗ್ರೆಸ್ ಉಸ್ತುವಾರಿ ಸೋಮೇಶ್, ಜಿಪಂ ಮಾಜಿ ಸದಸ್ಯ ರವಿ, ಬಸವರಾಜು, ಆದಿವಾಸಿ ಮುಖಂಡರಾದ ವಿಜಯ್ ಕುಮಾರ್, ಚಿಕ್ಕಣ್ಣ, ಜಿಲ್ಲಾ ಕುರುಬ ಸಮಾಜದ ಅಧ್ಯಕ್ಷ ಶಿವಪ್ಪ ಕೋಟೆ, ಕೆ.ಎಂ.ನಾಗರಾಜು, ಕೋಟೆ ಸರಗೂರು ಯೂಥ್ ಕಾಂಗ್ರೆಸ್ ಅಧ್ಯಕ್ಷರಾದ ಹೋಂಡಾ ನಯಾಜ್, ಶಿವರಾಜು, ಪ್ರದೀಪ್, ಸುರೇಶ್, ಮಂಜು, ಶಂಕರ್ ಇದ್ದರು.

ಪಡಿತರ ಕೇಂದ್ರದ ಶೆಟರ್ ಮುರಿದು ಕಾಡಾನೆ ದಾಂಧಲೆ

ಸರಗೂರು, ಅ.18– ಕಾಡಾನೆ ಪಡಿತರ ವಿತರಣಾ ಕೇಂದ್ರದ ಶೆಟರ್ ಮುರಿದು ದಾಂಧಲೆ ನಡೆಸಿರುವ ಘಟನೆ ಸೋಮವಾರ ರಾತ್ರಿ ತಾಲೂಕಿನ ಮನುಗನಹಳ್ಳಿಯಲ್ಲಿ ನಡೆದಿದೆ.



ಗ್ರಾಮದ ಪದ್ಮಾಂಭ ಎಂಬುವರಿಗೆ ಸೇರಿದ ಪಡಿತರ ವಿತರಣಾ ಕೇಂದ್ರದ ಶೆಟರ್ ಮುರಿದು ಒಳನುಗ್ಗಿರುವ ಕಾಡಾನೆ ಸುಮಾರು 20 ಮೂಟೆ ರಾಗಿ ತಿಂದುಹಾಕಿದೆ. ಅಲ್ಲದೇ ಲ್ಯಾಪ್‌ಟಾಪ್ ಸೇರಿದಂತೆ ಇನ್ನಿತರ ಪರಿಕರಗಳನ್ನು ಧ್ವಂಸಗೊಳಿಸಿ ಪರಾರಿಯಾಗಿದೆ. ಇದರಿಂದ ಗ್ರಾಮಸ್ಥರು ಭಯಭೀತರಾಗಿದ್ದು, ಆನೆ ಹಾವಳಿ ತಪ್ಪಿಸುವಂತೆ ಆಗ್ರಹಿಸಿದ್ದಾರೆ.

ಈ ವೇಳೆ ಮಾತನಾಡಿದ ಗ್ರಾಮಸ್ಥರು, ಚಿಕ್ಕದೇವಮ್ಮನ ಬೆಟ್ಟದ ಕಡೆಯಿಂದ ಬಂದ ಕಾಡಾನೆ ದಾರಿಯುದ್ದಕ್ಕೂ ರೈತರು ಕಷ್ಟಪಟ್ಟು ಬೆಳೆದ ಫಸಲನ್ನು ತಿಂದು ತುಳಿದು ನಾಶಗೊಳಿಸಿದೆ. ಅಲ್ಲದೇ ಕಾಡುಪ್ರಾಣಿಗಳ ಹಾವಳಿ ತಪ್ಪಿಸಲು ಅಳವಡಿಸಿದ್ದ ಸೋಲಾರ್ ತಂತಿಬೇಲಿಯನ್ನು ಧ್ವಂಸಗೊಳಿಸಿದೆ. ಆಹಾರ ಅರಸಿ ಆಗಾಗ್ಗೆ ವನ್ಯಜೀವಿಗಳು ಗ್ರಾಮಕ್ಕೆ ನುಗ್ಗುತ್ತಿವೆ. ಇದರಿಂದ ಗ್ರಾಮದ ಜನ ಭಯಗೊಂಡಿದ್ದಾರೆ. ಕಾಡುಪ್ರಾಣಿಗಳು ಅರಣ್ಯ ಬಿಟ್ಟು ಹೊರಬರದಂತೆ ತಡೆಯುವಲ್ಲಿ ಅರಣ್ಯ ಇಲಾಖೆ ವಿಫಲವಾಗಿದೆ. ಹೀಗಾಗಿ ಅರಣ್ಯಾಧಿಕಾರಿಗಳು ಕಾಡುಪ್ರಾಣಿಗಳು ಗ್ರಾಮಗಳಿಗೆ ನುಗ್ಗುವುದನ್ನು ತಡೆಯಲು ಸೂಕ್ತ ಕ್ರಮ ಕೈಗೊಳ್ಳಬೇಕು ಎಂದು ಒತ್ತಾಯಿಸಿದರು.

ವಿಷಯ ತಿಳಿದು ಸ್ಥಳಕ್ಕಾಗಮಿಸಿದ ವಲಯ ಅರಣ್ಯಾಧಿಕಾರಿ ಮಧು ಮಹದೇವಯ್ಯ ಹಾಗೂ ಸಿಬ್ಬಂದಿ ವರ್ಗ, ಆಹಾರ ನಿರೀಕ್ಷಕರಾದ ವೇದಕುಮಾರ್, ಅನುಸೂಯ ಪರಿಶೀಲನೆ ನಡೆಸಿದರು. ಈ ಸಂಬಂಧ ಸರಗೂರು ಠಾಣೆಯಲ್ಲಿ ದೂರು ದಾಖಲಾಗಿದೆ.

ಸಿದ್ದರಾಮೋತ್ಸವದಿಂದ ವಾಪಸ್ಸಾಗುತ್ತಿದ್ದ ವೇಳೆ ಸಾವನ್ನಪ್ಪಿದ

ಫಸಿಯುದ್ದೀನ್ ಮನೆಗೆ ಶಾಸಕ ಜಮೀರ್ ಭೇಟಿ, ಸಾಂತ್ವನ

ಬೆಟ್ಟದಪುರ, ಅ.18– ದಾವಣಗೆರೆಯಲ್ಲಿ ನಡೆದ ಮಾಜಿ ಮುಖ್ಯಮಂತ್ರಿ ಸಿದ್ದರಾಮಯ್ಯನವರ ಅಮೃತ ಮಹೋತ್ಸವ ಕಾರ್ಯಕ್ರಮ ಮುಗಿಸಿಕೊಂಡು ವಾಪಸ್ಸಾಗುತ್ತಿದ್ದ ವೇಳೆ ರಸ್ತೆ ಅಪಘಾತದಲ್ಲಿ ಸಾವನ್ನಪ್ಪಿದ ಕಾಂಗ್ರೆಸ್ ಮುಖಂಡ ಫಸಿಯುದ್ದೀನ್ ಮನೆಗೆ ಶಾಸಕ ಜಮೀರ್ ಅಹಮ್ಮದ್ ಭೇಟಿ ನೀಡಿ, ಕುಟುಂಬದವರಿಗೆ ಸಾಂತ್ವನ ಹೇಳಿದರು.



ಪಿರಿಯಾಪಟ್ಟಣ ತಾಲೂಕಿನ ಹಲಗನಹಳ್ಳಿಗೆ ಭೇಟಿ ನೀಡಿದ ಅವರು ಫಸಿಯುದ್ದೀನ್ ಮನೆಗೆ ತೆರಳಿ ಕುಟುಂಬದವರಿಗೆ ಸಾಂತ್ವನ ಹೇಳಿ, ವೈಯಕ್ತಿಕವಾಗಿ 5 ಲಕ್ಷ ರೂ. ನೆರವು ನೀಡಿದರು.

ನಂತರ ಮಾತನಾಡಿದ ಅವರು, ಮೃತ ಫಸಿಯುದ್ದೀನ್ ಮನೆಗೆ ಮಾಜಿ ಸಿಎಂ ಸಿದ್ದರಾಮಯ್ಯ ಕೂಡ ಆಗಮಿಸಿ ಕುಟುಂಬದವರಿಗೆ ಸಾಂತ್ವನ ಹೇಳಿ, ಎಲ್ಲಾ ರೀತಿಯ ನೆರವು ನೀಡುವುದಾಗಿ ಭರವಸೆ ನೀಡಿದ್ದರು. ಅಲ್ಲದೇ ಸ್ಥಳೀಯ ನಾಯಕರಾದ ಮಾಜಿ ಶಾಸಕ ಕೆ.ವೆಂಕಟೇಶ್ ಕೂಡ ಮೃತರ ಕುಟುಂಬಕ್ಕೆ ಸಹಾಯ ಮಾಡಿದ್ದಾರೆ. ಸಿದ್ದರಾಮಯ್ಯನವರ ಆದೇಶದ ಮೇರೆಗೆ ಅವರ ಮಾತಿಗೆ ಬೆಲೆ ಕೊಟ್ಟು ನಾನು ಇಂದು ಗ್ರಾಮಕ್ಕೆ ಭೇಟಿ ನೀಡಿ ಸಾಂತ್ವನ ಹೇಳಿದ್ದೇನೆ ಎಂದ ಅವರು, ಇದೇ ವೇಳೆ ಫಸಿಯುದ್ದೀನ್ ಅವರ ಮಗನಿಗೆ ಬೆಂಗಳೂರು ಅಥವಾ ಮೈಸೂರಿನಲ್ಲಿ ಕೆಲಸ ಕೊಡಿಸುವ ಭರವಸೆ ನೀಡಿದರು.

ಈ ಸಂದರ್ಭ ಶಾಸಕ ಜಮೀರ್ ಅಪಘಾತದಲ್ಲಿ ತೀವ್ರ ಗಾಯಗೊಂಡಿದ್ದ ನಾಲ್ವರಿಗೆ ತಲಾ 50 ಸಾವಿರ ರೂ., ಸಣ್ಣಪುಟ್ಟ ಗಾಯಗೊಂಡ 6 ಮಂದಿಗೆ ತಲಾ 25 ಸಾವಿರ ರೂ. ನೆರವು ನೀಡಿದರು.

ಈ ವೇಳೆ ಮಾಜಿ ಶಾಸಕ ಕೆ.ವೆಂಕಟೇಶ್, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಮುಖಂಡರಾದ ನಿತಿನ್, ರಹಮತ್ ಜಾನ್ ಬಾಬು, ಅಬ್ದುಲ್, ತಾಲೂಕು ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಶಫಿ, ಜಾವೀದ್, ರಘು, ಮೋಹನ್, ಗ್ರಾಪಂ ಮಾಜಿ ಸದಸ್ಯ ಸೋಹಿಲ್ ಪಾಷಾ, ಜಾಮಿಯಾ ಮಸೀದಿ ಅಧ್ಯಕ್ಷ ನಫೀಸ್ ಖಾನ್, ನಾಸೀರ್ ಪಾಷಾ, ಶಂಕರೇಗೌಡ ಸೇರಿದಂತೆ ತಾಲೂಕಿನ ಕಾಂಗ್ರೆಸ್ ಮುಖಂಡರು ಹಾಗೂ ಗ್ರಾಮಸ್ಥರು ಇದ್ದರು.

ಕಡಕೊಳ ಬಳಿ ಹೊಳೆಯಂತಾದ ಹೆದ್ದಾರಿ

ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ವಾಹನ ಚಾಲಕರ ಹಿಡಿಶಾಪ



ಕಡಕೊಳ, ಅ.18– ಮೈಸೂರು ತಾಲೂಕಿನ ಕಡಕೊಳ ಬಳಿ ಹಾದು ಹೋಗಿರುವ ರಾಷ್ಟ್ರೀಯ ಹೆದ್ದಾರಿ ರೈಲ್ವೆ ಸೇತುವೆ ಕೆಳ ಭಾಗದಲ್ಲಿ ಅಪಾರ ಪ್ರಮಾಣದಲ್ಲಿ ಮಳೆ ನೀರು ಶೇಖರಣೆಯಾಗಿ ಸಂಚಾರ ಅಸ್ತವ್ಯಸ್ತವಾಗಿದೆ.

ನಿತ್ಯ ಈ ರಸ್ತೆಯಲ್ಲಿ ಸಾವಿರಾರು ವಾಹನಗಳು ಸಂಚರಿಸುತ್ತವೆ. ಕಡಕೊಳ ಗ್ರಾಮದ ಕೂಗಳತೆ ದೂರದಲ್ಲಿ ಟೋಲ್ ಕೇಂದ್ರವಿದ್ದು, ಹೆದ್ದಾರಿಯಲ್ಲಿ ಸಂಚರಿಸುವ ವಾಹನಗಳಿಂದ ಶುಲ್ಕ ವಸೂಲಿ ಮಾಡುತ್ತಾರೆ. ಶುಲ್ಕ ಪಡೆದ ಹೆದ್ದಾರಿ ಪ್ರಾಧಿಕಾರದವರು ರಸ್ತೆ ನಿರ್ವಹಣೆ ಮಾಡಬೇಕು. ಆದರೆ ಈ ಬಗ್ಗೆ ನಿರ್ಲಕ್ಷ್ಯ ವಹಿಸಿ ಪ್ರಯಾಣಿಕರ ಜೀವದ ಜೊತೆ ಚೆಲ್ಲಾಟವಾಡುತ್ತಿದ್ದಾರೆ ಎಂದು ಕನ್ನಡ ಗೆಳೆಯರ ಬಳಗದ ಸಂಚಾಲಕ ಕುಮಾರ ಸ್ವಾಮಿ ಆರೋಪಿಸಿದ್ದಾರೆ.

ಸದರಿ ರಸ್ತೆಯಲ್ಲಿ ದ್ವಿಚಕ್ರ ವಾಹನ ಸಂಚರಿಸುವುದು ಅಸಾಧ್ಯವಾಗಿದ್ದು, ಕಳೆದ ಮೂರ್ನಾಲ್ಕು ದಿನಗಳಿಂದ ಅಪಘಾತದ ಪ್ರಮಾಣ ಹೆಚ್ಚಾಗಿದೆ. ಈ ಬಗ್ಗೆ ಅಧಿಕಾರಿಗಳನ್ನು ಪ್ರಶ್ನಿಸಿದರೆ ಅವರಿಂದ ಯಾವುದೇ ಉತ್ತರವಿಲ್ಲ. ಯಾವ ಪುರುಷಾರ್ಥಕ್ಕೆ ರಾಷ್ಟ್ರೀಯ ಹೆದ್ದಾರಿ ನಿರ್ಮಾಣವಾಗಿದೆ ಎಂಬುದು ಯಕ್ಷ ಪ್ರಶ್ನೆಯಾಗಿದೆ. ಈ ಬಗ್ಗೆ ಟೋಲ್‌ನಲ್ಲಿ ವಿಚಾರಿಸಿದರೆ ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳನ್ನು ಸಂಪರ್ಕಿಸುವಂತೆ ತಿಳಿಸುತ್ತಾರೆ. ಒಟ್ಟಾರೆ ಪ್ರಯಾಣಿಕರ ಸ್ಥಿತಿ ತ್ರಿಶಂಕು ಸ್ಥಿತಿಯಾಗಿದೆ ಎಂದರು.

ಕೂಡಲೇ ಸಂಬಂಧಪಟ್ಟ ಅಧಿಕಾರಿಗಳು ಶೇಖರಣೆ ಗೊಂಡಿರುವ ನೀರನ್ನು ತೆರವುಗೊಳಿಸಿ ಸುಗಮ ಸಂಚಾರಕ್ಕೆ ಅನುವು ಮಾಡಿಕೊಡಬೇಕು. ಇಲ್ಲದಿದ್ದರೇ 'ವೈಕುಂಠಕ್ಕೆ ದಾರಿ ಎಂದು' ನಾಮಫಲಕ ಅನಾವರಣಗೊಳಿಸಿ ಪ್ರತಿಭಟನೆ ಮಾಡಬೇಕಾಗುತ್ತದೆ ಎಂದು ಹೆದ್ದಾರಿ ಪ್ರಾಧಿಕಾರದ ಅಧಿಕಾರಿಗಳನ್ನು ಎಚ್ಚರಿಸಿದ್ದಾರೆ.

ಮುನ್ಸೂಚನೆ ನೀಡದೆ ವಸತಿ ನಿಲಯಕ್ಕೆ ಬೀಗ

- ಅಂಬೇಡ್ಕರ್ ಸೇನೆ ಪದಾಧಿಕಾರಿಗಳ ಆರೋಪ
- ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾದರೆ ಮತ್ತೆ ಪುನಾರಂಭ: ಬಿಇಓ ಸ್ಪಷ್ಟನೆ

ನಂಜನಗೂಡು, ಅ.18– ಯಾವುದೇ ಮುನ್ಸೂಚನೆ ನೀಡದೆ ಕ್ಷೇತ್ರ ಶಿಕ್ಷಣಾಧಿಕಾರಿಗಳು ಕಸ್ತೂರ ಬಾ ಬಾಲಿಕ ವಸತಿ ನಿಲಯ ಮುಚ್ಚಿದ್ದಾರೆ ಎಂದು ಅಂಬೇಡ್ಕರ್ ಸೇನೆ ಪದಾಧಿಕಾರಿಗಳು ಆರೋಪಿಸಿದರು.

ನಗರದ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅಂಬೇಡ್ಕರ್ ಸೇನೆಯ ಬಾಲರಾಜು, 2016ರಲ್ಲಿ ನಗರದ ಸರ್ಕಾರಿ ನೌಕರರ ಸಂಘದ ಕಟ್ಟಡದಲ್ಲಿ ಪ್ರಾರಂಭವಾದ ಈ ವಸತಿ ನಿಲಯದಲ್ಲಿ 6 ರಿಂದ 10ನೇ ತರಗತಿವರೆಗೆ 34 ವಿದ್ಯಾರ್ಥಿಗಳು ಆಶ್ರಯ ಪಡೆದಿದ್ದರು. ಈ ವಸತಿ ನಿಲಯದಲ್ಲಿದ್ದ ವಿದ್ಯಾರ್ಥಿಗಳನ್ನು ಆದರ್ಶ ಶಾಲೆ ವಸತಿ ನಿಲಯಕ್ಕೆ ವರ್ಗಾವಣೆ ಮಾಡಿ ಕ್ಷೇತ್ರ ಶಿಕ್ಷಣಾಧಿಕಾರಿಗಳು ಸರ್ವಾಧಿಕಾರಿ ಧೋರಣೆ ಅನುಸರಿಸಿದ್ದಾರೆ. ಈ ಬಗ್ಗೆ ನಿಲಯ ಪಾಲಕರು ಡಿಡಿಪಿಐಗೆ ದೂರು ನೀಡಿದ್ದರೂ, ಯಾವುದೇ ಪ್ರಯೋಜನವಾಗಿಲ್ಲ. ಏಕಾಏಕಿ ವಸತಿ ನಿಲಯ ಮುಚ್ಚಿರುವುದು ಹಲವು ಅನುಮಾನಗಳಿಗೆ ಎಡೆಮಾಡಿಕೊಟ್ಟಿದೆ ಈ ಹಿಂದಿನ ಸಾಲಿನಲ್ಲಿ ಬಿಡುಗಡೆಯಾದ ಅನುದಾನ ದುರುಪಯೋಗವಾಗಿರಬಹುದು ಎಂಬ ಅನುಮಾನ ಕಾಡುತ್ತಿದೆ. ಈ ಬಗ್ಗೆ ಉನ್ನತಾಧಿಕಾರಿಗಳು ತನಿಖೆ ನಡೆಸಿ ಮುಚ್ಚಿರುವ ವಸತಿ ನಿಲಯ ಪುನರಾರಂಭಿಸಬೇಕು. ಇಲ್ಲವಾದಲ್ಲಿ ಉಗ್ರ ಹೋರಾಟ ನಡೆಸಲಾಗುವುದು ಎಂದು ಎಚ್ಚರಿಸಿದರು.

ಗೋಷ್ಠಿಯಲ್ಲಿ ಸ್ವಾಮಿ, ಜಿ.ಮಹದೇವಕುಮಾರ್, ರಾಜಶೇಖರ್, ರಂಗಸ್ವಾಮಿ, ಮಹದೇವಸ್ವಾಮಿ ಇದ್ದರು.



ವಸತಿ ನಿಲಯ ಮುಚ್ಚಿಲ್ಲ: ಕಸ್ತೂರ ಬಾ ವಸತಿ ನಿಲಯ ಮುಚ್ಚಿಲ್ಲ. ವಿದ್ಯಾರ್ಥಿಗಳ ಸಂಖ್ಯೆ ಹೆಚ್ಚಾದರೆ ಮತ್ತೆ ಪುರಂಭಿಸುತ್ತೇವೆ. ವಿದ್ಯಾರ್ಥಿ ನಿಲಯದಲ್ಲಿ 7 ವಿದ್ಯಾರ್ಥಿಗಳು ಇದ್ದ ಕಾರಣ ಸರ್ಕಾರದ ಬೊಕ್ಕಸಕ್ಕೆ ಆಗುವ ನಷ್ಟ ತಪ್ಪಿಸಲು ಬೇರೆ ವಸತಿ ನಿಲಯಕ್ಕೆ ಅವರನ್ನು ವರ್ಗಾವಣೆ ಮಾಡಿದ್ದೇವೆ ಎಂದು ಕ್ಷೇತ್ರ ಶಿಕ್ಷಣಾಧಿಕಾರಿ ಸಿ.ಎನ್.ರಾಜು ಸ್ಪಷ್ಟಪಡಿಸಿದರು. ಈ ಬಗ್ಗೆ 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, 2020–21ನೇ ಸಾಲಿನಲ್ಲಿದ್ದ 34 ಮಂದಿ ವಿದ್ಯಾರ್ಥಿನಿಯರ ಪೈಕಿ ಎಸ್‌ಎಸ್‌ಎಲ್‌ಸಿಯ 18 ಮಂದಿ ವಿದ್ಯಾರ್ಥಿಗಳು ತೇರ್ಗಡೆ ಹೊಂದಿದ್ದಾರೆ. ಈ ಸಾಲಿನಲ್ಲಿ 9 ಮಂದಿ ಎಸ್‌ಎಸ್‌ಎಲ್‌ಸಿ ವಿದ್ಯಾರ್ಥಿನಿಯರು ತೇರ್ಗಡೆ ಹೊಂದಿದ್ದು, ಹೊಸ ಸೇರ್ಪಡೆ ಇಲ್ಲದ ಕಾರಣ ಪ್ರಸ್ತುತ 7 ಮಂದಿ ವಿದ್ಯಾರ್ಥಿನಿಯರು ಮಾತ್ರ ಇದ್ದರು. ವಸತಿ ನಿಲಯದ ಬಾಡಿಗೆ ಸೇರಿದಂತೆ ಪ್ರತಿ ತಿಂಗಳು 1.5 ಲಕ್ಷ ರೂ. ಖರ್ಚು ಬರುತ್ತದೆ. ಸರ್ಕಾರಕ್ಕೆ ಈ ನಷ್ಟ ತಪ್ಪಿಸಲು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿ ಬೇರೊಂದು ವಸತಿ ನಿಲಯಕ್ಕೆ ವಿದ್ಯಾರ್ಥಿನಿಯರನ್ನು ವರ್ಗಾಯಿಸಿ ಆಶ್ರಯ ಕಲ್ಪಿಸಲಾಗಿದೆ. ಹೊಸ ವಿದ್ಯಾರ್ಥಿಗಳನ್ನು ವಸತಿ ನಿಲಯಕ್ಕೆ ಪ್ರವೇಶ ಮಾಡಿಕೊಳ್ಳುವಂತೆ ಎಲ್ಲೆಡೆ ಪ್ರಚಾರ ನಡೆಸಲಾಗಿದೆ. ಕನಿಷ್ಠ 20 ಮಂದಿ ವಿದ್ಯಾರ್ಥಿನಿಯರು ಬಂದಲ್ಲಿ ವಿದ್ಯಾರ್ಥಿ ನಿಲಯವನ್ನು ಪುನರಾರಂಭಿಸಲಾಗುವುದು ಎಂದು ಸ್ಪಷ್ಟನೆ ನೀಡಿದರು.

133 ಮಂದಿ ಬಲಿ ಪಡೆದ ಫುಟ್ಬಾಲ್ ಕ್ರೀಡಾಂಗಣ ನೆಲಸಮ

ಜಕಾರ್ತ, ಅ.18– ಈ ತಿಂಗಳ ಆರಂಭದಲ್ಲಿ ಸಂಭವಿಸಿದ ಕಾಲ್ತುಳಿತದಲ್ಲಿ 133 ಜನ ಸಾವನ್ನಪ್ಪಿದ ಇಂಡೋನೇಷ್ಯಾದ ಫುಟ್‌ಬಾಲ್ ಕ್ರೀಡಾಂಗಣವನ್ನು ನೆಲಸಮ ಮಾಡಿ ಮರುನಿರ್ಮಾಣ ಮಾಡಲಾಗುವುದು ಎಂದು ಇಂಡೋನೇಷ್ಯಾ ಅಧ್ಯಕ್ಷ ಜೊಕೊ ವಿಡೊಡೊ ಮಂಗಳವಾರ ಹೇಳಿದ್ದಾರೆ.

ಮಲಂಗ್‌ನಲ್ಲಿರುವ ಕಂಜುರುಹಾನ್ ಕ್ರೀಡಾಂಗಣವನ್ನು ನಾವು ಫೀಫಾ ಮಾನದಂಡಗಳ ಪ್ರಕಾರ ಕೆಡವುತ್ತೇವೆ ಮತ್ತು ಮರುನಿರ್ಮಾಣ ಮಾಡುತ್ತೇವೆ ಎಂದು ಫೀಫಾ ಅಧ್ಯಕ್ಷ ಗಿಯಾನಿ ಇನ್‌ಫಾಂಟಿನೊ ಅವರನ್ನು ಭೇಟಿಯಾದ ನಂತರ ಜೊಕೊ ವಿಡೊಡೊ ಅವರು ಸುದ್ದಿಗಾರರಿಗೆ ತಿಳಿಸಿದ್ದಾರೆ.

ಮಾದಾಪುರದಲ್ಲಿ ಕಲ್ಯಾಣಿ, ಉದ್ಯಾನವನ ಲೋಕಾರ್ಪಣೆ

ಗ್ರಾಪಂ ಕಾರ್ಯಕ್ಕೆ ರಾಷ್ಟ್ರ ಪ್ರಶಸ್ತಿ ನೀಡಬೇಕು: ಶಾಸಕ ಎಂ.ಅಶ್ವಿನ್ ಕುಮಾರ್ ಅಭಿಪ್ರಾಯ

ತಿ.ನರಸೀಪುರ, ಅ.18– ಮಹಾತ್ಮ ಗಾಂಧಿ ರಾಷ್ಟ್ರೀಯ ಉದ್ಯೋಗ ಖಾತ್ರಿ ಯೋಜನೆಯಡಿ ಕಲ್ಯಾಣಿ ಮತ್ತು ಉದ್ಯಾನವನ ನಿರ್ಮಿಸಿರುವ ಮಾದಾಪುರ ಗ್ರಾಪಂ ಕಾರ್ಯಕ್ಕೆ ರಾಷ್ಟ್ರ ಮಟ್ಟದ ಪ್ರಶಸ್ತಿ ನೀಡಬೇಕು ಎಂದು ಶಾಸಕ ಎಂ.ಅಶ್ವಿನ್ ಕುಮಾರ್ ಅಭಿಪ್ರಾಯಪಟ್ಟರು.

ತಾಲೂಕಿನ ಮಾದಾಪುರ ಗ್ರಾಮದ ಶ್ರೀಸಿದ್ದಪ್ಪಾಜಿ ದೇವಾಲಯದ ಬಳಿ ಗ್ರಾಪಂ ವತಿಯಿಂದ ನರೇಗಾ ಯೋಜನೆಯಡಿ ಸುಮಾರು 22 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ಕಲ್ಯಾಣಿ ಮತ್ತು ಉದ್ಯಾನವನ ಲೋಕಾರ್ಪಣೆ ಮಾಡಿ ಅವರು ಮಾತನಾಡಿದರು.





ಮಾದಾಪುರ ಗ್ರಾಪಂ ಸುಂದರವಾದ ಕಲ್ಯಾಣಿ ಮತ್ತು ಉದ್ಯಾನವನ ನಿರ್ಮಿಸಿ ರಾಜ್ಯಕ್ಕೆ ಮಾದರಿಯಾಗುವಂತಹ ಕಾರ್ಯ ಮಾಡಿದೆ. ನಮ್ಮ ಜಿಲ್ಲೆಯಲ್ಲಿ ಈ ರೀತಿಯ ಕೆಲಸ ಪ್ರಥಮವಾಗಿದ್ದು, ಪಂಚಾಯತಿ ಕಾರ್ಯಕ್ಕೆ ರಾಷ್ಟ್ರ ಮಟ್ಟದ ಪ್ರಶಸ್ತಿ ನೀಡಬೇಕು ಎಂದರು.

ಈ ಭವ್ಯವಾದ ಕಲ್ಯಾಣಿ ಮತ್ತು ಉದ್ಯಾನವನ ಮರುಡೇಶ್ವರ ದೇವಸ್ಥಾನಕ್ಕೆ ಬರುವ ಭಕ್ತರನ್ನು ಕೈಬೀಸಿ ಕರೆಯುವುದರಲ್ಲಿ ಯಾವುದೇ ಅನುಮಾನವಿಲ್ಲ. ಅಲ್ಲದೇ ಉದ್ಯಾನವನ ಪಕ್ಕದಲ್ಲಿರುವ ಸಿದ್ದಪ್ಪಾಜಿ ದೇವಾಲಯ ಪುರಾಣ ಪ್ರಸಿದ್ಧವಾಗಿದ್ದು ಭಕ್ತಿ ಭಾವದಲ್ಲಿ ಮಿಂದೇಳಲು ಒಳ್ಳೆಯ ಪ್ರಶಾಂತವಾದ ಪುಣ್ಯಸ್ಥಳವಾಗಿದೆ ಎಂದರು.


ಇದೇ ವೇಳೆ ಹಿರಿಯ ಆಗಮಿಕರಾದ ಪರಶಿವಮೂರ್ತಿ ನೇತೃತ್ವದಲ್ಲಿ ಶಾಸ್ತ್ರಿಗಳಾದ ಆರ್.ಮಂಜುನಾಥ್. ಎಸ್.ಉಮೇಶಪ್ಪ, ಅಭಿ, ಮಹೇಶ್ ಹೋಮ ಹವನ ನೆರವೇರಿಸಿದರು.

ಈ ವೇಳೆ ಗ್ರಾಪಂ ಅಧ್ಯಕ್ಷೆ ನಳಿನಿ, ಉಪಾಧ್ಯಕ್ಷ ಪ್ರದೀಪ್, ಜಿಪಂ ಮಾಜಿ ಸದಸ್ಯ ಜೈಪಾಲ್ ಭರಣಿ, ತಾಲೂಕು ಅಧ್ಯಕ್ಷ ಚಿನ್ನಸ್ವಾಮಿ, ಯುವ ಜನತಾದಳ ತಾಲೂಕು ಉಪಾಧ್ಯಕ್ಷ ನೀಲಸೋಗೆ ಮಹೇಶ್, ತಾಪಂ ಇಓ ಕೃಷ್ಣಕುಮಾರ್, ಪಿಡಿಓ ಕೆಂಪರಾಜು, ಇಂಜಿನಿಯರ್ ಲೋಕೇಶ್, ಮಾಜಿ ಅಧ್ಯಕ್ಷರಾದ ಸುಶೀಲ, ಚಂಡಿ ಪ್ರಕಾಶ್, ಹಿರಿಯೂರು ಸೋಮಣ್ಣ ಗ್ರಾಪಂ ಸದಸ್ಯರಾದ ಅಶೋಕ್, ಮಾಲತಿ, ಬಸವರಾಜು, ಸೋಸಲೆ ರಾಜೇಶ್, ರಾಜಣ್ಣ ಸೇರಿದಂತೆ ಇನ್ನಿತರರಿದ್ದರು.

ಬೆಳೆ ಜಲಾವೃತ: ಶಿರಮಳ್ಳಿಗೆ ಶಾಸಕರ ಭೇಟಿ, ಪರಿಶೀಲನೆ



ಮಲ್ಲುಂಡಿ, ಅ.18– ಇತ್ತೀಚೆಗೆ ಸುರಿದ ಭಾರೀ ಮಳೆಯಿಂದ ತಾಲೂಕಿನ ಶಿರಮಳ್ಳಿ ಗ್ರಾಮದಲ್ಲಿ 30 ಎಕರೆಯಲ್ಲಿ ಬೆಳೆದಿದ್ದ ಬೆಳೆ ಜಲಾವೃತಗೊಂಡಿದ್ದ ಹಿನ್ನೆಲೆಯಲ್ಲಿ ಶಾಸಕ ಬಿ.ಹರ್ಷವರ್ಧನ್ ಭೇಟಿ ನೀಡಿ, ಪರಿಶೀಲಿಸಿದರು. ನಂತರ ಮಾತನಾಡಿದ ಅವರು, ಇತ್ತೀಚೆಗೆ ಸುರಿದ ಭಾರೀ ಮಳೆಗೆ ಗ್ರಾಮದ ಕೆರೆ ಒಡೆದ ಪರಿಣಾಮ ಮಳೆ ನೀರು ನುಗ್ಗಿ 30 ಎಕರೆ ಪ್ರದೇಶದಲ್ಲಿ ಬೆಳೆಯಲಾಗಿದ್ದ ಭತ್ತ, ಕಬ್ಬು ಸೇರಿದಂತೆ ಇನ್ನಿತರ ಬೆಳೆಗಳು ನಾಶವಾಗಿವೆ. ರೈತರು ಆತಂಕಕ್ಕೆ ಒಳಗಾಗಬಾರದು. ಸರ್ಕಾರದಿಂದ ಸೂಕ್ತ ಪರಿಹಾರ ನೀಡಲು ಕ್ರಮ ಕೈಗೊಳ್ಳಲಾಗುವುದು ಎಂದು ಭರವಸೆ ನೀಡಿದರು. ಈ ವೇಳೆ ತಹಸೀಲ್ದಾರ್ ಶಿವಮೂರ್ತಿ, ಆರ್‌ಐ ಹರೀಶ್ ಸೇರಿದಂತೆ ಇನ್ನಿತರರಿದ್ದರು.



ಕಂಪಲಾಪುರ ಗ್ರಾಪಂನಲ್ಲಿ ಮಹರ್ಷಿ ವಾಲ್ಮೀಕಿ ಜಯಂತಿ ಆಚರಿಸಲಾಯಿತು. ಈ ವೇಳೆ ಅಧ್ಯಕ್ಷೆ ಮಮತ, ಕಾರ್ಯದರ್ಶಿ ಆರ್.ಪಿ.ಸುಷ್ಮಾ, ಸದಸ್ಯರಾದ ರಾಣಿ, ಶೀಲಾ, ಕವಿತಾ, ಸಿಬ್ಬಂದಿ ವೆಂಕಟೇಶ್, ಮಂಜುಳಾ ಹಾಜರಿದ್ದರು.



ತಿ.ನರಸೀಪುರದ ಹೊಸ ತಿರುಮಕೂಡಲಿನಲ್ಲಿರುವ ವಾಲ್ಮೀಕಿ ಪುರುಷರ ಸ್ವಸಹಾಯ ಸಂಘದಿಂದ ನಿವೃತ್ತ ನೌಕರ ಅಭಿವೃದ್ಧಿ ಅಧಿಕಾರಿ ಮಹದೇವನಾಯಕ, ಕೆಎಸ್‌ಐಸಿ ಸಿದ್ದಪ್ಪ, ನೀರಾವರಿ ಇಲಾಖೆ ಪುಟ್ಟಮಾದು ಅವರನ್ನು ಸನ್ಮಾನಿಸಲಾಯಿತು. ಸಂಘದ ಅಧ್ಯಕ್ಷ ಬಾಳೆಮಂಡಿ ರಮೇಶ್, ಕಾರ್ಯದರ್ಶಿ ಚಂದ್ರಶೇಖರ್, ಗ್ರಾಪಂ ಮಾಜಿ ಉಪಾಧ್ಯಕ್ಷ ಪುಟ್ಟು, ನಿರ್ದೇಶಕರಾದ ಮಹದೇವ್, ಶೇಖರ್ ಮತ್ತಿತರರಿದ್ದರು.

ಭಾವಪೂರ್ಣ ಶ್ರದ್ಧಾಂಜಲಿ



#293, S.B.M. ಬಡಾವಣೆ, 3ನೇ ಮುಖ್ಯರಸ್ತೆ, C. ಬ್ಲಾಕ್, ರೂಪಾನಗರ, ಮೈಸೂರು. ಇವರ

ಉತ್ತರಕ್ರಿಯೆ ಕಾರ್ಯವು

ದಿನಾಂಕ: 19-10-2022ರ ಬುಧವಾರ ಏರ್ಪಡಿಸಿದ್ದು, ಬೆಳಗ್ಗೆ 10 ರಿಂದ 12:00 ಗಂಟೆ ವರೆಗೆ ಸಮಾಧಿ ಪೂಜೆ, ಮೈಸೂರಿನ ಆರಬಿಂದ ನಗರದಲ್ಲಿರುವ R.M.P. ಕ್ವಾಟ್ರಸ್ ಹಿಂಭಾಗದಲ್ಲಿರುವ ರುದ್ರ ಭೂಮಿಯಲ್ಲಿ ನೆರವೇರಿಸಲಾಗುತ್ತದೆ. ಮಧ್ಯಾಹ್ನ 2-00 ಗಂಟೆಗೆ ಮೃತರ ಸ್ವಗೃಹದಲ್ಲಿ ಉತ್ತರ ಕ್ರಿಯೆ ಹಾಗೂ ಭೋಜನ ಏರ್ಪಡಿಸಲಾಗಿದೆ. ಬಂಧುಗಳು ಸಕಾಲಕ್ಕೆ ಆಗಮಿಸಿ, ಈ ಕಾರ್ಯಗಳಲ್ಲಿ ಭಾಗಿಯಾಗಿ ಮೃತರ ಆತ್ಮಕ್ಕೆ ಶಾಂತಿ ಕೋರಬೇಕಾಗಿ ಸವಿನಯ ಪ್ರಾರ್ಥನೆ.

ಶ್ರೀಯುತ ಜಿತೇಂದ್ರಕುಮಾರ್ ಎಂ.

ನಿಧನ: 8-10-2022

ದುಃಖತಪ್ತರು: ಶ್ರೀಮತಿ ಉಷಾ, ಮಲ್ಲಿಕಾರ್ಜುನ ಎಂ. ಮತ್ತು ಕುಟುಂಬಸ್ಥರು ಹಾಗೂ ಬಂಧು ಮಿತ್ರರು.

ನಿಮ್ಮ ಹಳೆಯ ಹಾಸಿಗೆ ಹತ್ತಿಯನ್ನು

ವಿದ್ಯುತ್ ಚಾಲಿತ ಯಂತ್ರದಿಂದ ಶುದ್ಧೀಕರಿಸಿ ನೂತನ ಹಾಸಿಗೆಯನ್ನು ತಯಾರಿಸಿಕೊಡುತ್ತೇವೆ.

ಸೂ: ನಿಮ್ಮ ಮನೆಯಿಂದ ಪಡೆಯುವುದು ಮತ್ತು ತಲುಪಿಸುವುದು ಉಚಿತ.

ಬಾಹುಸಾರ್ ಟ್ರೇಡಿಂಗ್ ಕಂ.

ನಂ.50, ಡಿ. ದೇವರಾಜ ಅರಸು ರಸ್ತೆ, ಮೈಸೂರು

9448062224, 0821-2427224

FOR RENT

SPACE AVAILABLE FOR COACHING CENTRE IN JANATHANAGAR, MYSORE

Ph no: 9481388023

MAHAJANA EDUCATION SOCIETY (REGD.)

SBRR Mahajana First Grade College (Autonomous)

Affiliated to the University of Mysore
Re-Accredited by NAAC with "A" Grade
Recognized as "College with Potential for Excellence by UGC"
Jayalakshmipuram, Mysore – 570 012, Karnataka, India

TENDER NOTIFICATION No.SBRR/MFGC/Autonomy/1140/01/2022-2023

Date: 17-10-2022

Sealed Tenders are invited from authorized tenderers/manufacturers/dealers/distributors for the supply of the following Equipments/Material Installation at our college, under UGC-Autonomy Grants.

SL No.	Particulars of Items	Estimated Cost	EMD Amount Rs.	Cost of Tender Documents
1.	Smart Board-Interactive flat Panel	1,20,000.00	4,812.00	500/- (non refundable) (Add Rs.200/- for Postage)
2.	Branded Computer System with OS	55,000.00		
3.	Multifunctional LaserJet Printer with Scan/Copy	17,500.00		

Last Date of Issue of Tender Documents : Up to 5.00pm of 31-10-2022
Last Date of receipt of filled and sealed Tender forms : Up to 5.00pm of 10-11-2022
Date of Time of Opening Tenders : 12:30 am on 14-11-2022

Tender documents can be obtained in person from Accounts Section on all the working days from 10.30 am to 5.00 pm on cash payment. Those who intend to obtain the Tender Documents by post should write to the undersigned enclosed with Demand Draft for the cost of Tender drawn in favor of the Principal, Mahajana First Grade College (Autonomous), Mysore. The Principal, Mahajana First Grade College (Autonomous), Mysore, reserves the right to accept in full or in part or reject all or any Tender without assigning any reasons whatsoever and no correspondence will be entertained in this regard.

For further details contact: 0821-2512065

(Dr. B.R. Jayakumari)
Principal

2ನೇ ವರ್ಷದ ಸವಿನೆನಪು



ಕೆ.ವಿ.ಪ್ರಕಾಶ್‌ಗೌಡರು

ನಿಮ್ಮ ನೆನಪಿನಲ್ಲಿರುವವರು : ಪತ್ನಿ ನಾಗರತ್ನಮ್ಮ, ಮಕ್ಕಳು, ಸೊಸೆಯಂದಿರು, ಅಳಿಯ, ಮೊಮ್ಮಕ್ಕಳು, ಬಂಧುಮಿತ್ರರು. ದಿ|| ಯಾ.ವಿಷಕಂಠೇಗೌಡರ ಕುಟುಂಬ, ದೇಪಸಿ ರಾಮೇಗೌಡರ ಕುಟುಂಬ

ಬೇಕಾಗಿದ್ದಾರೆ

ಪ್ರತಿಷ್ಠಿತ ಕೈಗಾರಿಕ ಕಂಪನಿಯ ಕ್ಯಾಂಟೀನ್‌ನಲ್ಲಿ ಹುಡುಗರು ಮತ್ತು ಟೀ ಸಪ್ಲೇಯರ್ ಬೇಕಾಗಿದ್ದಾರೆ.

7892573043

WANTED

- **MARKETING MANAGER - 2 Nos.** Qualification MBA with minimum 2 year experience
- **Asst Marketing Manager - 2 Nos.** Any Degree with 1-2 year experience
- **Marketing Executive - 3 Nos.** Any Degree (Freshers can also apply)

Call : 73384 54565 / 98451 11459
Email : sales@eaglesolar.co

HERITAGE HOMES

MYSURU - HUNSUR HIGHWAY, MYSORE

MEGA RESIDENTIAL TOWNSHIP

ನಿಮ್ಮ ಕನಸಿನ ನಿವೇಶನ ನಿಮ್ಮ ಕೈಗೆಟುಕುವ ಬೆಲೆಯಲ್ಲಿ



30x40 | 30x50 | 40x60 | 50x80

MUDA LIMITS

ಅಲತೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಂಡಿರುವ ನಿವೇಶನಗಳು

ಕೇವಲ 550/- ಪ್ರತಿ ಚದರ ಅಡಿ

ಸುಲಭ 4 ಕಂತುಗಳ ಸೌಲಭ್ಯವಿದೆ ಕೆಲವೇ ಸೈಟ್‌ಗಳು ಮಾತ್ರ ಲಭ್ಯ

ಅಧ್ವಿಕಾ ವೆಂಚರ್ಸ್

9071386615, 9513301854

FLAT - DIWALI SPECIAL - OFFER FAIR

U.P. Artisan's Present New WOODEN-HANDCARVED ಪೀಠೋಪಕರಣಗಳು

30% OFF + 20% OFF

BUY Any 1 Item - Flat 30% Discount
BUY Any 2 Item + Get 10% Extra Discount
BUY Any 3 Item + Get 20% Extra Discount

EXCHANGE YOUR OLD FURNITURE & BUY NEW FURNITURE & GET 20% EXTRA

OFFER 24th OCT - 2022

ALL DEBIT & CREDIT CARDS ACCEPTED



DOOR DELIVERY 30KMS BIG ITEMS - FREE

SUNDAYS ALSO OPEN

100% TEAK WOOD ASSURED

ಸ್ಥಳ: ರಾಜ್ಯ ಸರ್ಕಾರಿ ನೌಕರರ ಸಂಘದ ಕಟ್ಟಡ ಪಾರ್ತಾ ಭವನದ ಹತ್ತಿರ, ಜೆ.ಕೆ.ಗ್ರೌಂಡ್ ಎದುರು, ದಾಸಪ್ಪ ವೃತ್ತದ ಹತ್ತಿರ, ಧನವಂತ್ರಿ ರಸ್ತೆ, ಮೈಸೂರು.



ಕರ್ನಾಟಕ ಸರ್ಕಾರ

ಲೋಕೋಪಯೋಗಿ ಇಲಾಖೆ

ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಮೈಸೂರು ವಿಭಾಗ, ಮೈಸೂರು.

www:eemys@kpwd.gov.in ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 0821-2420810

ಕೆಳಗೆ ಸೂಚಿಸಿರುವ ಅಲ್ಪಾವಧಿ ಐಟಂವಾರು ಟೆಂಡರ್ ಪ್ರಕಟಣೆಗಳ ಅಧಿಸೂಚನೆ ದಿನಾಂಕ: 17.10.2022

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ರವರಿಂದ ಈ ವಿಭಾಗ ವ್ಯಾಪ್ತಿಯ ಈ ಕೆಳಗಿನಂತೆ ಅಲ್ಪಾವಧಿ ಐಟಂವಾರು ಟೆಂಡರ್ ಪ್ರಕಟಣೆಯನ್ನು ಹೊರಡಿಸಲಾಗಿದೆ. ಇ-ಪ್ರೊಕ್ಯೂರ್‌ಮೆಂಟ್‌ನಲ್ಲಿ ನೊಂದಾಯಿಸಿರುವ 4ನೇ ದರ್ಜೆ ಹಾಗೂ ಮೇಲ್ಪಟ್ಟ ಗುತ್ತಿಗೆದಾರರು ಭಾಗವಹಿಸಬಹುದು. ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ (http://eproc.karnataka.gov.in) ದಿ:27.10.2022 ಸಂಜೆ 4:00ರವರೆಗೆ ಈ ಕೆಳಗಿನಂತೆ ಸಲ್ಲಿಸಬಹುದಾಗಿರುತ್ತದೆ. ಟೆಂಡರ್‌ಗಿಟ್ಟ ಮೊತ್ತರೂ. 10.00 ಲಕ್ಷಗಳು ಇ.ಎಂ.ಡಿ ರೂ.0.13 ಲಕ್ಷಗಳಾಗಿರುತ್ತದೆ. ಕಾಮಗಾರಿಗಳಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಈ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದಾಗಿದ್ದು, ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಕ್ರಮ ಸಂಖ್ಯೆ	ಟೆಂಡರ್ ಪ್ರಕಟಣೆ ಸಂಖ್ಯೆ	ಟೆಂಡರ್ ಪ್ರಕಟಣೆಯಲ್ಲಿನ ಕಾಮಗಾರಿಗಳ ಕ್ರಮ ಸಂಖ್ಯೆ	ಕರೆಯ/ಕಾರಿಗೆಂಡಂ ಸಂಖ್ಯೆ	ಗುತ್ತಿಗೆದಾರರ ಅರ್ಹತೆ	ಕೊನೆಯ ದಿನಾಂಕ
1.	13/2022-23	10	2ನೇ ಕರೆ	4ನೇ ದರ್ಜೆ&ಮೇಲ್ಪಟ್ಟು	27.10.2022

ಕಾರ್ಯಪಾಲಕ ಇಂಜಿನಿಯರ್,
ಲೋಕೋಪಯೋಗಿ ಇಲಾಖೆ,
ಮೈಸೂರು ವಿಭಾಗ, ಮೈಸೂರು.

FOR ADVERTISEMENT

STAR OF MYSORE Please Call: 0821-2496522 / 23 Email: ad@starofmysore.com

ಮೈಸೂರು ಮಿತ್ರ Please Call: 0821-2496522 / 23 Email: ad@mysurumithra.com

---

WANTED

OPERATORS - 30 POSTS

SSLC Pass / Fail or PUC Pass / Fail,
Age below 35 years
Walk-in with Biodata, Marks card, Aadhar and Bank Passbook between
10.00am to 12.30pm and 2.00pm to 4.30pm

EXCEL-PAR ELECTRONICS PRIVATE LIMITED

292/B, Hebbal Industrial area, Mysore-570 016
Ph : +91 821 4253929 / 98441 57111



ಕರ್ನಾಟಕ ಸರ್ಕಾರ

ಅರಣ್ಯ ಇಲಾಖೆ

ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಮೈಸೂರು ವಿಭಾಗ, ಮೈಸೂರು

ಸಂ:ಬಿ1/ಬಿಯುಡಿ/ಟೆಂಡರ್/ಸಿಆರ್-10/2022-23 ದಿನಾಂಕ: 15.10.2022


ಸಂಕ್ಷಿಪ್ತ ಅಲ್ಪಾವಧಿ ಮರು ಟೆಂಡರ್ ಪ್ರಕಟಣೆ (ಇ-ಪ್ರೊಕ್ಯೂರ್‌ಮೆಂಟ್ ವೇದಿಕೆ)

2022-23ನೇ ಕರ್ನಾಟಕ ರಾಜ್ಯದ ಮೈಸೂರು ಜಿಲ್ಲೆಯ ಮೈಸೂರು ಅರಣ್ಯ ವಿಭಾಗದ ನಂಜನಗೂಡು ವಲಯಗಳಲ್ಲಿ ಬಸವೇಶ್ವರ ಸಸ್ಯಕ್ಷೇತ್ರದಲ್ಲಿ ಸಸ್ಯೋದ್ಯಾನದ ಅಭಿವೃದ್ಧಿ ಪಡಿಸುವ ಕಾಮಗಾರಿಗಳನ್ನು ನಿರ್ವಹಿಸಲು ಗುತ್ತಿಗೆದಾರರ ಮುಖಾಂತರ ಅನುಷ್ಠಾನಗೊಳಿಸಲು ಇ-ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ ಟೆಂಡರ್ ಆಹ್ವಾನಿಸಿದ್ದು, ವಿವರ ಈ ಕೆಳಕಂಡಂತಿರುತ್ತದೆ.

1. ಗುತ್ತಿಗೆದಾರರು http://eproc.karnataka.gov.in ಅಂತರ್ಜಾಲದ ಮೂಲಕ ಟೆಂಡರಿನಲ್ಲಿ ಭಾಗವಹಿಸಬಹುದು. 2. ಒಟ್ಟು ಟೆಂಡರ್‌ಗಿಟ್ಟಿರುವ ಕಾಮಗಾರಿಗಳ ಸಂಖ್ಯೆ-04 3. ಕಾಮಗಾರಿಗೆ ಪ್ರವೇಶ ದ್ವಾರ ಮತ್ತು ಆರ್ಚ್ ನಿರ್ಮಾಣಕ್ಕೆ ರೂ.6.500 ಲಕ್ಷಗಳು, ಪರಗೋಲ ನಿರ್ಮಾಣಕ್ಕೆ 2 ಕ್ಕೆ ತಲಾ ರೂ.6.00 ಲಕ್ಷಗಳು ಹಾಗೂ ಮಹಿಳಾ ಮತ್ತು ಪುರುಷರ ಶೌಚಾಲಯ ನಿರ್ಮಾಣಕ್ಕೆ ರೂ.6.00 ಲಕ್ಷಗಳು 4. ಕಾಮಗಾರಿಯ ಇ.ಎಂ.ಡಿ ಮೊತ್ತ ಕ್ರಮವಾಗಿ ಪ್ರವೇಶ ದ್ವಾರ ಮತ್ತು ಆರ್ಚ್ ನಿರ್ಮಾಣಕ್ಕೆ ರೂ.0.165 ಲಕ್ಷಗಳು, ಪರಗೋಲ ನಿರ್ಮಾಣಕ್ಕೆ 2 ಕ್ಕೆ ತಲಾ ರೂ.0.150 ಲಕ್ಷ ಹಾಗೂ ಮಹಿಳಾ ಮತ್ತು ಪುರುಷರ ಶೌಚಾಲಯ ನಿರ್ಮಾಣಕ್ಕೆ ರೂ.0.150 ಲಕ್ಷಗಳು, 5. ಟೆಂಡರ್ ಷರತ್ತುಗಳ ಕುರಿತಾದ ಸ್ಪಷ್ಟೀಕರಣ ಕೇಳಲು ಕೊನೆಯ ದಿನಾಂಕ 25.10.2022 ಅಪರಾಹ್ನ 12:00 ಘಂಟೆವರೆಗೆ. 6. ಗುತ್ತಿಗೆದಾರರು ಅಂತರ್ಜಾಲದ ಮೂಲಕ ಇ-ಪ್ರೊಕ್ಯೂರ್‌ಮೆಂಟ್ ವೇದಿಕೆಯಲ್ಲಿ ತಾಂತ್ರಿಕ ಮತ್ತು ಆರ್ಥಿಕ ಬಿಡ್ಡುಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 25.10.2022 ಸಂಜೆ 4.00 ಘಂಟೆವರೆಗೆ, 7. ತಾಂತ್ರಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ: 27.10,2022 ಸಂಜೆ 4.00 ಘಂಟೆ ನಂತರ, 8. ಆರ್ಥಿಕ ಬಿಡ್ಡುಗಳನ್ನು ತೆರೆಯುವ ದಿನಾಂಕ: 29.10,2022 ಸಂಜೆ 400 ಘಂಟೆ. 9. ಹೆಚ್ಚಿನ ವಿವರಗಳಿಗಾಗಿ http://eproc.karnataka.gov.in ಅಂತರ್ಜಾಲ ಅಥವಾ ಈ ಕಛೇರಿಯ ದೂರವಾಣಿ ಸಂಖ್ಯೆ: 0821-2483853ನ್ನು ಕೆಲಸದ ದಿನಗಳಲ್ಲಿ ಸಂಪರ್ಕಿಸುವುದು. 10. ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ, ಮಾರ್ಪಾಡು ಅಥವಾ ಇತರ ಬದಲಾವಣೆಗಳಿದ್ದಲ್ಲಿ http://eproc.karnataka.gov.in ವೆಬ್‌ಸೈಟ್‌ನಲ್ಲಿ ಪ್ರಚಾರಪಡಿಸಲಾಗುವುದು.

ಸಹಿ/-
ಉಪ ಅರಣ್ಯ ಸಂರಕ್ಷಣಾಧಿಕಾರಿ,
ಮೈಸೂರು ವಿಭಾಗ, ಮೈಸೂರು

ವಾಸಾಸಂಇ/ಮೈಸೂರು/ಶಿರಡಿ ಸಾಯಿ/569/2022-23



MUDA APPROVED SITE FOR SALE

Near Christ School, BOGADI

Call: 90719 66999

ಬೇಕಾಗಿದ್ದಾರೆ

ಆಟೋಮ್ಯಾಟಿಕ್ ಕಾರಿಗೆ ಚಾಲಕ (ವೈಯಕ್ತಿಕ) ಬೇಕಾಗಿದ್ದಾರೆ ಬೆಳಿಗ್ಗೆ 8 ರಿಂದ ರಾತ್ರಿ 8 ವೇತನ 15000/-, ವಾರದ ರಜೆ + ಊಟ + ವಸತಿ + ಓಟಿ ಸೌಲಭ್ಯ ಬನ್ನಿಮಂಟಪ. ಸಂಪರ್ಕಿಸಿ

9380098123

ಸಾರ್ವಜನಿಕ ಪ್ರಕಟಣೆ

ಮಂಡ್ಯ ಜಿಲ್ಲೆ, ಪಾಂಡವಪುರ ತಾಲ್ಲೂಕು, ರಾಜಕುಮಾರ್ ಸರ್ಕಲ್, ಮಂಡ್ಯ ರಸ್ತೆ, ಪಾಂಡವಪುರ ಟೌನ್‌ನಲ್ಲಿ ವಾಸವಾಗಿರುವ ಪಿ.ಎನ್.ಉಮಾಶಂಕರ್ ರವರ ಧರ್ಮಪತ್ನಿಯಾದ ಶ್ರೀಮತಿ ಬಿ.ಆರ್.ಲಲಿತ ಆದ ನಾನು ಈ ಮೂಲಕ ಹೇಳುವುದೇನೆಂದರೆ, ದಿನಾಂಕ: 11-10-1996 ರಂದು ನಮ್ಮ ಕುಟುಂಬದ ಸದಸ್ಯರುಗಳ ನಡುವೆ ದಾವಾ ಷೆಡ್ಯೂಲ್ ಸ್ವತ್ತಿಗೆ ಸಂಬಂಧಿಸಿದಂತೆ ಒಂದು ಹಕ್ಕು ಖುಲಾಸೆ ಪತ್ರವನ್ನು ನನ್ನ ಹೆಸರಿಗೆ ಸದರಿ ಪತ್ರವನ್ನು ನೋಂದಣಿ ಮಾಡಿಸಿದ್ದು, ಸದರಿ ಹಕ್ಕು ಖುಲಾಸೆ ಪತ್ರವು ಇತ್ತೀಚೆಗೆ ನಮ್ಮ ಮನೆಯಲ್ಲಿ ಸ್ವಚ್ಛತಾ ಕಾರ್ಯ ಮಾಡುವಂತಹ ಸಂದರ್ಭದಲ್ಲಿ ಕಳೆದುಹೋಗಿರುತ್ತದೆ. ಸದರಿ ಹಕ್ಕು ಖುಲಾಸೆ ಪತ್ರವು ಕಳೆದುಹೋದ ಬಗ್ಗೆ ನಾನು ಪಾಂಡವಪುರ ಪೊಲೀಸ್ ಠಾಣೆಯಲ್ಲಿ ದಿನಾಂಕ: 26-09-2022 ರಂದು ದಾವಾ ಷೆಡ್ಯೂಲ್ ನಂ. ಅಸೆಸ್‌ಮೆಂಟ್ ನಂ.4132 ರ ಖುಲಾಸೆ ಪತ್ರವು ಕಳೆದುಹೋದ ಬಗ್ಗೆ ಫಿರ್ಯಾದನ್ನು ನೀಡಿದ್ದು, ಸದರಿ ಫಿರ್ಯಾದಿಗೆ ಸಂಬಂಧಿಸಿದಂತೆ ಪಾಂಡವಪುರ ಪೊಲೀಸ್ ಠಾಣೆಯವರು ಸದರಿ ದಾಖಲಾತಿಗೆ ಸಂಬಂಧ ತಪಾಸಣೆ ಮಾಡಿದ್ದು, ಸದರಿ ದಾಖಲೆ ಲಭ್ಯವಿಲ್ಲವೆಂದು ಒಂದು ಸ್ವೀಕೃತಿಯನ್ನು ದಿನಾಂಕ: 26-09-2022 ರಂದು ನೀಡಿರುತ್ತಾರೆ. ಸದರಿ ಸ್ವೀಕೃತಿಯ ಅನುಸಾರ ಮೂಲ ಹಕ್ಕು ಖುಲಾಸೆ ಪತ್ರವು ಕಳೆದು ಹೋಗಿರುತ್ತದೆ. ಎಂದು ಈ ಮೂಲಕ ಪ್ರಕಟಣೆಯನ್ನು ನೀಡಿರುತ್ತೇನೆ. ಸಿಕ್ಕವರು ಸಂಪರ್ಕಿಸಿ. ಮೊ.: 9008751249

ಸಹಿ/- ಹೆಚ್.ಎನ್.ಗಿರಿಜಾಂಬಿಕೆ
ವಕೀಲರು, ಮಂಡ್ಯ

ದೀಪಾವಳಿ ಹಬ್ಬದ ಪ್ರಯುಕ್ತ

ಸೀರೆಗಳ ಮಾರಾಟ



- ಚಾರ್ಜೆಟ್ ಸೀರೆಗಳು
- ಪೂನಂ ಸೀರೆಗಳು
- ಝರಿ ಬಾರ್ಡರ್ ಸೀರೆಗಳು
- ಪ್ಲೇನ್ ಸೀರೆಗಳು

ಮಾರಾಟ ಕೆಲವೇ ದಿನಗಳು ಮಾತ್ರ

ಯಾವುದೇ ಸೀರೆಗಳನ್ನು ಖರೀದಿಸಿ ಕೇವಲ ರೂ. 150/-

ಕ್ರೇಪ್ ಸಿಲ್ಕ್ ಸೀರೆಗಳು ಕೇವಲ ರೂ. 200/- ಮಾತ್ರ

ಸ್ಥಳ : ಇನ್ಸ್‌ಟ್ಯೂಷನ್ ಆಫ್ ಇಂಜಿನಿಯರ್ಸ್
ಮುಡಾ ಕಛೇರಿ ಪಕ್ಕದಲ್ಲಿ, ಜೆಎಲ್‌ಬಿ ರಸ್ತೆ, ಮೈಸೂರು-05